ಮಕ್ಕಳ ಸಾಹಿತ್ಯ ಮಾಲೆ

# ನಾಟಕಗಳು

ಭಾಗ- ೧

ಸಂಪಾದಕ : ಬೊಳುವಾರು ಮಹಮದ್ ಕುಂಞಿ



ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

# ಹನ್ನೆರಡು ಮಕ್ಕಳ ನಾಟಕಗಳು

(ಸಂಪುಟ – ೧)

ಸಂಪಾದಕರು

**ಬೊಳುವಾರು ಮಹಮದ್ ಕುಂಞಿ**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು–೫೬೦ ೦೦೨

**HANNERADU MAKKALA NATAKAGALU - (VOLUME - 1)** A collection Childrens' Plays, Edited by Bolwar Mahamad Kunhi, Senior Manager (Publicity) SyndicateBank, Corporate Office, Bangalore *and Published by* Mallikarjuna Swamy V.N., Administrative Officer, **Kannada Pustaka Pradhikara,** Kannada Bhavan, J.C. Road, Bangalore - 560 002.

First Impression: 2006
Pages: viii + 132
**Price: Rs.60/-**

ISBN: 817713-196-6
Copies: 1,000

© : Respective Writers

ಸಂಪಾದಕ ಮಂಡಲಿ

ಪ್ರಧಾನ ಸಂಪಾದಕರು : ಪ್ರೊ. ಎಸ್. ಜಿ. ಸಿದ್ಧರಾಮಯ್ಯ

ಸಂಪಾದಕರು : ಬೊಳುವಾರು ಮಹಮದ್ ಕುಂಞಿ

ಸದಸ್ಯರು : ಕಂಚ್ಯಾಣಿ ಶರಣಪ್ಪ
ಬಳಿಗೆರೆ ಕೃಷ್ಣಮೂರ್ತಿ
ಶರಣಮ್ಮ ಗೊರೆಬಾಳ

*Cover Page :* **Pa. Sa. Kumar**

*Type setting at* **ILA Mudrana**, No. 36, 40 Feet Road, Raghava nagar, Bangalore - 560 026.

*Printed at* **Sreeranga Printers (P) Ltd.**# 517, Samudragupta Maurya Road, Bhavani Nagar, Bangalore - 560 019, Phone: 080-26524757, 26679333 E-mail: sreerangaprinters@yahoo.co.in

# ಹಣತೆ ಹಚ್ಚುತ್ತೇವೆ

ಆಡಿಬಾ ನನ ಕಂದ ಅಂಗಾಲ ತೊಳೆದೇನು
ತೆಂಗಿನಕಾಯಿ ತಿಳಿನೀರ ತಕ್ಕೊಂಡು ನಿನ್ನ
ಬಂಗಾರ ಮೋರೆ ತೊಳೆದೇನು

ಬಾಲ್ಯವೆಂಬುದು ಮಗುವಿನ ಬೆಳವಣಿಗೆಯಲ್ಲಿ ಪವಿತ್ರವಾದ ಹಾಗೂ ಅಮೂಲ್ಯವಾದ ಅನುಭವ ವಿಶೇಷ. ಮನೋವಿಜ್ಞಾನಿಗಳ ಪ್ರಕಾರ ಮಕ್ಕಳ ಲೋಕ ಗ್ರಹಿಕೆ ಸುಮಾರು ನಾಲ್ಕೈದು ವರ್ಷಗಳಿಂದ ಮೊದಲ್ಗೊಂಡು ಹದಿನಾಲ್ಕು ಹದಿನೈದು ವರ್ಷಗಳ ಅವಧಿಯಲ್ಲಿ ತುಂಬ ತೀಕ್ಷ್ಣ ಹಾಗೂ ಸೂಕ್ಷ್ಮವಾಗಿರುತ್ತದೆ. ಪರಿಸರ ಭಾಷೆ ಅರ್ಥಾತ್ ಮಾತೃಭಾಷೆ ಇಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡಬೇಕಾದ್ದು ಸಮಾಜದ ಆದ್ಯ ಕರ್ತವ್ಯ. ಮನುಷ್ಯನ ದುರಾಸೆ ಪೈಪೋಟಿ ಹೋಲಿಕೆಗಳ ದಾಳಿಗೆ ಮಕ್ಕಳು ಪ್ರಯೋಗಪಶುಗಳಾಗಬಾರದು. ಒತ್ತಡದ ಶಿಕ್ಷಣಕ್ಕೆ ಒಳಗುಮಾಡಿ ಅವರ ಸೃಜನಶಕ್ತಿಯನ್ನು ಮುರುಟಿಸಬಾರದು. ಬಾಲ್ಯಾನುಭವದ ಸುಮಧುರತೆ ಹಾಳಾಗಬಾರದು. ಕಲಿಕೆ ಪ್ರಯಾಸದ ಶಿಕ್ಷೆಯಾಗದೆ ನಲಿಯುತ್ತಾ ಗ್ರಹಿಸುವ ವಿಕಾಸಶೀಲ ಗತಿಯಾಗಬೇಕು.

ಕನ್ನಡ ಮಕ್ಕಳ ಮನಸ್ಸನ್ನು ಬೆಳೆಸುವ ಕೈಂಕರ್ಯದಲ್ಲಿ ನಾಡಿನ ಹಲವು ಜನ ಪೂರ್ವಸೂರಿಗಳು ಮಕ್ಕಳಿಗಾಗಿ ಗುಣಾತ್ಮಕ ಸಾಹಿತ್ಯ ರಚನೆ ಮಾಡಿದ್ದಾರೆ. ಸರಳ ಸುಂದರ ಸುಲಲಿತವಾದ ಆ ರಚನೆಗಳು ಬಾಲ್ಯದ ಮನಸ್ಸಿಗೆ ಮುದ ನೀಡುವುದಷ್ಟೇ ಅಲ್ಲದೆ ಮಾನವೀಯ ಜೀವನ ಮೌಲ್ಯಗಳನ್ನು ಕುಸುಮಗಂಧದ ಪರಿಯಲ್ಲಿ ಅರಿವಿಗೆ ಮುಟ್ಟಿಸುತ್ತವೆ. ಪೂರ್ವಸೂರಿಗಳ ಈ ಹಾದಿಯನ್ನು ಅನುಸರಿಸಿದಂತೆ ಅನಂತರದ ಹಲವು ಕನ್ನಡ ಮನಸ್ಸುಗಳು ತಮ್ಮ ಭಾವನೆ,

ಆಲೋಚನೆಗಳನ್ನು ಮಗುಸಹಜ ಭಾವಗತಿಯಲ್ಲಿ ಹರಿಯ ಬಿಟ್ಟಿವೆ. ಕನ್ನಡ ಮಕ್ಕಳ ಮನಸ್ಸನ್ನು ಆರೋಗ್ಯಕರ ಭಾವದಲ್ಲಿ ಬೆಳಸುವ ಇಂಥ ಸಾಹಿತ್ಯವನ್ನು ಸಂಕಲಿಸಿ, ಕರ್ನಾಟಕದ ಎಲ್ಲ ಭಾಗದ ಮಕ್ಕಳಿಗೂ ಸುಲಭವಾಗಿ ತಲುಪುವಂತೆ ಮಾಡಬೇಕೆಂಬುದು ಕನ್ನಡ ಪುಸ್ತಕ ಪ್ರಾಧಿಕಾರದ ಹೆಬ್ಬಯಕೆ. ಅದರ ಫಲ ಈ ಮಕ್ಕಳ ಪುಸ್ತಕ ಮಾಲೆ. ಈ ಮಾಲೆಯಲ್ಲಿ ಕವಿತೆ, ನಾಟಕ, ಕಾದಂಬರಿ, ವ್ಯಕ್ತಿಚಿತ್ರ, ಪ್ರವಾಸ ಕಥನಗಳನ್ನು ಒಳಗೊಂಡ ಪುಸ್ತಕಗಳು ಪ್ರಕಟವಾಗುತ್ತಿವೆ.

ಮಕ್ಕಳ ನಾಟಕಗಳನ್ನು ಮೂರು ಸಂಪುಟಗಳಲ್ಲಿ ಸಂಪಾದಿಸಲಾಗಿದೆ. ಇವುಗಳಲ್ಲಿ ಒಟ್ಟು ಹನ್ನೆರಡು ನಾಟಕಗಳಿವೆ. ಎಲ್ಲವನ್ನೂ ಒಟ್ಟಿಗೆ ಒಂದೇ ಸಂಪುಟದಲ್ಲಿ ಸೇರಿಸಿ ಪ್ರಕಟಿಸಬಹುದಿತ್ತು. ಆದರೆ, ಮಕ್ಕಳ ಮನೋಧರ್ಮಕ್ಕೆ ಬೃಹತ್ತಿನ ಭಾರಕ್ಕಿಂತ ಸಣ್ಣದು ಸದಾ ಸುಂದರವೆಂಬ ತತ್ವ ಹೆಚ್ಚು ಹೊಂದುತ್ತದೆ. ಮಕ್ಕಳ ಕಲ್ಪನೆ ಭಾವನೆ ಆಲೋಚನೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಈ ಮಾಲೆಯಲ್ಲಿನ ನಾಟಕಗಳ ಕೊಡುಗೆ ಅಪಾರವಾದುದು. ನಾಟಕಗಳನ್ನು ಮಾಲೆಯಲ್ಲಿ ಸೇರಿಸಿಕೊಳ್ಳಲು ಅನುಮತಿ ನೀಡಿದ ನಾಟಕಕಾರರಿಗೂ ವಾರೀಸುದಾರರಿಗೂ ಸುಂದರವಾಗಿ ಮುಖಪುಟ ರಚಿಸಿಕೊಟ್ಟ ಕಲಾವಿದ ಪ.ಸ. ಕುಮಾರ್ ಅವರಿಗೂ ಆತ್ಮೀಯ ಕೃತಜ್ಞತೆಗಳು. ಕನ್ನಡ ಪುಸ್ತಕ ಪ್ರಾಧಿಕಾರವು ಯೋಜಿಸಿದ ಈ ಮಕ್ಕಳ ಸಾಹಿತ್ಯ ಮಾಲೆಯ ಸಂಪಾದಕತ್ವವನ್ನು ವಹಿಸಿಕೊಂಡು ತುಂಬಾ ಸಮರ್ಥವಾಗಿ ಈ ಕೈಂಕರ್ಯವನ್ನು ಆಗುಮಾಡಿಕೊಟ್ಟ ಬೊಳುವಾರು ಮಹಮದ್ ಕುಂಞ ಅವರಿಗೂ ಅವರ ಸಂಗಡ ಸದಸ್ಯರಾಗಿ ಸಹಕರಿಸಿದ ಹಿರಿಯರಾದ ಶ್ರೀ ಕಂಬ್ಳಾಣಿ ಶರಣಪ್ಪ, ಡಾ॥ ಶರಣಮ್ಮ ಗೊರೆಬಾಳ, ಪ್ರೊ॥ ಕೃಷ್ಣಮೂರ್ತಿ ಬಿಳಿಗೆರೆ ಇವರಿಗೂ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು. ಮಕ್ಕಳ ಸಾಹಿತ್ಯ ಮಾಲೆಯ ಎಲ್ಲ ಪುಸ್ತಕಗಳ ಕರಡು ತಿದ್ದುವಲ್ಲಿ ಹೆಚ್ಚಿನ ಆಸ್ಥೆ ವಹಿಸಿ ಸಹಕರಿಸಿದ ಪ್ರೊ॥ ಕೆ.ಆರ್. ಗಣೇಶ್ ಅವರಿಗೆ ಸಲಹೆ ಸೂಚನೆಗಳ ಸಹಕಾರ ನೀಡಿದ ಹಿರಿಯರಾದ ಪ್ರೊ॥ ಚಿ. ಶ್ರೀನಿವಾಸರಾಜು ಅವರಿಗೆ ಡಿ.ಟಿ.ಪಿ. ಮಾಡಿದ ಇಳಾ ಮುದ್ರಣ, ಮುದ್ರಿಸಿದ ಶ್ರೀರಂಗ ಪ್ರಿಂಟರ್ಸ್ – ಇವರಿಗೆ ಈ ಯೋಜನೆಯ ಯಶಸ್ಸಿಗೆ ಸಹಕರಿಸಿದ ಆಗಿನ ಆಡಳಿತಾಧಿಕಾರಿ ಶ್ರೀ ಎನ್. ತಿಪ್ಪೇಸ್ವಾಮಿ ಮತ್ತು ಸಿಬ್ಬಂದಿ ಬಳಗದವರಿಗೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸರ್ವಸದಸ್ಯ ಮಿತ್ರರಿಗೆ ಆತ್ಮೀಯ ಕೃತಜ್ಞತೆಗಳು.

**ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

# ಸಂಪಾದಕರ ಮಾತು

ಕನ್ನಡದ ಮಕ್ಕಳ ವ್ಯಕ್ತಿತ್ವ ವಿಕಾಸ ಹಾಗೂ ಸ್ವಯಂ ಪರಿಪೂರ್ಣತೆಗೆ ಅಗತ್ಯವಾದ ಉತ್ತಮ ಗುಣಮಟ್ಟದ 'ಮಕ್ಕಳ ಸಾಹಿತ್ಯ' ವನ್ನು ೧೦-೧೨ ಆಕರ್ಷಕ ಸಂಪುಟಗಳಲ್ಲಿ ಪ್ರಕಟಿಸಬೇಕೆಂಬುದು, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿರುವ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರ ಆಸೆಯಾಗಿತ್ತು. ಅವರ ಆಸೆಯು ಹೆಚ್ಚುಕಮ್ಮಿ ನನ್ನದೇ ಆಗಿದ್ದುದರಿಂದ, ಕಳೆದೊಂದು ವರ್ಷದ ಅವಧಿಯಲ್ಲಿ ಕತೆ, ಕಾದಂಬರಿ, ಕವನ, ನಾಟಕ, ಪ್ರವಾಸ ಕಥನ, ವ್ಯಕ್ತಿಚಿತ್ರ-ಹೀಗೆ ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಾನು ಆಯ್ದು, ಸಂಪಾದಿಸಿ ಸಿದ್ಧಗೊಳಿಸಿದ ಹತ್ತು ಕೃತಿಗಳಲ್ಲಿ, ಪ್ರಸ್ತುತ ಪುಸ್ತಕವು 'ಮಕ್ಕಳ ನಾಟಕ'ಗಳ **ಮೊದಲ ಸಂಪುಟವಾಗಿದೆ.** ಈ ಸಂಪುಟದಲ್ಲಿ ಅಡಕಗೊಂಡಿರುವ ನಾಲ್ಕೂ ನಾಟಕಗಳು, ಇದುವರೆಗೆ ಸಾವಿರಾರು ಮಕ್ಕಳು ಆಡಿ ಅಭಿನಯಿಸಿ ಸಂತೋಷಪಟ್ಟ ಬಹುಜನಪ್ರಿಯ ಮಕ್ಕಳ ನಾಟಕಗಳೇ ಆಗಿವೆ.

ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಮಹಾಕವಿ ಕುವೆಂಪು ಅವರು ಮಕ್ಕಳಿಗಾಗಿಯೇ ಬರೆದಿರುವ ಪುಟ್ಟ ನಾಟಕ **ನನ್ನ ಗೋಪಾಲ.** ಪೌರಾಣಿಕ ಹಿನ್ನೆಲೆಯ ಘಟನೆಯೊಂದನ್ನು ವಿಸ್ತರಿಸುತ್ತಾ ಮಗುವಿನ ಮುಗ್ಧತೆ, ಪ್ರೀತಿ, ಪ್ರಾಮಾಣಿಕತೆಯ ವಿವರಗಳನ್ನು ಕಾವ್ಯಾತ್ಮಕವಾಗಿ ಕಟ್ಟಿಕೊಡುವ ಈ ವಿಶಿಷ್ಟ ನಾಟಕವು, ಪ್ರದರ್ಶನಗಳಲ್ಲಿ ಜನಪ್ರಿಯವಾಗಿರುವ ಜತೆಗೆ ಓದುವ ನಾಟಕವಾಗಿಯೂ ಪ್ರಸಿದ್ಧವಾಗಿದೆ. ಮಕ್ಕಳ ಕಲ್ಪನಾಲೋಕಕ್ಕೆ ಫ್ಯಾಂಟಸಿಯ ಮೆರುಗು ನೀಡುವ **'ಜಯಂಟ್ ಮಾಮ'** ನಾಟಕ ಬರೆದವರು ಹೆಗ್ಗೋಡಿನ ಹಳ್ಳಿಗಾಡಿನಲ್ಲಿ 'ನೀನಾಸಂ' ಎಂಬ ಪವಾಡ ಕಟ್ಟಿ ಕೊಟ್ಟು ಹೋದ ಕೆ.ವಿ. ಸುಬ್ಬಣ್ಣನವರು. ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಒಳ ಹೊರಗುಗಳ ಬಗ್ಗೆ ವಿವರ ನೀಡುತ್ತಾ, ಪರಿಸರ ಸಂರಕ್ಷಣೆಯಲ್ಲಿ ನಮ್ಮ ಜವಾಬ್ದಾರಿಯ ಕುರಿತು ಎಚ್ಚರಿಸುವ ಈ ಮಕ್ಕಳ ನಾಟಕವನ್ನು ಆಡಲು ರಂಗಮಂದಿರವೇ ಬೇಕೆಂದಿಲ್ಲ. ಬಯಲು, ತೋಟ, ಕಾಡು, ಶಾಲೆಯ ಜಗಲಿ-ಹೀಗೆ ಎಲ್ಲೆಂದರಲ್ಲಿ ಮಕ್ಕಳು ಆಡಿ ನಲಿಯಬಹುದಾದ ನಾಟಕ ಇದು. ಒಗಟುಗಳನ್ನು ಹೇಳುವ ವಿಧಾನ ಹಾಗೂ ಅದರ ಉತ್ತರಗಳ ಗುಟ್ಟೊಡೆಯುವ ಕ್ರಮವನ್ನೇ ಆಧರಿಸಿ ಕೋಟಿಗಾನಹಳ್ಳಿ ರಾಮಯ್ಯನವರು ಬರೆದ ನಾಟಕ **'ಒಗಟಿನ ರಾಣಿ'.** ಮಕ್ಕಳನ್ನು ಹಾಡಿಸಿ, ಕುಣಿಸಿ ಸಂತೋಷಪಡಿಸುವ ಜತೆಯಲ್ಲೇ ಅವರ ಬುದ್ಧಿಶಕ್ತಿಯನ್ನು ಹೆಚ್ಚಿಸಿ ಕುತೂಹಲವನ್ನು ತಣಿಸುವ ಶಕ್ತಿ ಹೊಂದಿರುವ ಈ ನಾಟಕವು, ಅಭಿನಯಿಸುವ ಮಕ್ಕಳಿಗೆ ಮಾತ್ರವಲ್ಲ ನೋಡುಗರಿಗೂ ವಿಶಿಷ್ಟವಾದ ಮುದನೀಡುತ್ತದೆ. ಮಕ್ಕಳ ಸಾಹಿತ್ಯದಲ್ಲಿ ನಾಟಕವೇ ಪ್ರಾಮುಖ್ಯವೆಂದು ನಂಬಿರುವ ವೈದೇಹಿಯವರು ಮಕ್ಕಳಿಗಾಗಿಯೇ ಬರೆದ ನಾಟಕ **'ನಾಯಿಮರಿ'.** ಈ ನಾಟಕದುದ್ದಕ್ಕೂ ಉಕ್ಕಿ ಹರಿಯುವ ಜೀವನಪ್ರೀತಿ, ಪಾತ್ರಗಳ ಲವಲವಿಕೆ, ಮುಗ್ಧತೆಗಳು ಈ ನಾಟಕವು ಓದುವ ಮತ್ತು ಆಡುವ ನಾಟಕವಾಗಿ ಬಹಳ ಜನಪ್ರಿಯವಾಗಿದೆ.

ಈ ಕೃತಿಯನ್ನು ಸಿದ್ಧಗೊಳಿಸುವ ಸಂದರ್ಭದಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರ ಹಿರಿತನದಲ್ಲಿ ನೇಮಕಗೊಂಡ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀಕಂಚ್ಯಾಣಿ ಶರಣಪ್ಪ, ಶ್ರೀ ಕೃಷ್ಣಮೂರ್ತಿ ಬಿಳಗೆರೆ, ಶ್ರೀಮತಿ ಶರಣಮ್ಮ ಗೊರೆಬಾಳ ಇವರು ನೀಡಿದ ಮಾರ್ಗದರ್ಶನಕ್ಕೆ ನಾನು ಋಣಿ. ಈ ನಾಟಕಗಳನ್ನು ಪ್ರಸ್ತುತ ಸಂಪುಟದಲ್ಲಿ ಸೇರಿಸಿ ಪ್ರಕಟಿಸಲು ಅನುಮತಿ ನೀಡಿದ ಲೇಖಕ/ವಾರೀಸುದಾರರಿಗೂ, ಈ ಕೃತಿಯ ಸಂಪಾದನೆಯಲ್ಲಿ ಸಲಹೆ ಸಹಕಾರ ನೀಡಿದ ಸಾಹಿತಿ ಗೆಳೆಯರಿಗೂ ನಾನು ಕೃತಜ್ಞ.

ಬೆಂಗಳೂರು
ಆಕ್ಟೋಬರ ೨, ೨೦೦೫

**ಬೊಳುವಾರು ಮಹಮದ್ ಕುಂಞಿ**

## ಪರಿವಿಡಿ


೧. ನನ್ನ ಗೋಪಾಲ / *ಕುವೆಂಪು* ... ೧

೨. ಜಯಂಟ್ ಮಾಮ / *ಕೆ.ವಿ. ಸುಬ್ಬಣ್ಣ* ... ೨೩

೩. ಒಗಟಿನ ರಾಣಿ / *ಕೆ. ರಾಮಯ್ಯ* ... ೬೩

೪. ನಾಯಿ ಮರಿ / *ವೈದೇಹಿ* ... ೮೭

# ನನ್ನ ಗೋಪಾಲ

ಕುವೆಂಪು

## ಪಾತ್ರಗಳು

ಗೋಪಾಲನ ತಾಯಿ
ಗೋಪಾಲ
ಬನದ ಗೋಪಾಲ
ಮಾಧವ
ನಾರಾಯಣ
ಕೃಷ್ಣಮೂರ್ತಿ
ರಾಮಚಂದ್ರ
ಗುರು
(ಅಶರೀರವಾಣಿ)

# ನನ್ನ ಗೋಪಾಲ

## ನೋಟ ಒಂದು

(ಒಂದು ಸಣ್ಣ ಗುಡಿಸಲು, ಅದರ ಜಗಲಿಯ ಮೇಲೆ ಒಂದು ಮೂಲೆಯಲ್ಲಿ ಒಂದು ಸಣ್ಣ ಗೋಪಾಲನ ವಿಗ್ರಹವಿರುವ ದೇವರ ಗೂಡು. ಗೋಪಾಲನ ತಾಯಿ ಒಂದು ಚರಕದ ಮುಂದೆ ಕುಳಿತು ನೂಲುತ್ತಿದ್ದಾಳೆ. ಆಕೆ ಬಡ ಹೆಂಗಸು, ವಿಧವೆ.)

(ಬೆಳಗಿನ ಹೊತ್ತು)

ಗೋಪಾಲನ ತಾಯಿ : (ವೇಣುಗೋಪಾಲನ ವಿಗ್ರಹವನ್ನು ನೋಡಿ ಕೈಮುಗಿದುಕೊಂಡು)

ಶ್ರೀಕೃಷ್ಣ, ನನ್ನ ಮುದ್ದಿನ ಕಂದ, ಗೋಪಾಲ, ನಿನ್ನನ್ನೆ ನಂಬಿರುವೆ. ನೀನಲ್ಲದೆ ಇನ್ನಾರು ಗತಿಯೆನಗೆ? ನನಗೆ ಶಾಸ್ತ್ರಗಳ ಅರಿವಿಲ್ಲ, ವೇದಗಳ ತಿಳಿವಿಲ್ಲ. ಭಕ್ತಿಯೊಂದೇ ನನ್ನ ಬಲ. ಶ್ರೀಮಂತರು ಅರ್ಪಿಸುವ ಹಾಗೆ ನಿನಗೆ ಅರ್ಪಿಸಲು ನನ್ನಲ್ಲಿ ಸಿರಿಯಿಲ್ಲ. ಭಕ್ತವತ್ಸಲ ನೀನು, ಗೋಪಾಲ; ಕರುಣೆಯಿಂದೆನ್ನ ಕಾಪಾಡು. ನನ್ನ ಮುದ್ದು ಮಗು ಗೋಪಾಲನಿಗೆ ಆಯುರಾರೋಗ್ಯ ಸಂಪತ್ತುಗಳು ಬರುವಂತೆ ಮಾಡು. ಅವನ ಸಲಹುವ ಭಾರ ನಿನ್ನ ಮೇಲೆಯೇ, ಕೃಷ್ಣಾ. ಇಗೋ ಭಕ್ತಿ ಸುರಿಯುವ ಕಂಬನಿಯ ಮಾಲೆಯನು ನೆಯ್ದು, ಎದೆಯ ಪೊಂದಳಿಗೆ ಯಲ್ಲಿಟ್ಟು, ನಿನಗೆ ಅರ್ಪಿಸುವೆ; ಸ್ವೀಕರಿಸು, ಅನುಗ್ರಹಿಸು.

ಅಶರೀರವಾಣಿ : ಪುತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ!
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥

ತಾಯಿ : ಗೋಪಾಲ, ನೀನು ಕರುಣಾಸಾಗರ, ಅನಾಥರಕ್ಷಕ, ದೀನಬಂಧು. ಬಡವಳಾದ ನನ್ನ ಮೇಲೆ ನಿನ್ನ ಕರುಣೆಯ ಮಳೆಯನ್ನು ಕರೆದೆ! ಇಗೋ ನಿನಗೆ ಶರಣು, ಶರಣು.

(ಅಡ್ಡಬಿದ್ದು)

ನನ್ನ ಗೋಪಾಲನೆಲ್ಲಿ? ಹಾಸಿಗೆಯಿಂದ ಇನ್ನೂ ಏಳಲಿಲ್ಲವೊ ಏನೊ?

(ಒಂದು ಮೂಲೆಯ ಕಡೆ ನೋಡಿ)

ಗೋಪಾಲ, ಬೆಳಗಾಯ್ತು, ಮೇಲೇಳು; ನೋಡಲ್ಲಿ,

ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ತುದಿಯಲ್ಲಿ ತೊಳಗುತ್ತಿದಾನೆ. ಕೇಳಲ್ಲಿ ಹಕ್ಕಿಗಳು ಹಾಡುತ್ತ, ಹಾರಾಡಿ ಕರೆಯುತ್ತಿವೆ ನಿನ್ನ. ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಗೋಪಾಲ. ಶಾಲೆಗೆ ಹೊತ್ತಾಗುತ್ತದೆ. ಗುರುಗಳೇನೆಂದಾರು? ಏಳು ಗೋಪಾಲ, ನನ್ನ ಕಂದಾ.

(ಗೋಪಾಲನು ಶುಚಿಯಾದ ಬಟ್ಟೆಗಳನ್ನು ಉಟ್ಟುಕೊಂಡು, ಬುಟ್ಟಿಯಲ್ಲಿ, ಹೂಗಳನ್ನು ಕೊಯ್ದುಕೊಂಡು ಬೇಗ ಬರುತ್ತಾನೆ.)

ಗೋಪಾಲ : ಕರೆದೆಯೇನಮ್ಮ?

ತಾಯಿ : ಹೌದು, ಮಗು. ಮಲಗಿದ್ದೆಯೆಂದು ಕರೆದೆ. ಎಲ್ಲಿಗೆ ಹೋಗಿದ್ದೆ?

ಗೋಪಾಲ : ಆಗಲೆ ಎದ್ದು ಸ್ನಾನಮಾಡಿ ನಿನಗೆ ಗೋಪಾಲನ ಪೂಜೆಗೆ ಬೇಕಾದ ಹೂಗಳನ್ನು ಕೊಯ್ಯಲೆಂದು ಬನಗಳಿಗೆ ಹೋಗಿದ್ದೆ.

ತಾಯಿ : ಹೂ ಕೊಯ್ದೆಯೇನು?

ಗೋಪಾಲ : ಹೌದಮ್ಮ, ನೋಡಿಲ್ಲಿ!

(ಬುಟ್ಟಿಯನ್ನು ತೋರಿಸುತ್ತ)

ಬನದಲ್ಲಿ ಏನಮ್ಮ ಸೊಗಸು! ಏನು ಆನಂದ! ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತಬಾಳೆಯ ಹೂವು, ಗೋರಂಟೆಯ ಹೂವು! ಏನಮ್ಮ, ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರಿತ್ತು. ಆಮೇಲೆ ಹಕ್ಕಿಗಳ ಇಂಪಾದ ಗಾನ! ತಂಗಾಳಿ! ಸೂರ್ಯದೇವನ ಹೊಂಬೆಳಕು! ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆ! ಮನೆಗಿಂತ ಬನವೇ ಸೊಗಸಮ್ಮ, ನೀನೊಬ್ಬಳಲ್ಲಿದ್ದರೆ....

ತಾಯಿ : ಹೌದು, ಕಂದಾ! ಅವುಗಳೆಲ್ಲ ನೋಡು, ಆ ಗೋಪಾಲನ ಲೀಲೆ!

(ವಿಗ್ರಹವನ್ನು ತೋರಿಸುತ್ತಾಳೆ.)

ಹೂಗಳನ್ನು ಅಲ್ಲಿಟ್ಟು ನೀನು ಶಾಲೆಗೆ ಹೋಗು. ಶಾಲೆಗೆ ಹೊತ್ತಾಗಿ ಹೋದರೆ ಗುರುಗಳು ನೊಂದುಕೊಳ್ಳುತ್ತಾರೆ. ನಿನಗಾಗಿ ಗಂಜಿ ಮಾಡಿಟ್ಟಿದ್ದೇನೆ.

ಗೋಪಾಲ : ಆಗಲಮ್ಮ, ಹೋಗುತ್ತೇನೆ. ಅಮ್ಮ, ನಾನು/ ಬರುವಾಗ ಕಾಡು ದಾಟಿ ಬರಬೇಕು. ಬೈಗಿನ ಹೊತ್ತು ನನಗಲ್ಲಿ ಒಬ್ಬನೇ ಬರುವುದಕ್ಕೆ ಹೆದರಿಕೆ.

ಜೊತೆಗೆ ಯಾರಾದರೂ ಬೇಕಮ್ಮ. ನೆರೆಯೂರಿನಿಂದ ಬರುವ ಹುಡುಗರಿಗೆ ಜೊತೆಗೆ ಆಳುಗಳಿರುವರಮ್ಮ. ರಾಮು, ಕಿಟ್ಟಿ, ನಾಣಿ, ಮಾಧು ಇವರೆಲ್ಲರಿಗೂ ಒಬ್ಬೊಬ್ಬ ಆಳು. ನನಗೆ ಮಾತ್ರ ಯಾರೂ ಇಲ್ಲ.

ತಾಯಿ : ಮಗೂ, ಅವರೆಲ್ಲ ಶ್ರೀಮಂತರ ಮಕ್ಕಳು; ಬೇಕಾದಷ್ಟು ಹಣವಿದೆ. ನಮಗೆಲ್ಲಿ ಬರಬೇಕು? ನೀನೇ ಬಲ್ಲೆ, ಹೊಟ್ಟೆಗೆ ಹಿಟ್ಟು ಸಿಕ್ಕುವುದೇ ಕಷ್ಟ. ನೂಲು ಮಾರಿ ಬಂದ ಮೂರು ಕಾಸಿನಲ್ಲಿ ನಮ್ಮ ಸಂಸಾರವೆಲ್ಲ ಸಾಗಬೇಕು. ನೋಡು, ಆ ಗೋಪಾಲ ಕೊಡಬೇಕು, ನಾವು ಉಣಬೇಕು.

ಗೋಪಾಲ : ಅಮ್ಮಾ, ನನಗೊಂದು ಹೊಸ ಪಂಚೆ ಕೊಡುವೆನೆಂದು ಮೊನ್ನೆಯೇ ಹೇಳಿದ್ದೆ; ಇಂದು ಕೊಡುತ್ತೀಯಾ? ನನ್ನ ಗೆಳೆಯರೆಲ್ಲರೂ ನನ್ನನ್ನು ನೋಡಿ ಹಾಸ್ಯಮಾಡುತ್ತಾರಮ್ಮ. ಅವರೆಲ್ಲಾ ಬೆಲೆಯುಳ್ಳ ಬಟ್ಟೆ ಹಾಕಿಕೊಂಡು ಬರುತ್ತಾರೆ.

ತಾಯಿ : ಕೊಡುತ್ತೇನೆ, ಕಂದ. ನಿನಗಾಗಿ ಹಗಲಿರುಳೂ ನೂತು ಅದನ್ನು ಸಂಪಾದಿಸಿದ್ದೇನೆ. ಹೋಗು, ಗಂಜಿಯುಂಡು ಬಾ! ಕೊಡುತ್ತೇನೆ.

(ಗೋಪಾಲನು ಹೂವಿನ ಬುಟ್ಟಿಯನ್ನು ಇಟ್ಟುಹೋಗುತ್ತಾನೆ.)

ಲಕ್ಷ್ಮೀಶ, ಇದುವರೆಗೆ ನಾನು ಬಡವಳೆಂದು ತಿಳಿದಿರಲಿಲ್ಲ. ಇಂದು ನನ್ನ ಗೋಪಾಲನ ಬಯಕೆ ನನಗದನ್ನು ತಿಳಿಸಿತು. ಅಯ್ಯೋ! ಆ ಮಗುವಿಗೆ ಬಡತನದ ಬವಣೆಯೇಕೆ? ಇದುವರೆಗೆ ಅವನು ಕೇಳಿದ ವಸ್ತುವನ್ನೆಲ್ಲ ಕೊಟ್ಟು ಅವನಿಗೆ ಬಡತನದ ಸುದ್ದಿಯನ್ನೇ ತಿಳಿಸದಿದ್ದೆ. – ಇಂದು ಅವನ ಜೊತೆಗೆ ಯಾರನ್ನು ಕಳುಹಿಸಲಿ? ಕಾಡಿನಲ್ಲಿ ಮುದ್ದು ಕಂದನಿಗೆ ಹೆದರಿಕೆಯಂತೆ ಗೋಪಾಲ!

ಅಶರೀರವಾಣಿ : ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥

ತಾಯಿ : ಆಗಲಿ ಗೋಪಾಲ, ನಿನ್ನನ್ನೇ ನಂಬುವಂತೆ ಹೇಳಿ, ಗೋಪಾಲನನ್ನು ಕಳುಹಿಸುತ್ತೇನೆ.

(ಗೋಪಾಲನು ಬಗಲಲ್ಲಿ ಒಂದು ಸಣ್ಣ ಚಾಪೆ ಇಟ್ಟುಕೊಂಡು, ಕೈಯಲ್ಲಿ ಓಲೆ ಹಿಡಿದು, ಲೇಖನಿ ತೆಗೆದುಕೊಂಡು ಸಿದ್ಧನಾಗಿ ಬರುತ್ತಾನೆ.)

ಗೋಪಾಲ : ಅಮ್ಮ, ನಾನು ಶಾಲೆಗೆ ಹೊರಡುತ್ತೇನೆ.

ತಾಯಿಗೆ ನಮಸ್ಕಾರ ಮಾಡುತ್ತಾನೆ.

ತಾಯಿ : ಹಣೆಗೆ ತಿಲಕವನ್ನಿಟ್ಟುಕೋ, ಕಂದ. ಆ ಕರಡಿಗೆ ತೆಗೆದುಕೊಂಡು ಬಾ, ಇಲ್ಲಿ.

(ಗೋಪಾಲನು ಕರಡಿಗೆ ತಂದುಕೊಡುತ್ತಾನೆ. ತಾಯಿ ತಿಲಕವನ್ನಿಡುತ್ತಾಳೆ.)

ಕಂದಾ, ಸುಖವಾಗಿ ಹೋಗಿ ಬಾ. ಗೋಪಾಲನು ನಿನ್ನ ಜೊತೆಗೆ ಇರಲಿ. ತೆಗೆದುಕೊ, ಈ ಪಂಚೆಯನ್ನು.

(ಕೊಡುತ್ತಾಳೆ.)

ನೀನು ಶಾಲೆಯಿಂದ ಬರುವಾಗ ಕಾಡಿನಲ್ಲಿ ಹೆದರಿಕೆಯಾದರೆ ಗೋಪಾಲನನ್ನು ಕೂಗು, ಬರುತ್ತಾನೆ.

ಗೋಪಾಲ : ಯಾರಮ್ಮ ಅವನು?

ತಾಯಿ : ನಿನ್ನಣ್ಣ, ನನ್ನ ಹಿರಿಯ ಮಗ. ಕಾಡಿನಲ್ಲಿ ಅವನು ಯಾವಾಗಲೂ ದನ ಕಾಯುತ್ತಾ ಇರುತ್ತಾನೆ. ನೀನು ಕರೆದರೆ ಬಂದು ನಿನ್ನನ್ನು ಕಾಡು ದಾಟಿಸುತ್ತಾನೆ.

ಗೋಪಾಲ : ಅಮ್ಮ, ಅವನಿಗೆ ನನ್ನ ಗುರುತಿದೆಯೆ?

ತಾಯಿ : ಹೌದು, ಅವನಿಗೆ ಎಲ್ಲರ ಗುರುತೂ ಇರುತ್ತದೆ. ನೀನು ಹೆದರಬೇಡ, ಹೋಗು. ನೀನು ಕರೆದರೆ ಬಂದೇ ಬರುತ್ತಾನೆ.

(ಗೋಪಾಲನು ಹೋಗುತ್ತಾನೆ.)

ನನ್ನ ಭಕ್ತಿಗೆ ಬಲವಿಲ್ಲೆಂದು ಕೋಪಮಾಡಬೇಡ, ಗೋಪಾಲ

(ವಿಗ್ರಹಕ್ಕೆ ಪುನಃ ಅಡ್ಡಬೀಳುತ್ತಾಳೆ.)

## ನೋಟ ಎರಡು

ಒಂದು ಕಾಡು. ಸಂಜೆಯ ಸಮಯ. ಗೋಪಾಲನು ಶಾಲೆಯಿಂದ ಹಿಂತಿರುಗಿ ಬರುತ್ತಾನೆ. ತನ್ನ ಕೈಲಿದ್ದ ಚಾಪೆ ಮೊದಲಾದುವುಗಳನ್ನು ಕೆಳಗಿಟ್ಟು ಹೂಗಳನ್ನು ಆಯುತ್ತಾನೆ.

ಗೋಪಾಲ : ಈ ಮರದಲ್ಲಿ ಏನು ಹೂವಿನ ಗೊಂಚಲು! ಭಾರ ಹೆಚ್ಚಾಗಿ ತಲೆ ಬಾಗುತ್ತಿದೆ, ಮರ. ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ!

(ಆಯ್ದು ತಿನ್ನುತ್ತಾನೆ.)

ಆಗಲೇ ಬೈಗಾಯ್ತು. ಏನು ಸೂರ್‍ಯನಪ್ಪ! ನಾನು ಮನೆಗೆ ಹೋಗುವವರೆಗಾದರೂ ಮುಳುಗದೇ ಕಾದರೆ! ಈ ಕಪ್ಪಿನಲ್ಲಿ ನನಗೊಬ್ಬನಿಗೇ ಹೆದರಿಕೆ. ಓಹೋ ಮರೆತಿದ್ದೆ. ಅಮ್ಮ ಹೇಳಿದ್ದು. ನನ್ನಣ್ಣ ನನ್ನಣ್ಣ ಗೋಪಾಲ ಇಲ್ಲಿಯೇ ದನ ಕಾಯುತ್ತಿರುವನಂತೆ ಅವನನ್ನು ಕರೆಯುತ್ತೇನೆ.

"ಗೋಪಾಲಣ್ಣಾ, ಗೋಪಾಲಣ್ಣಾ! ಗೋಪಾಲಣ್ಣಾ!" ಇದೇಕೆ, ಉತ್ತರವೇ ಇಲ್ಲ! ದನಗಳನ್ನು ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೊ? ಆದರೆ ಅಮ್ಮ ಹೇಳಿದ್ದಾಳೆ. ಇಲ್ಲಿಯೇ ಇರುತ್ತಾನೇಂತ. ಅಮ್ಮನ ಮಾತು ಸುಳ್ಳಾಗಲಾರದು! ಮತ್ತೆ ಕರೆದು ನೋಡುತ್ತೇನೆ; ಅಣ್ಣಾ, ಅಣ್ಣಾ! ಏ ಅಣ್ಣಾ! ನನಗೆ ಹೆದರಿಕೆ. ಅಣ್ಣಾ. ಕತ್ತಲಾಗುತ್ತಿದೆ, ಎಲ್ಲಿದ್ದೀಯಣ್ಣಾ, ಏ ಗೋಪಾಲಣ್ಣಾ!

ಬನದ ಗೋಪಾಲ : (ತೆರೆಯೊಳಗಿನಿಂದಲೆ) ಏನೋ, ಗೋಪಾಲ?

ಗೋಪಾಲ : ಎಲ್ಲಿದ್ದೀಯಾ? ಹೆದರಿಕೆಯಾಗುತಿದೆ ನನಗೆ. ಅಮ್ಮ ಹೇಳಿದಳು. ಹೆದರಿಕೆಯಾದರೆ ನಿನ್ನನ್ನು ಕರೆ ಅಂತ.

ಬನದ ಗೋಪಾಲ : ಹೆದರಬೇಡ, ನಾನಿಲ್ಲಿಯೇ ಇದ್ದೇನೆ. ಧೈರ್ಯವಾಗಿ ಹೋಗು ಮನೆಗೆ.

ಗೋಪಾಲ : ಎಲ್ಲಿದ್ದೀಯೆ, ಬಾ'ಣ್ಣಾ–

ಬನದ ಗೋಪಾಲ : ತುಂಬಾ ಕೆಲಸದ ಮೇಲಿದ್ದೇನೆ ಕಣೋ. ಈಗ ಬರುವುದಕ್ಕಾಗುವುದಿಲ್ಲ. ನೀನು ಹೋಗು.

ಗೋಪಾಲ : ನೀನೂ ಮನೆಗೆ ಬರುವುದಿಲ್ಲವೆ–ಅಮ್ಮನ್ನ ನೋಡುವುದಕ್ಕೆ? ಕತ್ತಲಲ್ಲಿ ಕಾಡಿನ ನಡುವೆ ಏಕಿರುವೆ?

ಬನದ ಗೋಪಾಲ : ನಾನು ಆಮೇಲೆ ಹಿಂದಿನಿಂದ ಬರುತ್ತೇನೆ, ಅಮ್ಮನಿಗೆ ಹೇಳು. ಅಮ್ಮ ನಿನಗಾಗಿ ಕಾದಿದ್ದಾಳೆ; ಬೇಗ ಹೋಗಪ್ಪ.

(ಗೋಪಾಲನು ಹೋಗುತ್ತಾನೆ. ಬನದ ಗೋಪಾಲನು ಕಾಡಿನಿಂದ ಈಚೆಗೆ ಬರುತ್ತಾನೆ. ತಲೆಯ ಮೇಲೆ ಸಣ್ಣದೊಂದು ಕಿರೀಟ, ನವಿಲುಗರಿ; ಕೈಲೊಂದು ಕೊಳಲು. ಗೋಪಾಲನು ಹೋಗುತ್ತಿರುವುದನ್ನೆ ನಗುತ್ತಾ ಸ್ವಲ್ಪ ಹೊತ್ತು ನೋಡುತ್ತಾನೆ. ಬಳಿಕ ಕೊಳಲೂದಿ ಹಾಡುತ್ತಾನೆ.)

(ಧನ್ಯಾಸಿ–ಆದಿತಾಳ)

ತಿಳಿವಳಿಕೆಗೆ ನಾ ಸಿಲುಕೇ ಮನುಜಾ
ಒಲುಮೆಗೆ ಸೆರೆಯಾಗುವೆನು ॥ ಪ ॥

ತಪಸಿಗಳೆನ್ನನು ಜ್ಞಾನದಿ ಮುಟ್ಟಲು
ಯುಗಯುಗಗಳು ಬಲು ಬಳಲುವರು
ಯೋಗಿಗಳೆನ್ನನು ಜನುಮ ಜನುಮದಲಿ
ಹೊಂದಲು ಸಾಧನೆ ಮಾಡುವರು ॥ ೧ ॥

ಕಡಲಿನ ಬಿತ್ತರ ಸಾಲದು ಪವಡಿಸೆ
ಭಕ್ತಿಯ ಕಂಬನಿ ಮನೆ ಎನಗೆ

ಹಿಮಗಿರಿ ಎತ್ತರ ಸಾಲದು ನಾನಿರೆ
ಭಕ್ತನ ಹೃದಯವು ಸಾಕೆನಗೆ ॥ ೨ ॥

ಬೃಂದಾವನದಾ ಗೋಪಿಯರರಿತರೆ
ವೇದಗಳಾಡುವ ಸತ್ಯವನು?
ಹಾಲನು ಮಾರುವ ಹೆಣ್ಣುಗಳೊಲ್ಮೆಯೆ
ಮೀರದೆ ಯೋಗಿಯ ಸಾಧನೆಯ? ॥ ೩ ॥

–ತೆರೆ–

## ನೋಟ ಮೂರು

(ಕತ್ತಲಾಗುತ್ತಿದೆ. ಗುಡಿಸಿಲಿನ ಹೊಸಲ ಬಳಿ ಗೋಪಾಲನ ತಾಯಿ ಮಗನು ಬರುವ ಹಾದಿಯನ್ನೇ ನೋಡುತ್ತಾ ಕುಳಿತಿದ್ದಾಳೆ. ಕೈಯಲ್ಲಿ ಜಪಮಾಲೆ ಇದೆ.)

ತಾಯಿ : ಸೂರ್ಯನೂ ಮುಳುಗಿದನು. ಹಕ್ಕಿಗಳೂ ಗೂಡಿಗೆ ಹೋದುವು. ದನಗಳೆಲ್ಲಾ ಕೊಟ್ಟಿಗೆಗೆ ಬಂದುವು. ತಾರೆಗಳೂ ಒಂದೊಂದಾಗಿ ಮೂಡುತ್ತಿವೆ. ಕತ್ತಲೂ ಹಬ್ಬುತ್ತಿದೆ. ಗೋಪಾಲನೇಕೆ ಇನ್ನೂ ಬರಲಿಲ್ಲ? ಸುಮ್ಮನೆ ಕಾಲ ಕಳೆಯುವವನಲ್ಲ. ಕಾಡಿನಲ್ಲಿ ಬರಬೇಕು. ಎಷ್ಟು ಭಯಪಡುವನೋ ಏನೋ? ಪರಮಾತ್ಮ, ಅವನ ಸಂರಕ್ಷಣೆ ಭಾರ ನಿನ್ನದೇ ಆಗಿರುತ್ತದೆ.

(ಗೋಪಾಲನು ಬೇಗಬೇಗನೆ ಬರುತ್ತಾನೆ.)

ಮಗು ಗೋಪಾಲ, ಬಂದೆಯಾ, ಬಂದೆಯಾ! ಬಾ, ಕುಳಿತುಕೋ. ಇದೇಕೆ ಇಷ್ಟು ತಡಮಾಡಿ ಬಂದೆ. ಕಾಡಿನಲ್ಲಿ ಬರುವಾಗ ಹೆದರಿ ಕೊಂಡೆಯೊ ಏನು?

ಗೋಪಾಲ : ನನ್ನಣ್ಣ ಅಲ್ಲಿರುವಾಗ ಹೆದರಿಕೆ ಎಂದರೇನಮ್ಮ? ಅವನೊಡನೆ ಮಾತನಾಡುತ್ತಿದ್ದೆ. ಆದ್ದರಿಂದ ಹೊತ್ತಾಯಿತು. ನೀನು ಹೇಳಿದಂತೆಯೆ, ನನಗೆ ಹೆದರಿಕೆಯಾಗಲು 'ಗೋಪಾಲಣ್ಣಾ' ಎಂದು ಕೂಗಿದೆ. ಅವನು 'ಓ' ಎಂದ. ಆಮೇಲೆ ಬಹಳ ಮಾತಾಡಿದೆವು.

ತಾಯಿ : (ಕಂಬನಿ ತುಂಬಿದ ಕಂಗಳನ್ನು ಒರೆಸುತ್ತಾ ಮುದ್ದಿಸುತ್ತಾ) ಪುಣ್ಯವಂತನು ನೀನು, ಮಗನೆ. ನಿನ್ನನ್ನು ಹೆತ್ತವಳು ನಾನೂ ಧನ್ಯಳಾದೆ. ನನ್ನ ಬಡತನವಿಂದು ಮರೆಯಾಯ್ತು. ನನ್ನ ವೈಧವ್ಯವಿಂದು ಅಳಿದುಹೋಯ್ತು, ಇನ್ನೆನ್ನ ಭಾಗ್ಯಕ್ಕೆ ಎಣೆಯಿಲ್ಲ. ಕಂದಾ ನಿನ್ನಣ್ಣ ಗೋಪಾಲನನ್ನು ಕಂಡೆಯಾ? ಅವನು ಹೇಗಿದ್ದ?

ಗೋಪಾಲ : ಇಲ್ಲಮ್ಮ, ಅವನಿಗೆ ತುಂಬಾ ಕೆಲಸವಂತೆ. ಆದ್ದರಿಂದ ಇಂದು ಹೊರಗೆ ಬರಲಾಗುವುದಿಲ್ಲವೆಂದು ಹೇಳಿದ. ನಾನೂ ಮನೆಗೆ ಬಾರೆಂದು ಅವನನ್ನು ಕರೆದೆ; ಆಮೇಲೆ ಬರುತ್ತೇನೆ, ಅಮ್ಮನಿಗೆ ಹೇಳು ಅಂತ ಹೇಳಿದ. ಅದಕ್ಕೇ ನಾನು ಒಬ್ಬನೆ ಬಂದೆ.

ತಾಯಿ : ಕಂದಾ, ನಾಳೆ ನೀನು ಶಾಲೆಗೆ ಹೋಗುವಾಗ ಅವನನ್ನು ಕರೆದು ಹೊರಗೆ ಬರುವಂತೆ ಹೇಳು. ಅವನಿಗೆ ತಿನ್ನುವುದಕ್ಕೇನಾದರೂ ಕೊಡುತ್ತೇನೆ, ತೆಗೆದುಕೊಂಡು ಹೋಗಿ ಕೊಡು.

ಗೋಪಾಲ : ಆ ಕಾಡಿನಲ್ಲಿ, ಈ ಕತ್ತಲೆಯಲ್ಲಿ ಅವನೊಬ್ಬನೇ ಹೇಗಿರುತ್ತಾನಮ್ಮ? ಅವನಿಗೆ ಹೆದರಿಕೆ ಇಲ್ಲವೆ?

ತಾಯಿ : ಮಗು, ಅವನು ಸರ್ವಗೋಪಾಲಕನು. ಅವನಿಗೇತರ ಭೀತಿ?

ಗೋಪಾಲ : ಅಮ್ಮ, ನನ್ನ ಗೋಪಾಲನ ಪೂಜೆಗೆ ಇದೋ ಹೂಗಳನ್ನು ತಂದಿದ್ದೇನೆ. ಅವನಿಗೆ ತಿನ್ನುವುದಕ್ಕಾಗಿ ಹಣ್ಣುಗಳನ್ನೂ ಆಯ್ದುಕೊಂಡು ಬಂದಿರುತ್ತೇನೆ.

ತಾಯಿ : ಅವನ್ನು ವೇಣುಗೋಪಾಲನ ಮುಂದಿಟ್ಟು ಅಡ್ಡಬೀಳು.

(ಗೋಪಾಲನು ಹೂಗಳನ್ನೂ ಹಣ್ಣುಗಳನ್ನೂ ಇಟ್ಟು ಅಡ್ಡ ಬೀಳುತ್ತಾನೆ. ಪುನಃ ಚಕಿತನಾಗಿ ಏಳುತ್ತಾನೆ.)

ಗೋಪಾಲ : ಅಮ್ಮ, ನನ್ನಣ್ಣ ಬಂದ! ಬಂದಾ! ನೋಡಿಲ್ಲಿ!

ತಾಯಿ : ಎಲ್ಲಿ ಮಗೂ?

ಗೋಪಾಲ : ಓಡಿಬಂದು ಆ ಗೊಂಬೆ ಒಳಗಡೆ ಸೇರಿಬಿಟ್ಟ!

(ತಾಯಿ ಅಡ್ಡ ಬೀಳುತ್ತಾಳೆ.)

## ನೋಟ ನಾಲ್ಕು

(ಕಾಡು. ಶಾಲೆಗೆ ಹೋಗುವ ಗೋಪಾಲನು ಬರುತ್ತಾನೆ. ಸುತ್ತಲೂ ನೋಡುತ್ತಾನೆ.)

ಗೋಪಾಲ : ಅಣ್ಣಾ, ಅಣ್ಣಾ!
(ಕೋಗಿಲೆ ಕೂಗುತ್ತದೆ.)
ನಿನ್ನನ್ನಲ್ಲ ನಾನು ಕೂಗಿದ್ದು. ಅಣ್ಣನ್ನ. ಸುಮ್ಮನೆ ಅಣಕಿಸಬೇಡ.
ಅಣ್ಣಾ, ಅಣ್ಣಾ!
(ಅಳಿಲು ಕೂಗುತ್ತದೆ.)
ಈ ಅಳಿಲೇನು ಸುಮ್ಮನೆ ಕಿರಿಚುತ್ತದೆ. ಅಣ್ಣಾ ಎಂದರೆ ನೀನೇ ಏನು?
ಅಣ್ಣಾ!

ಬನದ ಗೋಪಾಲ : ಏನು ಗೋಪಾಲ?

ಗೋಪಾಲ : ಹೊರಗೆ ಬಾರಣ್ಣ, ಅಮ್ಮ ಹೇಳಿದ್ದಾಳೆ.

ಬನದ ಗೋಪಾಲ : ನನಗೆ ತುಂಬಾ ಕೆಲಸವಿದೆ. ನೀನು ಶಾಲೆಗೆ ಹೋಗಿ ಬಾ.

ಗೋಪಾಲ : ಅದಾಗದು, ನೀನು ಬರಲೇ ಬೇಕು. ದಿನವೂ ಕೆಲಸವಿದೆ, ಕೆಲಸವಿದೆ ಎನ್ನುವೆ! ಏನು ಕೆಲಸ? ನೀನು ಹೊರಗೆ ಬಂದ ಹೊರತು ನಾನು ಹೋಗುವುದಿಲ್ಲ.

ಬನದ ಗೋಪಾಲ : ಹಾಗೆಲ್ಲ ಹಟಮಾಡಬಾರದು, ತಮ್ಮಾ. ನಾನು ಬಂದರೆ ದನಗಳೆಲ್ಲ ಚೆದರಿ ಓಡಿಹೋಗುತ್ತವೆ. ನೀನು ಹೋಗು.

ಗೋಪಾಲ : ನಾನೊಲ್ಲೆ. ಅಮ್ಮ ತಿಂಡಿ ಕಳುಹಿಸಿದ್ದಾಳೆ. ನಿನಗದನ್ನು ಕೊಡಬೇಕು, ಕೊಡದೆ ಇದ್ದರೆ ಬೈಯುತ್ತಾಳೆ. ನೀನು ಬಂದ ಹೊರತು ನಾನು ಬೇರೆ ಹೋಗುವುದಿಲ್ಲ. ಶಾಲೆಗೆ ಹೊತ್ತಾದರಾಗಲಿ ಗುರುಗಳಿಗೆ ಹೇಳುತ್ತೇನೆ.

ಬನದ ಗೋಪಾಲ : ಸಾಕಪ್ಪ ನಿನ್ನ ಕಾಟ. ಹೇಳಿದ ಮಾತು ಕೇಳುವುದಿಲ್ಲ.
(ಬನದಿಂದ ಹೊರಟು ಬರುತ್ತಾನೆ. ಹಿಂದೆ ಇದ್ದಂತೆಯೇ ತಲೆಯಮೇಲೆ ಸಣ್ಣ ಮುಕುಟ, ನವಿಲುಗರಿ; ಕೈಲೊಂದು ಕೊಳಲು. ಕೊರಳಲ್ಲಿ ಹಾರ ಮತ್ತು ನೊಸಲಲ್ಲಿ ಗಂಧ.)
ಏನು ಬೇಕಪ್ಪ, ಹೇಳೀಗ.

ಗೋಪಾಲ : (ಓಡಿಹೋಗಿ ಅವನನ್ನು ಹಿಡಿದುಕೊಂಡು ನಿಟ್ಟಿಸಿ ನೋಡುತ್ತಾನೆ.)
ಅಣ್ಣಾ, ನಿನಗೆ ಈ ಹಾರ ಯಾರು ಕೊಟ್ಟರು?

ಬನದ ಗೋಪಾಲ : ನನ್ನಮ್ಮ ಕೊಟ್ಟದ್ದು, ಏಕೆ?

ಗೋಪಾಲ : ಇದೇ ಹಾರವನ್ನು ನಮ್ಮಮ್ಮ ವೇಣುಗೋಪಾಲನ ಕೊರಳಿಗೆ ಹಾಕಿದ್ದಳು. ಅಣ್ಣಾ, ಈ ನವಿಲುಗರಿ ಎಲ್ಲಿ ಸಿಕ್ಕಿತು ನಿನಗೆ?

ಬನದ ಗೋಪಾಲ : ಬನದಲ್ಲಿ ಇವುಗಳಿಗೇನು ಬರಗಾಲ, ಬೇಕಾದಷ್ಟಿವೆ.

ಗೋಪಾಲ : ನನಗೂ ಒಂದು ಕೊಡುತ್ತೀಯೇನಣ್ಣ. ಆ ಬಣ್ಣದ ಕಣ್ಣು ಎಷ್ಟು ಚೆಲುವಾಗಿದೆ!

ಬನದ ಗೋಪಾಲ : ನಿನಗೇಕೆ, ತಮ್ಮಾ? ಇವುಗಳೆಲ್ಲಾ ಬನದಲ್ಲಿರುವವರಿಗಲ್ಲದೆ ಮನೆಯಲ್ಲಿರುವವರಿಗಲ್ಲ.

ಗೋಪಾಲ : ನಾನೂ ಬನದಲ್ಲಿರುತ್ತೇನೆ, ನಿನ್ನೊಡನೆ.

ಬನದ ಗೋಪಾಲ : ಸರಿ, ಸರಿ, ನಿನ್ನ ಮಾತು ಕೇಳಿದರೆ! ಆಮೇಲೆ ಅಮ್ಮ ಸುಮ್ಮನೆ ಬಿಟ್ಟಾಳೆ, ನನ್ನ?

ಗೋಪಾಲ : ಹಾಗಾದರೆ ನೀನೂ ಬಾ, ಮನೆಗೆ.

ಬನದ ಗೋಪಾಲ : ಆಮೇಲೆ ಇಲ್ಲಿ ದನ ಕಾಯುವವರಾರು? ನೀನು ಶಾಲೆಗೆ ಹೋಗಿ ಹಿಂತಿರುಗಿ ಬರುವಾಗ ಧೈರ್ಯ ಹೇಳುವವರಾರು? ಅದೆಲ್ಲಾ ಆಗದ ಹೋಗದ ಮಾತು. ಸುಮ್ಮನಿರಪ್ಪ. ಕಾಟ ಕೊಡಬೇಡ. ಅಣ್ಣನ ಮಾತು ಕೇಳಬೇಕು.

ಗೋಪಾಲ : ಅಮ್ಮ ನಿನಗೋಸ್ಕರ ಈ ತಿಂಡಿ ಕೊಟ್ಟಿದ್ದಾಳೆ, ತೆಗೆದುಕೊ.

(ಕೊಡುತ್ತಾನೆ.)

ಬನದ ಗೋಪಾಲ : ಇದರ ಹೆಸರೇನು, ಗೋಪಾಲ?

ಗೋಪಾಲ : ಅಯ್ಯೋ!–ಗೊತ್ತಿಲ್ಲವೆ? ಅವಲಕ್ಕಿ ಮೊಸರು.

ಬನದ ಗೋಪಾಲ : (ನಗುತ್ತ) ನನಗೆ ಕಾಡಿನಲ್ಲಿ ಹಣ್ಣು ಹಂಪಲು ತಿನ್ನುವುದೇ ವಾಡಿಕೆ.

ಗೋಪಾಲ : ಅಣ್ಣಾ, ನಿನಗೆ ಕೊಳಲೂದುವುದಕ್ಕೆ ಬರುತ್ತದೆಯೇ? ನಾನೂ ಸ್ವಲ್ಪ ಆಲಿಸಬೇಕು. ಊದು ನೋಡೋಣ.

ಬನದ ಗೋಪಾಲ : ನಿನಗೆ ಶಾಲೆಗೆ ಹೊತ್ತಾಗುವುದಿಲ್ಲವೆ?

ಗೋಪಾಲ : ಹೊತ್ತಾದರಾಯಿತು. ಓಡಿ ಹೋಗುತ್ತೇನೆ. ಊದು.

(ಬನದ ಗೋಪಾಲನು ಊದುತ್ತಾನೆ. ಗೋಪಾಲನು ಮೈ ಮರೆತು ಮಗ್ನನಾಗುತ್ತಾನೆ. ಬನದ ಗೋಪಾಲನು ಊದುವುದನ್ನು ನಿಲ್ಲಿಸಿ ಕರೆಯುತ್ತಾನೆ.)

ಬನದ ಗೋಪಾಲ : ಗೋಪಾಲ!

(ಮಾತಿಲ್ಲ)

ಗೋಪಾಲ!

(ಮೈಮುಟ್ಟುತ್ತಾನೆ.)

ಗೋಪಾಲ : (ಬೆಚ್ಚಿಬಿದ್ದು, ಬಿಸುಸುಯ್ದು)

ಅಣ್ಣಾ, ನಾನೀಗ ಎಲ್ಲಿದ್ದೇನೆ?

ಬನದ ಗೋಪಾಲ : ಅದೇಕೆ ಹೀಗೆ ಕೇಳುವೆ? ಕಾಡಿನಲ್ಲಿ.

ಗೋಪಾಲ : ಹರಿಯುವುದನ್ನು ನಿಲ್ಲಿಸಿ ನಿಂತು ಕೇಳುತ್ತಿದ್ದ ಆ ನದಿಯೆಲ್ಲಿ? ಕುಣಿದಾಡಿದ ಆ ಕಲ್ಮರಗಳೆಲ್ಲಿ? ಕಿವಿಯೆತ್ತಿ ಆಲಿಸುತ್ತಿದ್ದ ಆ ಜಿಂಕೆಗಳೆಲ್ಲಿ? ಕಲ್ಲಿನಂತೆ ನಿಂತಿದ್ದ ಆ ತುರುವೃಂದವೆಲ್ಲಿ?

ಬನದ ಗೋಪಾಲ : ಇದೇನು ಹೀಗೆನ್ನುವೆ? ನಾನೇನೂ ಕಾಣೆನಲ್ಲಾ!

ಗೋಪಾಲ : ಇಲ್ಲ, ನಾನು ಕಂಡೆ. ಯಾವುದೋ ಬೇರೊಂದು ಲೋಕಕ್ಕೆ ಹೋಗಿದ್ದೆ. ಅಲ್ಲಿ ಅವೆಲ್ಲವನ್ನೂ ನೋಡಿದೆ. ಅಲ್ಲಿಂದ ಬರುವುದಕ್ಕೆ ನನಗೆ ಮನಸ್ಸೇ ಇರಲಿಲ್ಲ. ನೀನೇ ಎಳೆದುಕೊಂಡು ಬಂದೆ.

ಬನದ ಗೋಪಾಲ : ನನಗೊಂದೂ ಅರ್ಥವಾಗುವುದಿಲ್ಲವಪ್ಪ ನಿನ್ನ ಮಾತು.

ಗೋಪಾಲ : ಅಣ್ಣಾ, ಯಾವಾಗಲೂ ನೀನು ಹಾಡುವುದು, ನಾನು ಕೇಳುವುದು! ಹೀಗಿದ್ದರೆಷ್ಟು ಚೆನ್ನಾಗಿತ್ತು!

ಬನದ ಗೋಪಾಲ : ಆಮೇಲೆ ನಾನು ದನಕಾಯುವುದೆಲ್ಲಿ! ನೀನು ಶಾಲೆಗೆ ಹೋಗುವುದೆಲ್ಲಿ? ಮುಂದೆ ಗತಿ? ನಿನಗೆ ಶಾಲೆಗೆ ಹೊತ್ತಾಯ್ತು. ಬೇಗ ಹೋಗು.

ಗೋಪಾಲ : ನಿನ್ನನ್ನು ಬಿಟ್ಟಿರುವುದಕ್ಕೆ ನನಗೆ ಮನಸ್ಸಿಲ್ಲ. ನೀನೂ ಬಾ ನನ್ನ ಜೊತೆಗೆ. ಇಬ್ಬರೂ ಶಾಲೆಗೆ ಹೋಗೋಣ. ಗುರುಗಳಿಗೆ ನಾನು ಹೇಳುತ್ತೇನೆ.

ಬನದ ಗೋಪಾಲ : ದನಕಾಯುವ ನನಗೆ ಓದುವುದು ಬರೆಯುವುದು ಇವೆಲ್ಲಾ ಏಕೆ?

ಗೋಪಾಲ : ಹಾಗಲ್ಲ, ವೇದಗಳನ್ನು ಕಲಿಸುತ್ತಾರೆ, ಶಾಸ್ತ್ರಗಳನ್ನು ಬೋಧಿಸುತ್ತಾರೆ, ವ್ಯಾಕರಣ ಹೇಳಿಕೊಡುತ್ತಾರೆ.

ಬನದ ಗೋಪಾಲ : ಅವೆಲ್ಲಾ ನನಗೆ ಬೇಡಪ್ಪ. ನಿನ್ನ ವೇದವೂ ಬೇಡ, ಶಾಸ್ತ್ರವೂ ಬೇಡ. ಅವಲಕ್ಕಿ ಮೊಸರು ಸಿಕ್ಕಿದರೆ ಅಷ್ಟೇ ಸಾಕು. ಹೊತ್ತಾಯ್ತು, ನೀನಿನ್ನು ನಡೆ. ಅಗೋ ನೋಡು, ದನಗಳು "ಅಂಬಾ" ಎಂದು ಕರೆಯುತ್ತಲಿವೆ. ನಾನಿನ್ನು ಹೋಗುತ್ತೇನೆ.

(ಓಡುತ್ತಾನೆ.)

ಗೋಪಾಲ : ನಾನೇಕೆ ಓದುವುದು? ನನ್ನಣ್ಣನಂತೆಯೆ ಇದ್ದರೆ ಸಾಲದೆ? ಆದರೆ ಅಮ್ಮ ಓದಲೇಬೇಕು ಅಂತ ಹೇಳುತ್ತಾಳೆ.

(ಮೆಲ್ಲಗೆ ಹೋಗುತ್ತಾನೆ.)

## ನೋಟ ಐದು

(ಹಳ್ಳಿಯ ಮಠ. ನಾರಾಯಣ, ರಾಮಚಂದ್ರ, ಕೃಷ್ಣಮೂರ್ತಿ, ಮಾಧವ ಇವರೆಲ್ಲಾ ಮಾತಾಡುತ್ತಾ ತಮ್ಮ ತಮ್ಮ ಚಾಪೆಗಳ ಮೇಲೆ ಕುಳಿತಿದ್ದಾರೆ.)

ಮಾಧವ : ನಾಣೀ, ಈ ದಿನ ಪಾಠ ಗಟ್ಟಿ ಮಾಡಿದ್ದೀಯಾ?

ನಾರಾಯಣ : ಇಲ್ಲ ಕಣೋ, ಎಷ್ಟು ಓದಿದರೂ ತಲೆಗೆ ಅಂಟುವುದೇ ಇಲ್ಲ.

ಕೃಷ್ಣಮೂರ್ತಿ : ದೇವರು ಅಮರ ಬರೆದವನನ್ನು ಏಕೆ ಹುಟ್ಟಿಸಿದನೊ!

ರಾಮಚಂದ್ರ : ಹಾಗೆನ್ನಬೇಡ. ನಿನ್ನ ತಲೆಯಲ್ಲಿ ಮೆದುಳನ್ನಿಡದೆ ಬೂದಿಯನ್ನೇಕೆ ತುಂಬಿದನೋ ಅನ್ನು.

ಕೃಷ್ಣಮೂರ್ತಿ : ಓಹೋ! ಗುರುಗಳು ಇವನನ್ನು ಹೊಗಳಿದರೆಂದು ಆಗಲೇ ಇವನಿಗೆ ಜಂಭ. ಬಿಡೋ ಸಾಕು, ನಿನ್ನಂತೆ ಹಗಲಿರುಳೂ ಓದಿದರೆ ನಾವೂ ಬಾಯಿಪಾಠ ಮಾಡುತ್ತೇವೆ.

ಮಾಧವ : ಇದೇಕೆ ಗೋಪಾಲ ಇನ್ನೂ ಬಂದಿಲ್ಲ?

ಕೃಷ್ಣಮೂರ್ತಿ : ಬಹು ದೂರದಿಂದ ಬರಬೇಕು. ಅದರಿಂದ ತಡವಾಯಿತೊ ಏನೊ? ಪಾಪ! ಅವನಮ್ಮ ಬಹಳ ಬಡವಳು. ಅವನಿಗೆ ತಂದೆ ಇಲ್ಲ. ಅವನ ಜೀವನವೆ ಕಷ್ಟ.

ನಾರಾಯಣ : ಗೋಪಾಲ ಬಲು ಒಳ್ಳೆಯವನು ಎಷ್ಟು ನಯ ! ಏನು ನಡತೆ !

ಮಾಧವ : ಅದರಿಂದಲೇ ಗುರುಗಳಿಗೆ ಅವನಲ್ಲಿ ಅಷ್ಟು ಪ್ರೀತಿ.

ಕೃಷ್ಣಮೂರ್ತಿ : ಅವನ ತಾಯಿ ಮಹಾಭಕ್ತಳಂತೆ. ವೇಣುಗೋಪಾಲನಲ್ಲಿ ಆಕೆಗೆ ಅತ್ಯಂತ ಪ್ರೀತಿಯಂತೆ. ಅವನು ಆಕೆಗೆ ಬೇಕಾದುದನ್ನೆಲ್ಲಾ ತಂದು ಕೊಡುತ್ತಾನೆಂದೂ ಕೆಲವರು ಹೇಳುತ್ತಾರೆ.

ಮಾಧವ : ಎಲೋ, ಗುರುಗಳು ಬಂದರೊ! ಸದ್ದು ಮಾಡಬೇಡಿ.

(ಗುರುಗಳ ಪ್ರವೇಶ. ಎಲ್ಲರೂ ವಿನಯದಿಂದ ಕೈಮುಗಿದು ನಿಲ್ಲುತ್ತಾರೆ. ಗುರುಗಳು ಬಂದು ಚಾಪೆಯಮೇಲೆ ಕುಳಿತು ಸುತ್ತಲೂ ನೋಡಿ.)

ಗುರು : ಗೋಪಾಲನೆಲ್ಲಿ?

ರಾಮಚಂದ್ರ : ಅವನಿನ್ನೂ ಬಂದಿಲ್ಲ, ಗುರುಗಳೆ.

ಗುರು : ಏಕೆ? ಸ್ವಸ್ಥವಾಗಿದ್ದಾನೆಯಷ್ಟೆ?

ಕೃಷ್ಣಮೂರ್ತಿ : ನಿನ್ನೆ ಎಲ್ಲಾ ಆರೋಗ್ಯವಾಗಿದ್ದ. ಮನೆಯಲ್ಲಿ ಏನು ತೊಂದರೆಯೊ ಏನೊ? ಅದೂ ಅಲ್ಲದೆ ಬಹುದೂರದಿಂದ ಬರಬೇಕು.

ಗುರು : ಪಾಪ!

(ಗೋಪಾಲನು ಪ್ರವೇಶಿಸಿ, ಗುರುಗಳಿಗೆ ನಮಸ್ಕರಿಸಿ ಒಡನಾಡಿಗಳೊಡನೆ ಚಾಪೆ ಹಾಕಿಕೊಂಡು ಕುಳಿತುಕೊಳ್ಳುತ್ತಾನೆ.)

ಗೋಪಾಲ, ಸೌಖ್ಯವಾಗಿದ್ದೀಯಾ?

ಗೋಪಾಲ : ಹೌದು, ಗುರುಗಳೆ–ತಮ್ಮ ಕೃಪೆ.

ಗುರು : ಮತ್ತೇಕೆ ಇಷ್ಟು ಹೊತ್ತಾಯ್ತು? ನಿನ್ನ ತಾಯಿ ಸುಖವಾಗಿ ಇರುವರಷ್ಟೆ?

ಗೋಪಾಲ : ತಾಯಿ ಸುಖವಾಗಿದ್ದಾರೆ. ನಾನು ಬರುವಾಗ ಬನದಲ್ಲಿ ನನ್ನಣ್ಣನೊಡನೆ ಸ್ವಲ್ಪ ಹೊತ್ತು ಮಾತನಾಡುತ್ತಿದ್ದೆ. ಆದ್ದರಿಂದ ಹೊತ್ತಾಯಿತು.

ಗುರು : ನಿನಗೊಬ್ಬ ಅಣ್ಣನಿರುವನೆ? ನನಗೆ ಗೊತ್ತಿರಲಿಲ್ಲ.

ಗೋಪಾಲ : ಹೌದು, ಗುರುಗಳೆ.

ಗುರು : ಅವನ ಹೆಸರೇನು?

ಗೋಪಾಲ : ಅವನ ಹೆಸರೂ ಗೋಪಾಲ ಅಂತ.

ಗುರು : ಅವನೇಕೆ ಶಾಲೆಗೆ ಬರುವುದಿಲ್ಲ? ಅವನ ಕೆಲಸವೇನು?

ಗೋಪಾಲ : ಅವನಿಗೆ ದನ ಕಾಯುವುದೇ ಕೆಲಸ.

ಗುರು : ಹಾಗಾದರೆ ಅವನಿಂದ ನಿಮ್ಮಮ್ಮನಿಗೆ ಸ್ವಲ್ಪ ಸಹಾಯವಾಗುತ್ತದೆ?

ಗೋಪಾಲ : ಹೌದು, ಗುರುಗಳೆ, ಬಹಳ ಸಹಾಯವಾಗುತ್ತದೆ.

ಗುರು : ಆಗಲಿ ಮಗು, ಅವನು ಸುಖವಾಗಿ ಬಾಳಲಿ. ನೀನೂ ಹಾಗೆಯೇ ನಿನ್ನ ತಾಯಿಗೆ ನೆರವಾಗಬೇಕು. ಮಕ್ಕಳು ದೇವರ ರಾಜ್ಯದ ಪ್ರಜೆಗಳು; ಹಾಗೆಯೆ ತಾಯಿ ದೇವರಿಗೆ ಸಮಾನ. ಈ ಪ್ರಪಂಚದಲ್ಲಿ ದೇವರ ಪ್ರೀತಿಯ ಮಹತ್ತು ತಾಯಿಯಾಗಿ ಮೈದೋರಿದೆ. ಆದ್ದರಿಂದಲೆ ತಾಯಿ ಮಕ್ಕಳಿಗಾಗಿ ತನ್ನ ಸರ್ವಸ್ವವನ್ನೂ ಮರೆತು ಅವರ ಯೋಗಕ್ಷೇಮವನ್ನೇ ಸದಾ ತನ್ನ ಹೃದಯಮಂದಿರದಲ್ಲಿ ಪ್ರತಿಷ್ಠೆಮಾಡಿ ಪೂಜಿಸುತ್ತಾಳೆ. ಮಕ್ಕಳೆಂದರೆ ತಾಯಿಗೆ ಜೀವ; ಮಕ್ಕಳೇ ಅವಳ ಬಾಳಿಗೆ ಬಾಳು. ತಾಯಿಯ ಪ್ರೇಮದ ಶಕ್ತಿಯಿಂದಲೇ ಸೃಷ್ಟಿಚಕ್ರ ನಿಲ್ಲದೆ ತಿರುಗುತ್ತದೆ. ಜಗತ್ತಿನ ಆನಂದಕ್ಕೆ ತಾಯಿಯ ಪ್ರೇಮವೇ ಆಧಾರ. ತಾಯಿಯ ವಾತ್ಸಲ್ಯವನ್ನು ಅನುಭವಿಸದವನ ಬಾಳು ಬಾಳಲ್ಲ, ಅದು ವ್ಯರ್ಥ. ಆದ್ದರಿಂದಲೆ ಪ್ರೇಮನಿಧಿಯಾದ ಪರಮಾತ್ಮನನ್ನು ಜಗಜ್ಜನನಿಯೆಂಬ ಭಾವನೆಯಿಂದ ಆರಾಧಿಸುತ್ತಾರೆ. ಕಳ್ಳನಾಗಲಿ, ಠಕ್ಕನಾಗಲಿ, ವಿದ್ವಾಂಸನಾಗಲಿ, ಮಹಾಪುರುಷನಾಗಲಿ, ಪಟುಭಟನಾಗಲಿ, ಯಾರೇ ಆಗಲಿ ತಾಯಿಯ ಮುಂದೆ ಮಕ್ಕಳೇ ಹೊರತು ಕಳ್ಳನೂ ಅಲ್ಲ, ಠಕ್ಕನೂ ಅಲ್ಲ, ವಿದ್ವಾಂಸನೂ ಅಲ್ಲ, ಮಹಾಪುರುಷನೂ ಅಲ್ಲ, ಪಟುಭಟನೂ ಅಲ್ಲ. ಮಕ್ಕಳಿರಾ! ಹೆಚ್ಚೇನು? ತಾಯಿಗೂ ಪರಮಾತ್ಮನಿಗೂ ಯಾವ ಭೇದವೂ

ಇಲ್ಲವೆಂದು ವೇದಗಳೇ ಸಾರುತ್ತಿವೆ. ಆದ್ದರಿಂದ ನೀವು ಯಾರೊಡನೆ ಹೇಗೆ ಬೇಕಾದರೂ ವರ್ತಿಸಿ, ತಾಯಿಯೊಡನೆ ಮಾತ್ರ ಮಕ್ಕಳಾಗಿರಿ. ಹಾಗಿರುವುದರಿಂದ ನಿಮಗೆ ಇಹಪರಗಳೆರಡರಲ್ಲಿಯೂ ಕಲ್ಯಾಣವುಂಟಾಗುತ್ತದೆ. ತಾಯಿಯ ಪ್ರೇಮವೇ ನಿಮ್ಮೆಲ್ಲರಾತ್ಮಗಳಿಗೆ ಜ್ಯೋತಿ, ಉತ್ಸಾಹ, ಆನಂದ, ಶಕ್ತಿ, ಮುಕ್ತಿ.

ಗೋಪಾಲ : ಗುರುಗಳೆ, ತಮ್ಮ ಉಪದೇಶವನ್ನು ಭಕ್ತಿಯಿಂದ ಎದೆಯಲ್ಲಿಟ್ಟುಕೊಂಡು ನನ್ನ ನಡತೆಯಲ್ಲಿ ತೋರಿಸುತ್ತೇನೆ. ತಮ್ಮ ಕೃಪೆ ನನಗಿರಲಿ.

ಗುರು : ಬಾಲಕರೆ, ಇಂದಿನ ಪಾಠವನ್ನು ಪ್ರಾರಂಭಿಸುವುದಕ್ಕೆ ಮುಂಚೆ, ನಿಮಗೊಂದು ವಿಷಯ ಹೇಳಬೇಕಾಗಿದೆ. ನಾಳೆ ನಮ್ಮ ಮನೆಯಲ್ಲಿ ಒಂದು ವಿಶೇಷ ಕಾರ್ಯ ನಡೆಯುತ್ತದೆ. ಅದಕ್ಕಾಗಿ ನಿಮಗೆ ಮಂಗಳಕರವಾಗಲೆಂದು ನಿಮ್ಮಿಂದ ಗುರುದಕ್ಷಿಣೆ ಸ್ವೀಕರಿಸಬೇಕೆಂದು ಬಯಸಿರುತ್ತೇನೆ. ನಿಮ್ಮ ನಿಮ್ಮ ಕೈಲಾದ ದಕ್ಷಿಣೆ ತಂದುಕೊಡಿ.

ಎಲ್ಲರೂ : (ಸಂತೋಷದಿಂದ) ಆಗಲಿ, ಗುರುಗಳೆ.

ಗುರು : ಇನ್ನು ಇಂದಿನ ಪಾಠ ಪ್ರಾರಂಭಿಸೋಣ.

(ಎಲ್ಲರೂ ಪ್ರಾರ್ಥಿಸುತ್ತಾರೆ.)

ಹರಿ ಶಿವ ಕಮಲಜ ರೂಪದಿ ತೋರುವ ಪರಮಾತ್ಮಗೆ ತಲೆಬಾಗುವೆವು
ಸತ್ಯರೂಪನಿಗೆ ನಿತ್ಯನಾದವಗೆ ಭಕ್ತಿಯಿಂದ ಕೈಮುಗಿಯುವೆವು
ಜೀವಜಂತುಗಳಿಗೆಲ್ಲ ಶಾಂತಿಸುಖವಾಗಲೆಂದು ನೆರೆ ಪಾಡುವೆವು
ಸತ್ಯಧರ್ಮಗಳು ಹೆಚ್ಚಿ ಭೂಮಿಯೊಳು ನಿಚ್ಚ ನಾವುಗಳು ಬೇಡುವೆವು.

## ನೋಟ ಆರು

(ಗೋಪಾಲನ ತಾಯಿಯ ಗುಡಿಸಲು, ತಾಯಿ ಚರಕದ ಮುಂದೆ ಕುಳಿತಿದ್ದಾಳೆ. ಗೋಪಾಲನು ಶಾಲೆಯಿಂದ ಬರುತ್ತಾನೆ.)

ತಾಯಿ : ಬಂದೆಯಾ, ಮಗು. ಬಾ, ಕುಳಿತುಕೊ.

(ಗೋಪಾಲನು ಕುಳಿತುಕೊಳ್ಳುತ್ತಾನೆ.)

ಇಂದು ನಿಮ್ಮಣ್ಣನಿಗೆ ತಿಂಡಿ ಕೊಟ್ಟೆಯಾ?

ಗೋಪಾಲ : ಹೌದಮ್ಮ, ಕೊಟ್ಟೆ.

ತಾಯಿ : ಅವನು ಹೇಗಿದ್ದ, ಮಗು

ಗೋಪಾಲ : (ದೇವರ ಗೂಡನ್ನು ತೋರಿಸಿ)

ನಮ್ಮ ಈ ವೇಣುಗೋಪಾಲನ ಹಾಗೆಯೇ ಇದ್ದ. ಇದೇ ಹೂವಿನ

ಹಾರ ಅವನ ಕೊರಳಲ್ಲಿತ್ತು. ಇದೇ ನವಿಲುಗರಿ, ಇದೇ ಉಡುಪು, ಇವನೇ ಅವನು.

ತಾಯಿ : ಮಗು, ಅವನು ನಿನ್ನೊಡನೆ ಏನು ಮಾತನಾಡಿದ?

ಗೋಪಾಲ : ಏನೇನೊ ಮಾತಾಡಿದನಮ್ಮ. ನಾನು ಕೊಳಲೂದು ಎಂದೆ. ಅವನು ಊದಿದ. ಎಷ್ಟು ಇಂಪಾಗಿತ್ತಮ್ಮ! ಕೊಳಲೂದುತ್ತ ನನ್ನನ್ನು ಎಲ್ಲಿಗೋ ಕರೆದುಕೊಂಡು ಹೋದ.

ತಾಯಿ : (ಕಾತರಳಾಗಿ) ಎಲ್ಲಿಗೆ? ಗೋಪಾಲ

ಗೋಪಾಲ : ಅದು ಯಾವ ದೇಶವೋ ನನಗೆ ತಿಳಿಯದು. ಅಲ್ಲಿ ಹರಿಯುತ್ತಿದ್ದ ಒಂದು ಹೊಳೆ ನಿಂತು ಗಾನವನ್ನಾಲಿಸುತ್ತಿತ್ತು. ದನಗಳೂ ಹಾಗೆಯೇ. ಕಲ್ಲು ಮರಗಳು ಕುಣಿದಾಡಿಬಿಟ್ಟವು. ಜಿಂಕೆಗಳ ಗುಂಪೊಂದು ಅಲ್ಲಿ ನಿಂತು ಕೊಳಲನ್ನು ಕೇಳುತ್ತಿತ್ತು. ಅಲ್ಲಿಯ ಬನಗಳು ಏನು ರಮಣೀಯ ವಾದವುಗಳಮ್ಮಾ! ಗೊಂಚಲು ಗೊಂಚಲಾಗಿ ಹಣ್ಣು ಹೂಗಳು ಜೋಲಾಡು ತ್ತಿದ್ದವು. ಮಕರಂದವನ್ನು ಹೀರಲೆಂದು ಹಾರಾಡುತ್ತಿದ್ದ ತುಂಬಿಗಳ ಝೇಂಕಾರವಂತೂ ಆ ಬನದಲ್ಲೆಲ್ಲ ತುಂಬಿಹೋಗಿತ್ತು. ಏನಮ್ಮ: ಬಣ್ಣಬಣ್ಣದ ಹಕ್ಕಿಗಳು! ತರತರದ ಮಧುರತಾನ! ಮಲಯದೆಲರು ತಳಿರ ನಡುವೆ ಮೆಲ್ಲಮೆಲ್ಲನೆ ಸುಳಿಸುಳಿದು ನಲಿದಾಡುತ್ತಿತ್ತು. ಹಸುರಂತೂ ಮೃದುವಾದ ಹಾಸಗೆಯಂತೆ ಹಬ್ಬಿಕೊಂಡು ಮುಗುಳುನಗೆಯನ್ನು ಹೊರಸೂಸುತ್ತಿತ್ತು. ಅಮ್ಮ, ಅಲ್ಲಲ್ಲಿ ಬಣ್ಣದ ಬಟ್ಟೆಗಳನ್ನುಟ್ಟುಕೊಂಡು ಬಣ್ಣದ ಹೂಗಳನ್ನು ಮುಡಿದುಕೊಂಡು ಸಡಗರದಿಂದ ತಿರುಗಾಡುವ, ಓಡುವ, ಹಾಡುವ ದಿವ್ಯ ಮೂರ್ತಿಗಳನ್ನೂ ನೋಡಿದೆ! ಅಮ್ಮ, ಅಲ್ಲಿಂದ ಬರುವುದಕ್ಕೇ ನನಗೆ ಮನಸ್ಸಿರಲಿಲ್ಲ. ಆದರೆ ನನ್ನಣ್ಣ ಎಳೆದುಕೊಂಡು ಬಂದ.

ತಾಯಿ : (ಸ್ವಗತ)

ಪರಮಾತ್ಮ, ಕಾಲದೇಶಗಳನ್ನು ಮೀರಿರುವ ನಿನ್ನ ವೇಣುನಾದದ ಮೈಮೆ, ಆನಂದ, ರಹಸ್ಯ ಇವುಗಳನ್ನು ಅನುಭವಿಸುವವರೇ ಧನ್ಯರು. ನನ್ನ ಗೋಪಾಲ, ನನ್ನ ಗೋಪಾಲನಿಗೆ ಅದನ್ನು ತೋರಿಸಿದ ನಿನ್ನನ್ನು ನಾನೆಷ್ಟು ಕೊಂಡಾಡಲಿ!

(ವೇಣುಗೋಪಾಲನ ವಿಗ್ರಹವನ್ನು ನೋಡುತ್ತಾ)

ಆಹಾ! ಬೃಂದಾವನ! ಯಮುನಾ ನದಿ!! ಗೋಪಿಯರು!!! ಭಗವಂತ!

(ತನ್ನ ಗೋಪಾಲನನ್ನು ಮುದ್ದಿಸುತ್ತಾಳೆ.)

ಗೋಪಾಲ : ಅಮ್ಮ, ನಾಳೆ ನಮ್ಮ ಗುರುಗಳ ಮನೆಯಲ್ಲಿ ಏನೊ ವಿಶೇಷವಂತೆ. ಎಲ್ಲರೂ ಗುರುದಕ್ಷಿಣೆ ತಂದುಕೊಟ್ಟು ಆಶೀರ್ವಾದ ಪಡೆಯುತ್ತಾರೆ. ನನಗೂ ಏನಾದರೂ ಕೊಡಮ್ಮ, ಗುರುದಕ್ಷಿಣೆಗಾಗಿ.

ತಾಯಿ : ಆಗಲಿ, ಮಗು, ಗುರುಗಳ ಆಶೀರ್ವಾದ ಪರಮಾತ್ಮನ ಆಶೀರ್ವಾದಕ್ಕಿಂತಲೂ ಕಡಮೆಯಾದುದಲ್ಲ. ಅವರ ಕೃಪೆ ನಿನ್ನ ಮೇಲೆ ಇರಬೇಕು. ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಸಾಕ್ಷಾತ್ ಪರಮೇಶ್ವರ ಎಂದು ಮಹಾತ್ಮರು ಹೇಳಿದ್ದಾರೆ. ಗುರುವನ್ನು ಭಕ್ತಿಯಿಂದ ಪೂಜಿಸು, ದೇವರು ಮೆಚ್ಚುತ್ತಾನೆ.

ಗೋಪಾಲ : ಏನು ಗುರುದಕ್ಷಿಣೆ ಕೊಡಲಮ್ಮ?

ತಾಯಿ : ನಾನೇನು ಕೊಡಲಿ, ಮಗು? ನಿನ್ನಣ್ಣನನ್ನೇ ಕೇಳು, ನಾಳೆ ಶಾಲೆಗೆ ಹೋಗುವಾಗ. ಅವನೇ ಏನನ್ನಾದರೂ ಕೊಟ್ಟಾನು.

ಗೋಪಾಲ : ಹೌದಮ್ಮ, ಹಾಗೆಯೇ ಮಾಡುತ್ತೇನೆ.

ತಾಯಿ : ಗೋಪಾಲ, ನಿನ್ನಣ್ಣನನ್ನು ಯಾವಾಗಲೂ ಮರೆಯಬೇಡ. ಅವನ ಮೇಲೆ ನಿನ್ನ ಪ್ರೀತಿ ನಿರಂತರವಾಗಿರಲಿ. ನಿನಗೇನು ಬೇಕಾದರೂ ಅವನನ್ನೇ ಕೇಳು. ನಿನಗೇನು ಕಷ್ಟ ಬಂದರೂ ಅವನಿಗೆ ಹೇಳು.

ಗೋಪಾಲ : ಅಮ್ಮಾ, ನನ್ನಣ್ಣನನ್ನು ನೀನೂ ನೋಡುವೆಯಂತೆ, ನಾಳೆ ನನ್ನೊಡನೆ ಬಾ. ಪಾಪ! ಅವನಿಗೆ ದನ ಕಾಯುವ ಕೆಲಸ. ಇಲ್ಲಿಗೆ ಬರಲು ಸಮಯವಿಲ್ಲವಂತೆ.

ತಾಯಿ : ಬೇಡ, ಕಂದ. ನಿನ್ನನ್ನು ನೋಡಿದರೇ ಸಾಕು, ಅವನನ್ನು ನೋಡಿದ ಹಾಗೆಯೆ. ನನ್ನ ಪಾಲಿಗೆ ನೀನೇ ಅವನು, ಅವನೇ ನೀನು.

## ನೋಟ ಏಳು

(ಕಾಡಿನಲ್ಲಿ ಗೋಪಾಲನೂ ಬನದ ಗೋಪಾಲನೂ ಮಾತನಾಡುತ್ತ ಕುಳಿತಿದ್ದಾರೆ.)

ಗೋಪಾಲ : ಅಣ್ಣಾ, ಇಂದು ಗುರುದಕ್ಷಿಣೆ ಕೊಡಬೇಕಾಗಿದೆ. ಅಮ್ಮನನ್ನು ಕೇಳಿದೆ. ನಿನ್ನನ್ನೇ ಕೇಳು ಅಂದಳು. ಏನಾದರೂ ಕೊಡಣ್ಣ.

ಬನದ ಗೋಪಾಲ : ತಮ್ಮಾ, ನಾನೇನು ಐಶ್ವರ್ಯವಂತನಲ್ಲ. ದನಕಾಯುವ ಬಡ ಹುಡುಗ. ಸ್ವಲ್ಪ ಮೊಸರನ್ನು ಕೊಡುತ್ತೇನೆ. ತೆಗೆದುಕೊಂಡು ಹೋಗು.

ಗೋಪಾಲ : ಆಗಲಿ, ನೀನೇನು ಕೊಡುವೆಯೊ, ಅದೇ ಸಾಕು.

ಬನದ ಗೋಪಾಲ : ಏನಾದರೂ ಪಾತ್ರೆ ತಂದಿದ್ದೀಯಾ?

ಗೋಪಾಲ : ಇಲ್ಲ.

ಬನದ ಗೋಪಾಲ : ನನ್ನ ಹತ್ತಿರ ಯಾವ ಲೋಹದ ಪಾತ್ರೆಯೂ ಇಲ್ಲ. ಕುಡಿಕೆಯಲ್ಲಿ ಕೊಟ್ಟರೆ ಆಗಬಹುದೆ?

ಗೋಪಾಲ : ಆಗಲಿ. ಅದಕ್ಕೇನು? ಮೊಸರು ಮಣ್ಣಿನ ಕುಡಿಕೆಯಲ್ಲಿದ್ದರೇನು, ಹೊನ್ನಿನ ಪಾತ್ರೆಯಲ್ಲಿದ್ದರೇನು?

ಬನದ ಗೋಪಾಲ : ಹಾಗಾದರೆ, ಇಲ್ಲಿಯೆ ನಿಂತಿರು. ಓಡಿಹೋಗಿ ತರುತ್ತೇನೆ.
(ಓಡಿಹೋಗಿ ತಂದು ಕೊಡುತ್ತಾನೆ.)
ಇನ್ನು ನೀನು ಹೋಗು.
(ಇಬ್ಬರೂ ಬೇರೆ ಬೇರೆ ಕಡೆ ಹೋಗುತ್ತಾರೆ.)

## ನೋಟ ಎಂಟು

(ಹಳ್ಳಿಯ ಮಠದ ಹುಡುಗರೆಲ್ಲರೂ ಗುರುದಕ್ಷಿಣೆ ಹಿಡಿದು ನಿಂತಿದ್ದಾರೆ. ಎಲ್ಲರೂ ಬಹು ಬೆಲೆಯುಳ್ಳ ವಸ್ತುಗಳನ್ನು ತಂದಿದ್ದಾರೆ. ಗೋಪಾಲನೂ ತನ್ನ ಕುಡಿಕೆಯನ್ನು ಹಿಡಿದುಕೊಂಡು ದೂರದಲ್ಲಿ ನಿಂತಿದ್ದಾನೆ.)

ರಾಮಚಂದ್ರ : ಕಿಟ್ಟಾ, ನೀನೇನು ತಂದಿರುವೆ?

ಕೃಷ್ಣಮೂರ್ತಿ : ನಾನೊಂದು ರತ್ನ, ಒಂದು ಧೋತಿ, ಒಂದು ಬೆಳ್ಳಿಯ ತಟ್ಟೆ! ನೀನೇನು ತಂದಿರುವೆ?

ರಾಮಚಂದ್ರ : (ತೋರಿಸುತ್ತಾ)
ಮಗುಟ, ಹಣ್ಣು, ಚಿನ್ನದ ತಟ್ಟೆ.

ಕೃಷ್ಣಮೂರ್ತಿ : (ಮಾಧವನ ಕಡೆ ನೋಡಿ) ನೀನು?

ಮಾಧವ : (ತೋರಿಸಿ) ಚಿನ್ನದ ನಾಣ್ಯಗಳು, ತೆಂಗಿನಕಾಯಿ, ಬೆತ್ತದಿಂದ ಹೆಣೆದ ತಟ್ಟೆ. ನೀನೋ, ನಾಣೀ?

ನಾರಾಯಣ : ನಾನೊಂದು ಬಾಳೆಯ ಗೊನೆ, ಒಂದು ಜರತಾರಿ ಪಂಚೆ.

ರಾಮಚಂದ್ರ : ಗೋಪಾಲನೆಲ್ಲಿ?
(ನೋಡಿ)
ನೀನೇನು ತಂದಿದ್ದೀಯೋ?
ಗೋಪಾಲನು ತೋರಿಸುತ್ತಾನೆ.

ಮಾಧವ : ಓಹೋ ಮಣ್ಣಿನ ಕುಡಿಕೆ!
(ಎಲ್ಲರೂ ನಗುತ್ತಾರೆ.)

ಗೋಪಾಲ : ತುಂಬಾ ಮೊಸರಿದೆ, ನಮ್ಮಣ್ಣ ಕೊಟ್ಟದ್ದು.

ಕೃಷ್ಣಮೂರ್ತಿ : ಗುರುಗಳೇನೆಂದು ತಿಳಿದುಕೊಂಡಾರು, ಮಣ್ಣಿನ ಕುಡಿಕೆ ಕೊಟ್ಟರೆ? ಬೇರೇನೂ ಇರಲಿಲ್ಲವೆ?

ಗೋಪಾಲ : ಅಮ್ಮ "ಏನೂ ಇಲ್ಲ, ನಾವು ಬಡವರು" ಎಂದಳು. ಅದಕ್ಕೆ ನನ್ನಣ್ಣನ್ನ ಕೇಳಿದೆ. ಅವನು ಇದನ್ನು ಕೊಟ್ಟ. ಗುರುಗಳಿಗೆ ಹೇಳುತ್ತೇನೆ–ನಾವು ಬಡವರು ಎಂದು.

ನಾರಾಯಣ : ಹೋಗಲಿ ಬಿಡಿ, ಪಾಪ!

(ಗುರುಗಳು ಬಂದು ಕುಳಿತುಕೊಳ್ಳುತ್ತಾರೆ. ಒಬ್ಬೊಬ್ಬರಾಗಿ ತಾವು ತಂದ ಗುರುದಕ್ಷಿಣೆಗಳನ್ನು ಕೊಟ್ಟು ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ಗುರುಗಳು ಆಶೀರ್ವದಿಸುತ್ತಾರೆ. ಅನಂತರ ದೂರದಲ್ಲಿ ನಿಂತಿದ್ದ ಗೋಪಾಲನನ್ನು ನೋಡುತ್ತಾರೆ.)

ಗುರು : ಗೋಪಾಲ, ಅದೇಕೆ ದೂರ ನಿಂತಿದ್ದೀಯಾ? ಬಾ, ಏನು ತಂದಿದ್ದೀಯ, ಕೊಡು.
(ಬಾಲಕರು ನಗುತ್ತಾರೆ.)
ನಗುವುದೇಕೆ ಮಕ್ಕಳಿರಾ? ಗುರುಗಳಿಗೆ ಪ್ರೇಮದಿಂದ, ಭಕ್ತಿಯಿಂದ ಏನು ಕೊಟ್ಟರೂ ಅದು ಮಹತ್ತಾದ್ದೆ. ನನಗೆ ಬೇಕಾಗಿರುವುದು ದಕ್ಷಿಣೆಯ ಬೆಲೆಯಲ್ಲ, ಅದನ್ನು ಕೊಡುವವನ ಹೃದಯದಲ್ಲಿನ ಭಕ್ತಿ. ಬಾ, ಗೋಪಾಲ, ನೀನು ತಂದಿರುವುದನ್ನು ಕೊಡು, ನಾಚಿಕೆಯೇಕೆ?

(ಗೋಪಾಲನು ಕುಡಿಕೆಯನ್ನಿಟ್ಟು ನಮಸ್ಕಾರ ಮಾಡುತ್ತಾನೆ. ಗುರುಗಳು ಆಶೀರ್ವಾದ ಮಾಡಿ ಮೊಸರನ್ನು ಒಂದು ದೊಡ್ಡ ಪಾತ್ರೆಗೆ ಹೊಯ್ದು ಕುಡಿಕೆಯನ್ನು ಕೆಳಗಿಡುತ್ತಾರೆ.)

ರಾಮಚಂದ್ರ : ಇದೇನು, ಗುರುಗಳೆ! ಮೊಸರೆಲ್ಲಾ ಕುಡಿಕೆಯಲ್ಲಿಯೆ ಇದೆಯಲ್ಲ! ಬಹಳ ಗಟ್ಟಿಯಾದ ಮೊಸರಿರಬೇಕು.

(ಗುರುಗಳು ನೋಡಿ ಆಶ್ಚರ್ಯದಿಂದ ಅದನ್ನು ತೆಗೆದುಕೊಳ್ಳುತ್ತಾರೆ.)

ಗುರು : ಇದೇನು ಕೌತುಕ! ಮೊಸರನ್ನು ಪಾತ್ರೆಗೆ ಹೊಯ್ದಿದ್ದೇನೆ! ಆದರೂ ತುಂಬಾ ಇದೆ.

(ಮತ್ತೆ ಹೊಯ್ಯುತ್ತಾರೆ.)

ಕೃಷ್ಣಮೂರ್ತಿ : ಮತ್ತೂ ತುಂಬಾ ಇದೆ, ನೋಡಿ ಗುರುಗಳೆ!
(ಗುರುಗಳು ಬೆರಗಾಗಿ ಅದನ್ನೂ ಹೊಯ್ಯುತ್ತಾರೆ.)

ನಾರಾಯಣ : ಇದೇನಾಶ್ಚರ್ಯ! ಗೋಪಾಲ, ಇದನ್ನು ನಿನಗೆ ಯಾರು ಕೊಟ್ಟರು?

ಗೋಪಾಲ : ಕಾಡಿನಲ್ಲಿರುವ ನನ್ನಣ್ಣ ಗೋಪಾಲ.
(ಗುರುಗಳೆದ್ದು ಗೋಪಾಲನನ್ನು ಮುದ್ದಿಸುತ್ತಾರೆ.)

ಗುರು : ಗೋಪಾಲ, ನನಗೆ ಅವನನ್ನು ತೋರಿಸುವೆಯ? ಅವನನ್ನು ತೋರಿಸಿ ನನ್ನನ್ನು ಧನ್ಯನನ್ನಾಗಿ ಮಾಡು.

(ಗೋಪಾಲನೂ ಗುರುಗಳೂ ಹೋಗುತ್ತಾರೆ.)

ರಾಮಚಂದ್ರ : ಇದೇನಾಶ್ಚರ್ಯವೋ! ಎಷ್ಟು ಚೆಲ್ಲಿದರೂ ತುಂಬಿಕೊಳ್ಳುತ್ತದೆ. ಕುಡಿಕೆ?

ಕೃಷ್ಣಮೂರ್ತಿ : ಗೋಪಾಲನ ಪೂಣ್ಯವೇ ಪುಣ್ಯ.

ಮಾಧವ : ಅವನಣ್ಣ, ಇನ್ನಾರು ಅಲ್ಲ ಕಣೋ! ಅವನಮ್ಮ ಪೂಜಿಸುವ ವೇಣುಗೋಪಾಲನೇ ಇರಬೇಕು. ಬನ್ನಿ, ನಾವೂ ಓಡಿ ಹೋಗಿ ನೋಡೋಣ.

ನಾರಾಯಣ : ನಮಗೂ ಆ ಪುಣ್ಯ ಲಭಿಸಿದರೆ ಸಾಕು!

(ಎಲ್ಲರೂ ಓಡುತ್ತಾರೆ.)

## ನೋಟ ಒಂಬತ್ತು

(ಕಾಡು, ಗೋಪಾಲನ ಕೈ ಹಿಡಿದು ಗುರುಗಳು ಬರುತ್ತಾರೆ.)

ಗುರು : ಗೋಪಾಲ, ನಿನ್ನ ಭಾಗ್ಯಕ್ಕೆ ಎಣೆಯಿಲ್ಲ. ದಿನವೂ ನಿನಗವನು ಕಾಣುವನೆ?

ಗೋಪಾಲ : ಹೌದು, ಗುರುಗಳೆ, ದಿನವೂ ನಾನು ನನ್ನಣ್ಣನೊಡನೆ ಮಾತಾಡುತ್ತೇನೆ. ಆಟವಾಡುತ್ತೇನೆ. ಅವನು ಕೊಳಲೂದುವುದನ್ನೂ ಕೇಳುತ್ತೇನೆ.

ಗುರು : ಎಲ್ಲಿ, ಇದೇ ಸ್ಥಳದಲ್ಲಿಯೆ?

ಗೋಪಾಲ : ಹೌದು, ಕರೆಯುತ್ತೇನೆ, ತಾಳಿ. "ಅಣ್ಣಾ, ಅಣ್ಣಾ, ಗೋಪಾಲಣ್ಣಾ."

(ಉತ್ತರವಿಲ್ಲ.)

ಗುರು : ಏನೋ, ಉತ್ತರವೇ ಇಲ್ಲ.

ಗೋಪಾಲ : ಅಣ್ಣಾ, ಗೋಪಾಲಣ್ಣಾ, ನಮ್ಮ ಗುರುಗಳು ಬಂದಿದ್ದಾರೆಯೋ, ಬಾರೋ.
(ಸ್ವಲ್ಪ ಆಲಿಸಿ)
ಅಣ್ಣಾ, ಏ ಅಣ್ಣಾ!

ಗುರು : ಏನು ಗೋಪಾಲ ನಿಜವಾಗಿಯೂ ಬರುತ್ತಿದ್ದನೆ?

ಗೋಪಾಲ : ಹೌದು, ಗುರುಗಳೆ, ನಾನು ಸುಳ್ಳು ಹೇಳುತ್ತೇನೆಯೆ? ನೋಡಿ ಇದೇ ಹಾಸುಗಲ್ಲಿನ ಮೇಲೆ ಎಷ್ಟೋ ಸಲ ಇಬ್ಬರೂ ಕುಳಿತು ಹರಟೆಯಾಡಿದ್ದೇವೆ. ಸ್ವಲ್ಪ ತಾಳಿ, ಅವನೇನೋ ಕೆಲಸದ ಮೇಲಿರಬಹುದು. ಮತ್ತೆ ಕರೆಯುತ್ತೇನೆ. "ಅಣ್ಣಾ, ಅಣ್ಣಾ, ಏ ಗೋಪಾಲಣ್ಣಾ!"

(ನಿರುತ್ತರ, ಗೋಪಾಲನು ದುಃಖದಿಂದ)

ಏ ಅಣ್ಣಾ, ಬಾರೋ, ಗುರುಗಳೂ ಬಂದಿದ್ದಾರೊ. ನೀನು ಬಾರದಿದ್ದಲ್ಲಿ ಸುಳ್ಳು ಹೇಳುತ್ತೇನೆಂದು ತಿಳಿದುಕೊಳ್ಳುತ್ತಾರೋ, ಬಾರೋ.

ಬನದ ಗೋಪಾಲ : (ಕಾಣಿಸಿಕೊಳ್ಳದೆ)

ಏನು, ಗೋಪಾಲ?

ಗೋಪಾಲ : ಕೇಳಿಸಿತೆ, ಗುರುಗಳೆ?

ಗುರು : ಹೌದು. ಅವನು ಇಲ್ಲಿಗೆ ಬರುವಂತೆ ಹೇಳಪ್ಪ. ನಾನೂ ನೋಡಬೇಕು.

ಗೋಪಾಲ : ಅಣ್ಣಾ, ಗುರುಗಳು ನಿನ್ನನ್ನು ನೋಡಬೇಕಂತೆ, ಇಲ್ಲಿ, ಬಾ'ಣ್ಣ.

ಬನದ ಗೋಪಾಲ : (ಕಾಣಿಸಿಕೊಳ್ಳದೆ)

ತಮ್ಮಾ, ಗೋಪಾಲ, ನಿನ್ನ ತಾಯಿಯ ಭಕ್ತಿ, ನಿನ್ನೊಲ್ಮೆ ಇವುಗಳಿಗೆ ಮೆಚ್ಚಿ ನಿನಗೆ ಕಾಣಿಸಿಕೊಂಡು ನಿನ್ನೊಡನೆ ಆಟವಾಡುತ್ತೇನೆ. ನಿಮ್ಮ ಗುರುಗಳಿಗೆ ಹೇಳು: ನನ್ನನ್ನು ನೋಡುವ ಕಾಲ ಅವರಿಗಿನ್ನೂ ಬಂದಿಲ್ಲ. ಅವರಿನ್ನೂ ಬಹುಕಾಲ ಕಾಯಬೇಕು.

(ಗೋಪಾಲನು ಕಂಬನಿ ತುಂಬಿ ಗುರುಗಳ ಕಡೆ ನೋಡುತ್ತಾನೆ. ಗುರುಗಳು ಅವನನ್ನು ಮುದ್ದಾಡುತ್ತಾರೆ.)

ಗುರು : ಕಂದ, ಗೋಪಾಲ, ನೀನೆ ಧನ್ಯ! ನಿನ್ನನ್ನು ಪಡೆದ ಮಾತೆಯೆ ಪವಿತ್ರಳು; ನಿನ್ನ ಸಂಗ ಲಭಿಸಿದ ನಾನೇ ಪುಣ್ಯವಂತ. ನಿನ್ನಣ್ಣನನ್ನು ನಾನಿನ್ನು ನೋಡುವುದೇಕೆ? ನಿನ್ನನ್ನು ನೋಡಿದೆನಲ್ಲಾ ಅಷ್ಟೇ ಸಾಕು. ಯಾವ ಜನ್ಮದ ಪುಣ್ಯ ಫಲವೋ ಇದು? ಭಕ್ತನಿಗೂ ಭಗವಂತನಿಗೂ ಭೇದವಿಲ್ಲ. ನನ್ನ ಪಾಲಿಗೆ ನೀನೇ ಅವನು

(ಹುಡುಗರೆಲ್ಲ ಓಡಿಬರುತ್ತಾರೆ.)

ಮಕ್ಕಳಿರಾ, ವೇಣುಗೋಪಾಲನ ಒಡನಾಡಿಯಾದ ಈ ಗೋಪಾಲನನ್ನು ನೋಡುವ ನಾವೇ ಧನ್ಯರು. ಬನ್ನಿ, ಎಲ್ಲರೂ ಸೇರಿ ಪರಮಾತ್ಮನನ್ನು ಪ್ರಾರ್ಥಿಸೋಣ.

(ಎಲ್ಲರೂ ಹಾಡುತ್ತಾರೆ.)

ಜಯತು ಜಯ ಜಗದಂತರಾತ್ಮನಿಗೆ ಜಯತು ಜಯತು
ಜಯತು ಜಯ ಚೈತನ್ಯವಾರಿಧಿಗೆ ಜಯತು ಜಯತು
ಜಯತು ಜಯ ಸಚ್ಚಿದಾನಂದನಿಗೆ ಜಯತು ಜಯತು
ಜಯತು ಜಯ ಪರಮ ಕರುಣಾನಿಧಿಗೆ ಜಯತು ಜಯತು
ಜಯತು ಜಯ ಭಕ್ತಸುರಭೂಜನಿಗೆ ಜಯತು ಜಯತು
ಜಯತು ಜಯ ಶ್ರೀರಾಮಕೃಷ್ಣರಿಗೆ ಜಯತು ಜಯತು.

# ಜಯಂಟ್ ಮಾಮಾ

ಕೆ.ವಿ. ಸುಬ್ಬಣ್ಣ

## ಪಾತ್ರಗಳು

ರಾಕ್ಷಸ
ಹನುಮನಾಯಕ
ಚೀಫ್ ಇಂಜಿನಿಯರ್
ಮುದುಕ ಮೇಷ್ಟ್ರು
ಸಿಸ್ಟರ್
ಪೊಲೀಸರು
ಚಾರು
ಚೇರ
ಕಾಮು
ಬಿಂಕು
ಚೆನ್ನ
ಬಾಳ
ಬಂಟು
ಪಮ್ಮಿ
ತಂಪ
ಸೊಂಪ
ಸುಪ್ವಿ
ಜೇನಿ
ಕೇಳು
ಮೀನಿ
ಸೋನಿ
ಬಾನಿ
ನಿಮ್ಮಿ
ಮಿಟ್ಟಿ
ಸುಗ್ಗಿ
ಜೆಟ್ಟಿ
ವಾದ್ಯಗಾರರು
ಇತ್ಯಾದಿ

# ಜಯಂಟ್ ಮಾಮಾ

(ನಾಟಕ ಪ್ರಾರಂಭವಾಗುವ ಮೊದಲು ಸ್ವಲ್ಪಕಾಲ ಕತ್ತಲಲ್ಲೇ ಮಕ್ಕಳ ಆಟದ ಗದ್ದಲ. ಆಟದ ಘೋಷಣೆಗಳು ಇತ್ಯಾದಿ ಕೇಳುತ್ತಿರುತ್ತದೆ. ನಾಟಕ ಪ್ರಾರಂಭವಾಗಿ ಕ್ರಮೇಣ ಬೆಳಕು ಹರಿದ ಹಾಗೆ ಹಿನ್ನೆಲೆಯಲ್ಲಿ ಒಂದು ಅಣೆಕಟ್ಟು, ಅದರ ಕೆಳಗಿನ ಅಂಗಳ, ಪಾರ್ಕ್‌ನ ಹಾಗೆ ಕಾಣುವ ಗಿಡಮರಗಳು ಇತ್ಯಾದಿ ಕಾಣಿಸುತ್ತವೆ. ಅಲ್ಲಿ ಮಕ್ಕಳು ಆಡುತ್ತಿದ್ದಾರೆ. ಮಕ್ಕಳ ಆಟದ ತ್ವರಿತ ಚಲನೆಯಲ್ಲಿ ನೃತ್ಯಗತಿಯೂ ಅವರ ಕೂಗು ಗದ್ದಲಗಳಲ್ಲಿ ಸ್ವರಮೇಳವೂ ಇದೆ.)

(ಸ್ವಲ್ಪ ಹೊತ್ತಿನ ಅನಂತರ-ಮುನ್ನೆಲೆಯಲ್ಲಿ ಕೋಡಂಗಿ ಕುಣಿತ ಕುಣಿಯುತ್ತ ಹನುಮನಾಯಕನ ಪ್ರವೇಶ – ದಿಗ್ಭ್ರಮೆಯಲ್ಲಿ.)

ಹನುಮ : ಅಲೆ!......ಅಲೆಲೆ!......ಆಲೆಲೆಲೆಲೆಲೆ!......

(ಹಾಗೇ ದಿಗ್ಭ್ರಮೆಯಿಂದ ಎಲ್ಲವನ್ನೂ ನೋಡುತ್ತ ನೋಡುತ್ತ ಅದೇ ಗತಿಯಲ್ಲೇ ನಿಷ್ಕ್ರಮಿಸುತ್ತಾನೆ. ಆಮೇಲೆ, ಚೀಫ್ ಇಂಜಿನಿಯರ್, ಮುದುಕ ಮೇಷ್ಟರು ಮತ್ತು ಕಾನ್ವೆಂಟ್ ಸಿಸ್ಟರ್ – ಪ್ರವೇಶಿಸುತ್ತಾರೆ.)

ಚೀಫ್ : Understand? ತಿಳೀತಾ? ಮಕ್ಕಳು ಅಂದ್ರೆ ಅವರೇ ಮುಂದಿನ ರಾಷ್ಟ್ರ ಜನಾಂಗ, ಸಂಪತ್ತು. ನಾವು ಯಾಕೆ ಶ್ರಮಾ ಪಡ್ಬೇಕು? ಅವರಿಗೋಸ್ಕರವಾಗಿ! understand?

ಸಿಸ್ಟರ್ : ಎಸ್, ಸರ್.

ಮೇಷ್ಟ್ರ : ನಾ ಹೇಳೋಕೆ ಬಂದದ್ದು ಅಂತಂದ್ರೆ, ಸುಡುಗಾಡು ಸುಂಟಿ ಮಕ್ಕಳಿಗಾಗಿ ನೇವೇಯೇ....

ಚೀಫ್ : ನಾ ಹೇಳ್ತಾ ಇದೀನಿ, ತಿಳೀತಾ?.....ದೇಶ ಮುಖ್ಯ, ರಾಷ್ಟ್ರ ಮುಖ್ಯ, ಅದೇನೋ ಹೇಳ್ತಾರಲ್ಲ ಜನನೀ.....ಜನನೀ....ಗರೀಯಸೀ.....

ಮೇಷ್ಟ್ರ : ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ಅಂತಂದ್ಹೇಳಿ.....

ಚೀಫ್ : ತಿಳೀತಾ? ರಾಷ್ಟ್ರದಲ್ಲಿ ಈ ನಮ್ಮ ಪ್ರಾಜೆಕ್ಟ್‌ನಂಥಾ ಯೋಜನೆಗಳು ಮುಖ್ಯ. ಪೂಜ್ಯ ನೆಹರೂಜಿ ಹೇಳಿದ ಹಾಗೆ ಇವೇ ನಮ್ಮ ರಾಷ್ಟ್ರದ ದೇವಾಲಯಗಳು–understand? ಇವುಗಳ ರಕ್ಷಣೆ ನಮ್ಮ ಕರ್ತವ್ಯ, ಪವಿತ್ರವಾದ ಕರ್ತವ್ಯ, ತಿಳೀತಾ?

ಸಿಸ್ಟರ್ : ಎಸ್, ಸರ್.

ಮೇಷ್ಟ್ರ : ಹಾಗಂತಂದ್ರೂ ಕೂಡಾನೂವೇ....

ಚೀಫ್ : ನೋನೋ ನೋನೋ ನೋನೋ! ಬೇರೇ ಮಾತೇ ಇಲ್ಲ, understand?... ಇದು restricted area ಅಂತ ಸರ್ಕಾರ ಡಿಕ್ಲೇರ್ ಮಾಡಿದೆ. ಅದನ್ನ ಕಾಪಾಡೋದು ನನ್ನ ಕರ್ತವ್ಯ. ಮಕ್ಕಳನ್ನೇ ಆಗಲಿ, ಇಲ್ಲಿ ಬಿಡೋದು ಕಾನೂನಿಗೆ ವಿರುದ್ಧ. ಇನ್ನು ಇಲ್ಲಿ ಕಾಯೋದಕ್ಕೆ ಸೆಕ್ಯುರಿಟಿ ಗಾರ್ಡ್ಸ್ ಹಾಕ್ತೇವೆ. ಮಕ್ಕಳು ಆಡೋದಕ್ಕೆ ಬೇರೆ ಜಾಗಕ್ಕೆ ಹೋಗಬೇಕಾಗತ್ತೆ....understand?

ಸಿಸ್ಟರ್ : ಸರಿ, ಸರ್.

ಮೇಷ್ಟ್ರು : ಆದ್ರೂ ಕೂಡಾ ನಾನೂನೂವೇ, ನಾ ಯಾಕೆ ಹೇಳೋಕೆ ಬಂದೇ ಅಂತಂತಂದ್ರೆ... ಸುಡುಗಾಡು ಸುಂಟಿ....

ಚೀಫ್ : ನನಗೂ ಗೊತ್ತು. ಮಕ್ಕಳಿಗೆ ಈ ಊರಲ್ಲಿ ಸರಿಯಾದ ಆಟದ ಬಯಲಿಲ್ಲ.

ಸಿಸ್ಟರ್ : ಹೌದು ಸರ್. ಅದೇ.

ಚೀಫ್ : ಅದಕ್ಕೆ ವ್ಯವಸ್ಥೆ ಮಾಡೋಣ, understand?... ಈ ಪ್ಲಾನ್‌ನಲ್ಲಿ ಆಗೋಲ್ಲ. ಫಂಡ್ಸ್ ಇಲ್ಲ. ಮುಂದಿನ ಪಂಚವಾರ್ಷಿಕ ಯೋಜನೇಲಿ ಪರಿಶೀಲಿಸೋಣ, ಪ್ರಯತ್ನಿಸೋಣಂತೆ.

ಮೇಷ್ಟ್ರು : ಹಾಗಂತಂತಂದ್ರೆ...ಸುಡುಗಾಡು ಸುಂಟಿ ಈ ಹುಡುಗರೆಲ್ಲ ಆ ಹೊತ್ತಿಗೆ ಮುದುಕರಾಗಿ ಬಿಡ್ತಾರಲ್ಲ ಅಂತಂತಂದು....

(ತಟ್ಟನೆ ಇಲ್ಲಿನ ದೃಶ್ಯ ಮೂಕವಾಗಿ ಹಿನ್ನೆಲೆಯ ಮಕ್ಕಳ ಆಟದ ಸದ್ದು ಮೊಳಗತೊಡಗುತ್ತದೆ. ಮುನ್ನೆಲೆಯಲ್ಲಿ ಚೀಫ್ ಇಂಜಿನಿಯರ್ ಕೋಪದಿಂದ ಕೈ ಬೀಸಿ ಕುಣಿದಾಡುತ್ತ ಏನೋ ಹೇಳುತ್ತಿರುವುದು ಮೂಕ ದೃಶ್ಯವಾಗಿ ಕಾಣಿಸುತ್ತಿರುತ್ತದೆ. ಸ್ವಲ್ಪ ಹೊತ್ತಿನ ಮೇಲೆ, ಪುನಃ ಹಿನ್ನೆಲೆ ಮೂಕವಾಗಲು–)

ಚೀಫ್ : Understand? ತಿಳೀತಾ?

ಸಿಸ್ಟರ್ : ತಾವು ಹೇಳೋದು ಕರೆಕ್ಟೇ ಸರ್.

ಮೇಷ್ಟ್ರು : ಆದ್ರೂ ಕೂಡಾನೂವೇ ನಾ ಯಾಕೆ ಹೇಳೋಕೆ ಬಂದೆ ಅಂತಂತಂದ್ರೆ, ಸುಡುಗಾಡು ಸುಂಟಿ ಮಾನವತೆ ಅನ್ನೋದರ ದೃಷ್ಟಿಯಿಂದಾ.....

ಚೀಫ್ : ಅಂದ್ರೆ?.... ಏನು ಮಾನವೀಯ್ತೆ? ನಾವು ಮನುಷ್ಯರು ಅಲ್ವಾ? ನಾವು ರಾಕ್ಷಸರಾ?....

(ತಟ್ಟನೆ ಹನುಮನಾಯಕನ ಪ್ರವೇಶ, ಕುಣಿತದಲ್ಲಿ. ಚೀಫ್ ಇಂಜಿನಿಯರ್ ಗುಂಪಿನ ಮಾತುಕತೆ ಮೂಕ ದೃಶ್ಯವಾಗಿ ಪರಿವರ್ತನೆಗೊಳ್ಳುತ್ತದೆ. ಹನುಮನಾಯಕನ ಪ್ರವೇಶ, ಅವನ ಮಾತು ಇದಾವುದೂ ಚೀಫ್ ಇಂಜಿನಿಯರ್ ಮತ್ತಿತರರಿಗೆ ಕಾಣಿಸುತ್ತಿಲ್ಲ ಎಂಬುದು ಭಾಸವಾಗುತ್ತದೆ.)

ಹನುಮ : ಹೋಯ್, ತಾರಾ ತಿಗಡಿ ಚಿನ್ನದ ಬುಗುಡಿ, ಇದೇನು ಚೋದ್ಯವಯ್ಯಾ ಇದೇನು

ಚೋದ್ಯ! ನನಗೇ ದಿಕ್ಕು ತಪ್ಪಿ ಹೋಯಿತೋ ಅಂತ ಮತ್ತೆ ಮತ್ತೆ ನೋಡುತ್ತೇನೆ, ಅಲ್ಲ. ಅಥವಾ ಕನಸೋ ಅಂತ ಯೋಚಿಸ್ತೇನೆ, ಆದರೆ ಮನುಷ್ಯರ ಹಾಗೆ ನಮಗೆ ಸಾವೂರು ಸಂತೆ ಕನಸಿನ ಕಂತೆ ಕಾಣಲಿಕ್ಕೇ ಇಲ್ಲವಲ್ಲ!.... ಸ್ಥಳ ತಪ್ಪಲಿಲ್ಲ, ತಪ್ಪಲಿಲ್ಲ. ಬೆಟ್ಟದ ತಪ್ಪಲಲ್ಲೇ ಇದ್ದೇನಲ್ಲ. ಅದೇ ಕಾಡು, ಅದೇ ಹೊಳೆ. ನಾವು ಊರುಬಿಟ್ಟು ಎಷ್ಟು ದಿನವಾಯ್ತಯ್ಯಾ ಅಂತ ಯೋಚಿಸುವುದಾದರೆ – ದಿನವೆಲ್ಲಾ ಮಾಸಗಳು, ಮಾಸಗಳೆಲ್ಲಾ ಋತುಗಳು, ಋತುಗಳೆಲ್ಲಾ ಅಯನಗಳು, ಅಯನಗಳೆಲ್ಲಾ ವರ್ಷಗಳು – ಸುಮಾರು ನಾಕೆಂಟು ಹತ್ತಿಪ್ಪತ್ತು ವತ್ಸರಗಳೇ ಕಳೆದು ಬಿಟ್ಟಿವೆ. ನಾವು ಊರು ಬಿಟ್ಟು ಈ ಅವಧಿಯಲ್ಲಿ ಇಲ್ಲಿ–ಬಾಳೇ ಬದಲು ಕಂಚಿನ ಕದಲು ಅಂತ, ಈ ಹೊಳೇಗೆ ಒಂದು ಅಣೆಕಟ್ಟೆ ಕಟ್ಟಿಬಿಟ್ಟಿದಾರೆ, ಯಂತ್ರತಂತ್ರ ಸ್ಥಾಪಿಸಿ ಬಿಟ್ಟಿದ್ದಾರೆ. ಆಕಾಶದ ತುಂಬಾ ತಂತೀ ಎಳದು ಬಿಗದು ಕಟ್ಟಿ ಬಿಟ್ಟಿದ್ದಾರೆ. ಅಂಚುಕಟ್ಟಿ ಮಿಂಚು ಬೆಳೀತಿದಾರೆ!.... ಈ ಕಡೆ ಒಂದು ಪಟ್ಟಣವೇ ಬೆಳಕೊಂಡು ಬಿಟ್ಟಿದೆಯಲ್ಲಾ, ಬೆಂಕಿ ಪಟ್ಟಣ!..... ಎಲ ಎಲ ಎಲಾ! ಇನ್ನು ಇಲ್ಲಿಂದ ಅರ್ಧಗಾವುದ ದೂರದಲ್ಲಿರುವಂಥಾ ನಮ್ಮ ಅರಮನೆಯಾದರೂ ಏನಾಗಿದ್ದೀತಯಾ? ನೋಡಬೇಕು, ನೋಡಬೇಕು...(ಪ್ರೇಕ್ಷಕರಿಗೆ) ಏನಂದ್ರಿ?.... (ಚೀಫ್ ಹತ್ತಿರ ಹೋಗಿ) ಇವರಿಗೆ ತಿಳಿದೀತಲ್ಲ ಅಂತಲೋ? ಇಲ್ಲ ಇಲ್ಲ, ಕಣ್ಣಿಗೆ ಬೆಲ್ಲ. ನನಗೆ ಅವರು ಕಾಣಿಸ್ತಾರೆ, ಪರಂತು ಅವರಿಗೆ ನಾವು ಕಾಣಿಸೋಲ್ಲ. ಹೌದಯ್ಯ, ನಮ್ಮ ದಣಿಗಳಿಗೆ ಈಶ್ವರ ದೇವರದ್ದೇ ವರ ಉಂಟಲ್ಲ, ನಾವು ಮನುಷ್ಯ ಮಾತ್ರದ ಗಂಡುಗಳಿಗೂ ಕಾಣಲಿಕ್ಕಿಲ್ಲ, ಮನುಷ್ಯ ಮಾತ್ರದ ಹೆಣ್ಣುಗಳಿಗೂ ಕಾಣಲಿಕ್ಕಿಲ್ಲ–ಅಂತ. ನೋಡಿ ಬೇಕಾದರೆ! ಕಣ್ಣಿಗೆ ಕನ್ನ, ಮಣ್ಣಿಗೆ ಅನ್ನ– (ಎನ್ನುತ್ತ ಚೀಫ್‌ನ ಸುತ್ತ ಸುಳಿದಾಡಿ ತೋರಿಸುತ್ತಾನೆ. ಅವನಿಗೆ ಈತ ಕಾಣುವುದೇ ಇಲ್ಲ) ಇರಲಿ, ಸಮಯ ಹಾಳುಮಾಡತಕ್ಕದ್ದಲ್ಲ. ಇನ್ನೊಂದು ಸಲ ಈ ಬೆಂಕಿಪಟ್ಟಣ ಸುತ್ತಿ ಪರಿಶೀಲಿಸಿಯೇ ಬಿಡುವ. ಆಂಜನೇಯಸ್ವಾಮಿ ಲಂಕಾಪಟ್ಟಣ ವನ್ನು ಪರಿಶೀಲಿಸಿದ ಪ್ರಕಾರದಲ್ಲಿ.....

(ಎನ್ನುತ್ತ ನಿಷ್ಕ್ರಮಿಸುತ್ತಾನೆ. ಮತ್ತೆ ಚೀಫ್ ಇಂಜನಿಯರ್ ಗುಂಪು ಕೇಂದ್ರಗೊಳ್ಳುತ್ತದೆ.)

ಚೀಫ್ : Understand? ತಿಳೀತಾ? ಇವತ್ತೇ ಕಡೆ. ನಾಳೆಯಿಂದಾ ಮಕ್ಕಳು ಬರಕೂಡದು. ಬೇರೆ ಯಾವುದಾದರೂ ಕಡೆ ಆಡಿಕೊಳ್ಳಿ. ಇಲ್ಲಿ ಮಾತ್ರ ಕಾಲಿಡಕೂಡದು. ಇವತ್ತು ಸಂಜೆಯಿಂದಲೇ ಸೆಕ್ಯುರಿಟಿ ಗಾರ್ಡ್‌ಗಳು ಇಲ್ಲಿ ಬಂದು ಹಾಜರಾಗ್ತಾರೆ, ಕಾವಲಿಗೆ. understand?... ಮತ್ತೇನಾದರೂ ಮಕ್ಕಳು ಈ ಕಡೆ ಬಂದವು ಅಂದ್ರೆ, ಅವರನ್ನೂ (ಮೇಷ್ಟ್ರನ್ನು ನೋಡಿ) ಅವರಿಗೆ ಚಿತಾವಣೆ ಕೊಡುವವರನ್ನೂ ಹಿಡಿದು ಪೊಲೀಸ್‌ಗೆ ಕೊಟ್ಟುಬಿಡ್ತೇವೆ!.... (ನಡೆಯುತ್ತಾನೆ. ಮತ್ತೆ ನಿಂತು ತಿರುಗಿ) understand?... (ನಿಷ್ಕ್ರಮಿಸುತ್ತಾನೆ.)

ಮೇಷ್ಟ್ರು : (ಜೀಪ್ ಹೋದ ಕಡೆಗೇ ನೋಡುತ್ತ) ಹಾಗಂತಂದ್ರೂ ಕೂಡಾನೂನೂ ನೂವೇ...

(ತಟ್ಟನೆ ಕುಣಿತದಲ್ಲಿ – ಹನುಮನಾಯಕನ ಪ್ರವೇಶ. ಮೇಷ್ಟ್ರು ತನ್ನನ್ನೇ ನೋಡುತ್ತಿರುವುದರ ಅರಿವಾಗಿ ಆತ, ಅಲ್ಲೇ ಮರೆಯಾಗುತ್ತಾನೆ.)

ಮೇಷ್ಟ್ರು : ಅಲೆ ಅಲೆ ಅಲೆ!... ಮೇಡಮ್ಮು, ನೋಡಿದೆಯಾ? ಹಾಗಂತ್ಹೇಳಿ ಗಾಳೀಲಿ ನೆರಳು ಕುಣಿದುಕೋತಾ ಹೋಗಿಬಿಡ್ತಲ್ಲ...ಅಲೆ!....

ಸಿಸ್ಟರ್ : ಎಲ್ಲಿ ಸರ್, ಯಾವಾಗ?

ಮೇಷ್ಟ್ರು : ಇದೇ ಈಗ, ಕಣ್ಣೆದುರಿಗೇನೇ ಹೋಯ್ತಲ್ಲಮ್ಮಾ!

ಸಿಸ್ಟರ್ : ನಿಮಗೇಲ್ಲೋ ಭ್ರಮೆ ಬಿಡಿ, ಸರ್.

(ಒಡನೆಯೇ ಇಲ್ಲಿ ಸದ್ದು ನಿಂತು ಮೂಕ ಅಭಿನಯ ನಡೆಯುತ್ತದೆ. ಹಿನ್ನೆಲೆಯ ಮಕ್ಕಳ ಆಟ ಸದ್ದುಗದ್ದಲ ಕೇಂದ್ರೀಕೃತವಾಗುತ್ತದೆ. ತುಸು ಹೊತ್ತು ಕಳೆದು ಮತ್ತೆ ಇಲ್ಲಿಗೇ ಕೇಂದ್ರ ಪಲ್ಲಟ.)

ಮೇಷ್ಟ್ರು : ಹಾಗಂತ್ಹೇಳಿ–ನಾನು ಚಿಕ್ಕ ಹುಡುಗ, ಇನ್ನೂನೂವೇ ಪ್ರಾಥಮಿಕ ಶಾಲೆ ವಯಸ್ಸು....ಇಲ್ಲಿ ಆಗ, ಸುಡುಗಾಡು ಸುಂಟಿ ಊರೂ ಇರಲಿಲ್ಲ, ಶಾಲೇನೂ ಇರಲಿಲ್ಲ, ಹೊಳೇಗೆ ಅಣೆಕಟ್ಟೇನೂ ಕಟ್ಟಿರಲಿಲ್ಲ. ನಮ್ಮ ಅಜ್ಜಿ ಸದಾ ಕಾಲಾನೂವೆ ಕತೆ ಹೇಳತಿದ್ರು ಈ ಹಾಲಳ್ಳ ಉಂಟಲ್ಲ, ದುಗ್ಧವತೀ ನದೀ ಅಂತ ಇದರ ನಿಜವಾದ ಹೆಸರು, ಇದರ ತೀರದಲ್ಲಿನೇವೇಯೇ, ಹಾಗಂತಂದ್ರೆ ಈ ಕಡೆ ಅರ್ಧ ಹರದಾರಿಗೆ ಒಂದು ಕಾಡು ಉಂಟಲ್ಲಮ್ಮಾ ಅಲ್ಲಿ, ಸುಡುಗಾಡು ಸುಂಟಿ ಕಂಕಲ ರಾಕ್ಷಸ ಅಂತ, ಭಾರೀ ಅರಮನೆ ಕಟ್ಟಿಕೊಂಡು ವಾಸಮಾಡ್ತಾ ಇದಾನೆ, ಮನುಷ್ಯರು ಅಂಬಂಥೋರ ಕಣ್ಣಿಗೆ ಕಾಣಿಸೋದಿಲ್ಲ – ಅಂತ. ಹಂಗಂತ್ಹೇಳಿ, ನೋಡೆ ಬಿಡಬೇಕು ಅಂತಂದದ್ದೇನೇನೇ, ಒಂದು ದಿನ ಹೊರಟುಬಿಟ್ಟೆ. ಇನ್ನೂನೂವೇ ಚಿಕ್ಕ ಬಾಲಕ. ಕಾಡನ್ನೆಲ್ಲಾ ಸುತ್ತಿದೆ, ಸುತ್ತಿದೆ, ಸುತ್ತಿದೆ. ದಣಿವಾಯ್ತು. ಸುಡುಗಾಡು ಸುಂಟಿ ಒಂದು ಮರದ ಕೆಳಗೆ ಕೂತುಬಿಟ್ಟೆ. ಸಾಯಂಕಾಲದ ಸಮಯ. ಬೆಟ್ಟದ ಕಡೆಯಿಂದ ಸೂರ್ಯನ ಕೆಂಗಿರಣಗಳು ತೂರಿ ಬರ್ತಾ ಇರೋ ಹಾಗೇನೇವೇಯೇ.... ಆಹಾ, ಆಹಾ, ಆಹಾ, ಹಾಗಂತ್ಹೇಳಿ ಎಂಥಾ ಭಾರೀ ಅರಮನೆ ಅಂತಿಯೇ, ಅಪ್ಪಟ ಬಂಗಾರದ ಅರಮನೆ ಕಣ್ಣೆದುರಿಗೇನೇವೇಯೇ ಗೋಚರಿಸಿಬಿಡ್ತು. ಅದೇ ಕಂಕಲಾಸುರನ ಅರಮನೆ... ಹಾಗೇ ನೋಡನೋಡತ್ತಿದ್ದ ಹಾಗೇನೇವೇಯೇ ಮಾಯವಾಗಿಬಿಡ್ತು... ಈ ವಯಸ್ಸಲ್ಲಿ ಕೂಡಾನೂವೇ ನೆನಸ್ಕೊಂಡ್ರೆ–ಸುಡುಗಾಡುಸುಂಟಿ ನೆನ್ನೆ ಸಾಯಂಕಾಲ ನೋಡಿದೆನೋ ಅನ್ನೋ ಹಾಗೆ ಕಣ್ಣಿಗೆ ಕಟ್ಟತ್ತೆ.

ಸಿಸ್ಟರ್ : (ಕೈಯಲ್ಲಿಯ ವಾಚ್ ನೋಡಿ) ಹೊತ್ತಾಯ್ತು ಸಾರ್....

ಮೇಷ್ಟ್ರು : ಕಥೇನೇನೇ ಸುರುಮಾಡಿಬಿಟ್ಟೆ ನಾನು. ಹಾಂ. ನಡಿ ಹೋಗೋಣ. ಹಾಗಂತಾದ್ರೂ

ಕೂಡಾನೂನೂವೇ.... ಹೊತ್ತಾಗಿ ಬಿಡ್ತು ಅಲ್ಲವಾ?.... ಮುದುಕ ಆಗಿಬಿಟ್ಟೆ, ಸುಡುಗಾಡು ಸುಂಟಿ....

(ಇಬ್ಬರೂ ನಿಷ್ಕ್ರಮಿಸುತ್ತಾರೆ. ಹನುಮನಾಯಕನ ಪ್ರವೇಶ.)

ಹನುಮ : ಎಲಾ ಮುದುಕ ಎಲಾ ಮುದುಕ!.... ಕಾಲಿನ ನೆಲಾ ಕಾಣೋದಿಲ್ಲ, ಚಂದ್ರನ ಮೊಲ ಕಾಣುತ್ತೆ ಅಂತಾನಲ್ಲ! ಒಳ್ಳೇ ಮಲಾಮತಿ. ಇನ್ನೊಂದು ಕ್ಷಣ ಆಗಿದ್ರೆ ನಾನು ಅವನಿಗೆ ಕಂಡೇ ಬಿಡತಿದ್ದೆ. ಸದ್ಯ ಬಚಾವಾದೆ...(ಸುತ್ತ ನೋಡಿ) ಎಲ್ಲಾ ಹೋದರಯ್ಯಾ, ಯಾರೂ ಇಲ್ಲ: ನಿರುಂಬಳ ಆಯ್ತು....(ಪ್ರೇಕ್ಷಕರ ಕಡೆ ನೋಡಿ) ಈಗ, ನೀವು ಹೇಳಿರಯ್ಯಾ ನೋಡುವ, ನಾನು ಯಾರು ಅಂತ.... (ಪ್ರೇಕ್ಷಕರ ಕಡೆ ನೋಡಿ) ಈಗ, ನೀವು ಹೇಳಿರಯ್ಯಾ ನೊಡುವ, ನಾನು ಯಾರು ಅಂತ... (ಬಟ್ಟೆಯೊಳಗೆ ಕೈತೂರಿ ಒಂದು ಕಿರು ಕನ್ನಡಿ ತೆಗೆದು ಮುಖ ನೋಡಿಕೊಂಡು).... ಅಲ್ಲ, ಒಂದ್ಸಲ ನಾನೇ ನೋಡಿಕಂಡೆ, ಮತ್ತೆ ನಾನೇ ಹೌದೋ ಅಲ್ಲವೋ ಅಂತ.... ಹೋಗಲಿ, ನನಗೆ ವಯೋಮಾನ ಏನು ಅಂತಾದರೂ ಹೇಳಿ ನೋಡುವ.... ಯಾರು ಬೇಕಾದರೂ ಹೇಳಿರಯ್ಯಾ.... ಇನಾಮು....ಗಾಳಿ ಕುದುರೇಗೆ ಗಡ್ಡದ ಲಗಾಮು, ಸರೀ ಹೇಳಿದ್ರೆ ಸವರನ್ ಇನಾಮು! ಹೇಳಿ ನೋಡುವ!.... ಸೋತಿರಾ, ಸೋತಿರಾ? ಹೋಗಲಿ, ನಾವೇ ಹೇಳಿ ಬಿಡುವ, ಕೇಳಿ – ಮೂರರ ಹಿಂದೆ ಆರು, ಆರರ ಹಿಂದೆ ಮೂರು; ಮೊದಲು ಅರವತ್ತ ಮೂರು, ಆಮೇಲೆ ಮೂವತ್ತಾರು.... ಅಂದರೆ, ಆರುನೂರ ಮೂವತ್ತಾರು. ಸರೀ ಆರುನೂರಾ ಮೂವತ್ತಾರು ವರ್ಷ ವಯಸ್ಸು!....ಆಂ? ಅದ್ಯಾರಪ್ಪಾ ಅಲ್ಲಿ–ಹೌದೇನಲೇ ಹನುಮನಾಯಕ ಅಂತ ನಕ್ಕೋರು?.... ಪರವಾ ಇಲ್ಲ. ವಯೋಮಾನ ತಿಳಿಯದಿದ್ದರೂ ನಾನು ಹನುಮನಾಯಕ ಅನ್ನೋದು ತಿಳಿತಲ್ಲ! ಇಲ್ಲಿ ಒಬ್ಬರಿಗಾದರೂ ಆನಂದವಾಯ್ತಯ್ಯ. ಒಂದು ಇನಾಮು ಕೊಟ್ಟು ಬಿಡುವ ಅವರಿಗೆ. (ಬಟ್ಟೆ ತಡವಿ) ಓ ಇನಾಮು ತಂದೇ ಇಲ್ಲ. ಹೋಗಲಿ ಇಲ್ಲಿ ನನ್ನ ತನಕಾ ಬರೋದು ಉಳೀತು. ಅಲ್ಲೇ ನಿಮ್ಮ ಪಕ್ಕದವರ ಹತ್ತರ ಇಸಕೊಂಡು ಬಿಡಿ....ಓಹ್ಹೋಯ್, ಇವತ್ತಿನ ದಿವಸಕ್ಕೆ ಸರಿಯಾಗಿ ಆರುನೂರು ವತ್ಸರಗಳ ಹಿಂದೆ, ಆಗ ನನಗೆ ಮೂವತ್ತಾರು ವಯಸ್ಸು, ಒಂದು ಹೆಂಡತಿ ಒಂಬತ್ತು ಮಕ್ಕಳು, ಅವರನ್ನ ಊರಲ್ಲಿ ಬಿಟ್ಟು ನಾನು ಭಾಗವತರ ಆಟದ ಮೇಳ ಸೇರಿಕೊಂಡಿದ್ದೆ. ಅವತ್ತು ರಾತ್ರಿ ಆಟ ಮುಗಿಸಿ, ಮಾರನೇ ಬೆಳಿಗ್ಗೆ ಪಂಚ ಪಂಚ ಉಷಃಕಾಲದಲ್ಲಿ ಯಥಾ ರೂಢಿಯ ಪ್ರಕಾರ ಗಂಜಿಯನ್ನ ಭುಂಜಿಸಿ ಶಯನ ಹಾಕಿದೆವಯ್ಯಾ.... ಏಳುವಾಗ ಸಂಜೆಯಾಗಿ ಬಿಟ್ಟಿತ್ತು. ಮುಂದಿನ ಮೊಕ್ಕಾಂ ಹೇಗೋ ಗೊತ್ತಲ್ಲ, ತೆರಳಿ ಬಿಡುವ ಅಂತ ಎದ್ದೆ. ಏಳುವಷ್ಟರಲ್ಲಿ ಏನು ಹೇಳುವುದಯ್ಯಾ, ಆಕಾಶವನ್ನೇ ಕವಿದು ಬಿಟ್ಟಂಥಾ ಅಂತರ ಬೆಂತರ ಬಿರುಗಾಳಿ. ಅದರ ಹಿಂದಕ್ಕೇನೇ ಥೈ ಥೈ ಅಂತ ಕುಣಿತಾ ಬಂದು ಎದುರಿಗೇ ನಿಂತು ಬಿಡ್ತು ಒಂದು ಅಕರಾಳ ವಿಕರಾಳ

ರೂಪ! ನಾನಾದರೂ ಹೆದರಲಿಲ್ಲ. ಭಳಿರೇ ಪರಾಕ್ರಮಿ ಕಂಠೀರವ –ಅಂತ ಬಿರುದು ಹೇಳಿ ಪರಾಕು ಹಾಕಿಬಿಟ್ಟೆ. ಹಾಂ ಅಂತ ಅಬ್ಬರಿಸಿತು.... ನಂಗೆ ಇನ್ನೂ ರಾತ್ರಿ ಆಟದ್ದೇ ನೆನಪು–ಪರಾಕೇ, ಕಂಕಲಾಸುರರ ಕಡೆ ಹನುಮನಾಯಕ ಅಲ್ಲವೋ ನಾನು ಅಂದೆ. ಸಮ ಸಮ ಸಮಾ– ಅಂತ ಗಹಗಹಿಸಿ ನಗತಾ ನನ್ನನ್ನ ಕಂಕುಳಲ್ಲಿ ಸಿಕ್ಕಿಸಿಕೊಂಡು ಹೊರಟೇಬಿಡಬೇಕಾ?.... ಅವತ್ತಿಂದಾ ಈ ತನಕಾ ನಾನು ಕಂಕಲಾಸುರರ ಜತೇಲೇ ಇದ್ದಕಂಡು ಬಿಟ್ಟಿದ್ದೇನೆ. ಅವರಿಗೆ ಸಾವು ಅನ್ನೋದೇ ಇಲ್ಲ. ಹಾಗಾಗಿ ಅವರು ನನಗೂ ಸಾಯೋದಕ್ಕೆ ಬಿಡೋದಿಲ್ಲ.... ಇಲ್ಲೇ ಅವರ ವಸ್ತಿ. ಇಲ್ಲಿಂದ ಅರ್ಧ ಹರಿದಾರಿ ದೂರದ ಆ ಕಾಡು ಉಂಟಲ್ಲ– ಅಲ್ಲೇ ಅವರ ಅರಮನೆ...ಹಾಗಂತ ನಾವು ಮನುಷ್ಯರ ಕಣ್ಣಿಗೆ ಕಾಣಲಿಕ್ಕಿಲ್ಲ. ಈ ಪ್ರಕಾರದಲ್ಲಿ ಮನುಷ್ಯ ಮಾತ್ರದವರ ಕಣ್ಣಿಗೆ ಕಾಣದೆ ಇರುವ ಹಾಗೆ ನಾವು ನಮ್ಮ ಕಂಕಲಾಸುರ ದಣಿಗಳ ಸಂಗತಿ ವಸತಿ ಮಾಡಿಕೊಂಡು ಇರತಾ ಇರಲಾಗಿ, ಈಗ ಹತ್ತೋ ಇಪ್ಪತ್ತೋ ಮೂವತ್ತೋ ವರ್ಷಕ್ಕೆ ಹಿಂದೆ ಒಂದು ದಿನ, ದಣಿಗಳು ನಮ್ಮನ್ನು ಕರೆಸಿ, ಅಯ್ಯಾ ಹನುಮನಾಯಕ ನಮಗೆ ಬೇಸರವಾಗಿದೆ ಆಪ್ತರಾಗಿರ ತಕ್ಕಂಥಾ ನಮ್ಮ ಮಿತ್ರರಲ್ಲಿಗೆ ಭೇಟಿಕೊಟ್ಟು ಅಲ್ಲಿ ಕೆಲವು ದಿನ ಇದ್ದು ಬೇಸರ ಪರಿಹರಿಸಿಕೊಂಡು ಬರುವ–ಅಂದರು. ಸರಿ ಮಹಾಸ್ವಾಮಿ–ಅಂದೆ, ಅಂಥಾ ಆಪ್ತರು ಯಾರಯ್ಯಾ ನಮಗೆ– ಅಂದರು. ತಮಗೆ ಗೊತ್ತು ದಣಿಗಳೇ – ಅಂದೆ. ಆಫ್ರಿಕಾ ದೇಶದಲ್ಲಿ ಲುಮುಂಬಾ ಅಂತ ಒಂದು ಮಹಾನಗರವುಂಟು. ಅದಕ್ಕೆ ಅಧೀಶರಾಗಿರತಕ್ಕಂಥಾ ಉಮುಂಬಾಸುರರು ನಮ್ಮ ಆಪ್ತರು – ಅಂದರು. ತೆರಳಿಯೇ ಬಿಡುವ – ಅಂದೆ. ಅದೇ ಅವತ್ತು ಹೋದವರು ಇವತ್ತು ಮರಳಿದನಯ್ಯಾ ನಾನು. ನಮ್ಮ ದಣಿಗಳಾದರೂ ವಾರದಲ್ಲಿ ಬಂದಾರು, ಮಾಸದಲ್ಲಿ ಬಂದಾರು.... ಇಷ್ಟರಲ್ಲಿ ಇಲ್ಲಾದರೂ ಅಣೆಕಟ್ಟು ಊರು ಕಂಬ ತಂತಿ ಅಂತ ಏನೇನೋ ಬದಲಾವಣೆಗಳು ಆಗಿಹೋಗಿದ್ದಾವಯ್ಯಾ – ಗುರುತೇ ಸಿಕ್ಕಲಿಕ್ಕಿಲ್ಲ. ಇರಲಿ, ತಕ್ಷಣವೇ ನಮ್ಮ ಅರಮನೆಯ ಕಡೆ ತೆರಳಿ ಅಲ್ಲೇನಾಗಿದೆ ಅಂತ ನೋಡಬೇಕು, ತಡ ಮಾಡತಕ್ಕದ್ದಲ್ಲ....

(ಹೊರಡಲು ಸಿದ್ಧನಾಗುವಾಗ ಪಾರ್ಶ್ವದಿಂದ ಗುಂಡಿನ ಸಪ್ಪಳ ಕೇಳುವುದು.)

ಹನುಮ : ಇದೇನಯ್ಯಾ ಸದ್ದು, ನೋಡಿ ಬರತೇನೆ. (ಹೋಗಿ ನೋಡಿ ಹಿಂದಕ್ಕೆ ಬಂದು) ಹೋಯ್, ಕೈಯಲ್ಲಿ ಕೋವಿ ಹಿಡಿದ ಇಬ್ಬರು ಕಾವಲು ಭಟರು ಬರ್ತಾ ಇದ್ದಾರಯ್ಯಾ, ನಿಂತು ಪರಿಶೀಲನೆ ಮಾಡಿ ನೋಡಿದ್ದೇನೆ–ಸ್ವಾರಸ್ಯವುಂಟಯ್ಯಾ ಸ್ವಾರಸ್ಯವುಂಟು– ಮಾತಾಡಲಿಕ್ಕೆ ಭಾಷೆಯೇ ಬರುವುದಿಲ್ಲ, ಅವರಿಗೆ. ಹಾಗಂತ ನಮ್ಮ ದಣಿಗಳಿದ್ದಾರಲ್ಲ, ಮುಂಗಾಲಿಟ್ಟು ಬರುವ ವೈರಿಯನ್ನು ಕಂಗಾಲು ಮಾಡಿಕಳಿಸುವ ರುಂಡಮುಂಡ ಗಂಢಬೇರುಂಡ ಅಂತ ಬಿರುದು ಹೊತ್ತಂಥಾ ನಮ್ಮ ದಣಿ ಕಂಕಲಾಸುರರೂ

ಮಾತು ಅಂತ ಆಡಲಿಕ್ಕಿಲ್ಲ; ಯಾಕೆಂದರೆ ಅವರಿಗೆ ಮಾತೇ ಬರೋದಿಲ್ಲ. ಏನು ಹೇಳುವುದಿದ್ದರೂ ಅವರು ಕುಣಿದೇ ತೋರಿಸಿ ಬಿಡುವವರು.... ಇಕೊಳ್ಳಿ, ಕೋವಿ ಹೊತ್ತ ಈ ಕಾವಲು ಭಟರಿದ್ದಾರಲ್ಲಾ, ಮೆಚ್ಚಿದೆ ಮೆಚ್ಚಿದೆ–ಇಂಥವರು ಸಂತೆಯಲ್ಲಿ ಸಿಕ್ಕಲಿಕ್ಕಿಲ್ಲ. ಸಾಗರದಲ್ಲಿ ಸಿಕ್ಕಲಿಕ್ಕಿಲ್ಲ – ಗಾಳಿಯಲ್ಲಿ ಗುಂಡು ಹಾರಿಸಿಕೊಂಡೇ ಮಾತಾಡ್ತಾರಲ್ಲಯ್ಯಾ.....

(ಕೋವಿ ಹೊತ್ತ ಇಬ್ಬರು ಪೊಲೀಸರ ಪ್ರವೇಶ. ಒಬ್ಬ ಕೋವಿಯೆತ್ತಿ ಗಾಳಿಯಲ್ಲಿ ಒಂದು ಗುಂಡು ಹಾರಿಸುತ್ತಾನೆ. ಅದಕ್ಕೆ ಉತ್ತರವಾಗಿ ಇನ್ನೊಬ್ಬ ಮೂರು ಗುಂಡು ಹಾರಿಸುತ್ತಾನೆ.)

ಹನುಮ : ತಿಳೀತಯ್ಯಾ ತಿಳೀತು.... ಒಬ್ಬ ಗುಂಡು ಹಾರಿಸಿ ಕೇಳ್ತಾನೆ ಎಲ್ಲಿ – ಅಂತ. ಅದಕ್ಕೆ ಇನ್ನೊಬ್ಬ ಗುಂಡು ಹಾರಿಸಿ ಉತ್ತರ ಕೊಡ್ತಾನೆ, ಇಲ್ಲೇ, ನೀನಿಲ್ಲಿ ನಾನಿಲ್ಲಿ – ಅಂತ.

(ಇಬ್ಬರೂ ಪೊಲೀಸರು ಆಚೆ ಈಚೆ ಪಾರ್ಶ್ವಗಳಲ್ಲಿ ಪಹರೆ ನಿಲ್ಲುತ್ತಾರೆ. ಅಷ್ಟರಲ್ಲಿ, ಹಿನ್ನೆಲೆಯಲ್ಲಿ ಆಡುತ್ತಿರುವ ಹುಡುಗರೆಲ್ಲ ಗುಂಡಿನ ಸಪ್ಪಳ ಕೇಳಿದ್ದರಿಂದ ಗುಂಪಾಗಿ ಈ ಕಡೆಗೇ ಬರುತ್ತಾರೆ.)

ಎಲ್ಲರೂ : ಪೊಲೀಸಿನೋರು, ಪೊಲೀಸಿನೋರು!

ಬಂಟು : ಇಲ್ಲಿ ಕಾವಲು ಕಾಯೋಕೆ ಬಂದರು ಅಂತ ಕಾಣುತ್ತೆ,

ಮೀನಿ : ನಾಳೆಯಿಂದ ನಾವು ಇಲ್ಲಿ ಆಟಕ್ಕೆ ಬರೋ ಹಾಗೇ ಇಲ್ಲ.

ಬಂಟು : ಎಲ್ಲಿಗೆ ಹೋಗೋದಪ್ಪಾ ನಾಳೆಯಿಂದ ಆಟಕ್ಕೆ?

ಜೇನಿ : (ಹನುಮನನ್ನು ಕಂಡು) ಇಲ್ನೋಡಿ, ಇವರ್‍ಯಾರೋ ಹೊಸಬರು.

ಪಮ್ಮಿ : ಹೌದಲ್ಲ, ಯಾರೋ ಹೊಸಬರು.

ಕಾಮು : ಅರೆ, ಯಾರು ಇದು? ನಾವು ನೋಡೇ ಇಲ್ಲ.

ಮಿಟ್ಟಿ : ನಮ್ಮ ಊರಿನೋರು ಅಲ್ಲಾ.

ಬಾಳ : ಏಯ್, ಎಷ್ಟು ಚಂದ ಇದಾರೆ ನೋಡಿ.

ಸೋನಿ : ಅವರ ಬಟ್ಟೆ ಎಷ್ಟು ಚಂದ ಉಂಟು ನೋಡಿ.

(ಹನುಮ–ಈಗ ನೃತ್ಯಗತಿಯಲ್ಲಿ ಅಲ್ಲಲ್ಲಿ ಅಡಗಿಕೊಳ್ಳಲು ಯತ್ನಿಸುತ್ತ ಚಲಿಸುತ್ತಿದ್ದಾನೆ.)

ಜೆಟ್ಟಿ : ಏಯ್, ಏಯ್ ಎಷ್ಟು ಚಂದ ಕುಣೀತಾರೆ, ನೋಡಿ.

ಬಂಟು : ಅಂಕಲ್, ಅಂಕಲ್.....

ಸುಗ್ಗಿ : ಮಾಮಾ, ಮಾಮಾ.....

(ಹನುಮ ಮೆಲ್ಲಗೆ ಅಲ್ಲಿಂದ ಜಾರಿಕೊಂಡು ನಿಷ್ಕ್ರಮಿಸುತ್ತಾನೆ. ಹುಡುಗರು ಅವನ ಬೆನ್ನು ಹತ್ತುತ್ತಾರೆ.)

ಚಾರು : ಹೋಗಿಬಿಟ್ಟರಲ್ಲ....

ಚೇರ : ಹೋಗೇಬಿಟ್ಟರಲ್ಲ....

ಬಾಳ : ಏ ಬನ್ನಿ ಬನ್ನಿ, ಹಿಂದೇ ಹೋಗೋಣ, ಮಾತಾಡಿಸೋಣ.

ತಂಪ : ನಡೀರಿ, ಹೋಗೋಣ.

(ಎಲ್ಲಾ ಹುಡುಗರೂ ಆತನ ಹಿಂದೆ ಧಾವಿಸುತ್ತಾರೆ. ಆಮೇಲೆ ಮತ್ತೊಂದು ಕಡೆಯಿಂದ ಹನುಮ ಪ್ರವೇಶಿಸುತ್ತಾನೆ.)

ಹನುಮ : ಒಳ್ಳೇ ಮಲಾಮತಿ ಮಾರಾಯ್ರೆ.... ಮಕ್ಕಳ ಮ್ಯಾಳ ಮಂಗನ ತಾಳ! ಇವು ಬೆನ್ನು ಹತ್ತಿಯೇ ಬಿಟ್ಟವು.... ಎಲಾ ಶಿವನೇ, ಇವಕ್ಕೆ ನಾನು ಹ್ಯಾಗೆ ಕಂಡೆ ಅಂತ.... ಒರಳುಕಲ್ಲು ಈಶ್ವರ ದೇವರ ವರವೇ ಸುಳ್ಳಾಯಿತ?.... (ಯೋಚಿಸಿ) ಹಾಗಲ್ಲವಯ್ಯಾ ಹಾಗಲ್ಲ. ಗಂಡುಗಳಿಗೆ ಕಾಣಲಿಕ್ಕಿಲ್ಲ, ಹೆಣ್ಣುಗಳಿಗೆ ಕಾಣಲಿಕ್ಕಿಲ್ಲ ಅಂತ ದೇವರು ವರ ಕೊಟ್ಟಿದ್ದಲ್ಲವೊ? ಈ ಮಧ್ಯೆ ಹುಡುಗರು ಮುದುಕರು ಹೊರಗೇ ಉಳಿದು ಬಿಟ್ಟರು. ಇರಲಿ. ಇವಾದರೂ ಈಗ ನನ್ನನ್ನು ಬಿಡಲಿಕ್ಕಿಲ್ಲ, ಅರಮನೆ ತನಕವೂ ಬೆನ್ನು ಹತ್ತುತಾವೆ.... ಹೀಗೆ ಮಾಡ್ತೇನಯ್ಯಾ, ಅವಕ್ಕೆ ಮಂಕುಬೂದಿ ಚೆಲ್ಲಿ ಕಣ್ಣಿಗೆ ಭ್ರಮೆ ಅಡರುವ ಹಾಗೆ ಮಾಡ್ತೇನೆ.... ತಕ್ಕಲಕಾರಿ ತಿರಮುರಗು ಹಾದಿ, ಮಕ್ಕಳ ಕಣ್ಣಿಗೆ ಮಂಕು ಬೂದಿ....

(ಹಿಂತಿರುಗಿ ಕೈಯಾಡಿಸಿ ನಿಷ್ಕ್ರಮಿಸುತ್ತಾನೆ. ಹುಡುಗರು ಓಡುತ್ತ ಬರುತ್ತಾರೆ.)

ಚೇರ : ಎಲ್ಲೋ ಹೋಗೇ ಬಿಟ್ಟರಲ್ಲ ಹೊಸಾ ಅಂಕಲ್....

ಚೆನ್ನ : ಹೋಗೇ ಬಿಟ್ಟರಲ್ಲ....

ಕಾಮು : ಈ ಕಡೇನೇ ಬಂದ್ರು....

ಬಾಳ : ಹೌದ್ದೌದು ಈ ಕಡೇನೇ ಬಂದ್ರು....

ತಂಪ : ನನ್ನ ಕಣ್ಣಿಗೆ ಏನೋ ಆಗಿ ಬಿಡ್ತಪ್ಪ....ಮಂಕು ಮಂಕು.

ಚೇರ : ನಂಗೂ ಹಾಗೇ.....

ಬಾನಿ : ನಂಗೂ ಒಂಥರಾ ಆಗಿಬಿಟ್ಟಿದೆ....ಕಣ್ಣೇ ಸರೀ ಕಾಣೋಲ್ಲ.

ಹುಡುಗರು : ನಮಗೂ ಹಾಗೇ....

ಹುಡ್ಗೀರು : ನಮಗೂ ಹಾಗೇ....

ನಿಮ್ಮಿ : ಈಗ ನಾವು ಊರು ಬಿಟ್ಟು ಸುಮಾರು ಎರಡು ಕಿಲೋಮೀಟರ್ ಬಂದಿಲ್ವಾ?

ಚೇರ : ಎರಡೇನು ಜಾಸ್ತೀನೇ ಬಂದ್ವಿ.

ಬಂಟು : (ಹಿನ್ನೆಲೆಗೆ ತಿರುಗಿ ನೋಡಿ) ಅರೆ, ಇದೇನಿದು, ಇಲ್ಲಿ ಮತ್ತೆ ಡ್ಯಾಮೇ ಕಾಣುತ್ತಲ್ಲಾ?

ಬಿಂಕು : ಅಲ್ಲಿಂದ ಇಷ್ಟು ದೂರ ನಡಕೊಂಡು ಬಂದಿದೀವಿ, ಇಲ್ಲಿ ಹ್ಯಾಗೆ ಕಾಣುತ್ತೆ ಡ್ಯಾಮು?....

. (ನೋಡಿ) ಅರೆ, ಹೌದಲ್ಲ.....

ಪಮ್ಮಿ : ಡ್ಯಾಮ್ ಸೈಟಿಗೇ ಬಂದ್ಬಿಟ್ಟಿದೇವೆ!....

ನಿಮ್ಮಿ : ಅದು ಹ್ಯಾಗೆ ಬಂದೆವು?

ಜೇನಿ : (ನೋಡಿ, ಮೆಲ್ಲಗೆ ಆ ಕಡೆ ನಡೆಯುತ್ತ) ಏಯ್, ಸರಿಯಾಗಿ ನೋಡಿ. ಡ್ಯಾಮ್‌ಸೈಟ್ ಅಲ್ಲ....ಬದಲಾಗ್ತಾ ಇದೆ.

(ಹಿನ್ನೆಲೆಯಲ್ಲಿ ಈಗ ನಿಧಾನವಾಗಿ ಡ್ಯಾಮ್ ಸೈಟ್ ದೃಶ್ಯವನ್ನು ಅರಮನೆ ದೃಶ್ಯವಾಗಿ ಪರಿವರ್ತಿಸಲಾಗುತ್ತಿದೆ.)

ಕೇಳು : ಯಾಕೋ ನನ್ನ ಕಣ್ಣಿಗೆ ಮಂಕು ಮಂಕಪ್ಪಾ.... ಹೌದು.....

ಬಂಟು : ಏಯ್, ಹೌದು, ಭಾರೀ ಅರಮನೆ ಹಾಗೇ ಕಾಣುತ್ತೆ.

ಮೀನಿ : ಮೊನ್ನೆ ನಮ್ಮ ಮೇಡಮ್ ಅದ್ಯಾವುದೋ 'ಕ್ಯಾಸಲ್' ಅಂತ ಒಂದು ಚಿತ್ರ ತೋರಿಸಲಿಲ್ವಾ, ಹಾಗೇ ಕಾಣ್ತಿದೆ.

ಹುಡ್ಗೀರು : ಹೌದು, ಹೌದು.

(ದೃಶ್ಯ ಬದಲಾವಣೆ ಪೂರ್ತಿಯಾಗಿ, ಈಗ ಎತ್ತರದ ಕಲ್ಲು ಗೋಡೆಗಳ ಭಾರೀ ಕಟ್ಟಡ ಎದುರು ಕಾಣುತ್ತಿದೆ. ಹುಡುಗರೆಲ್ಲ ಆ ಕಡೆ ಧಾವಿಸುತ್ತಾರೆ; ಗೋಡೆ ಕಂಬಗಳನ್ನು ಪರಿಶೀಲಿಸತೊಡಗುತ್ತಾರೆ.)

ಬಾಳ : ಕಲ್ಲು ಬಂಡೇನೇ ತಂದು ಕಟ್ಟಿದ ಹಾಗಿದೆ ಅಲ್ವಾ?

ಚೆನ್ನ : ಈ ಕಂಬಗಳನ್ನು ನೋಡು.

ತಂಪ : ಆನೆಗಳನ್ನು ಕಟ್ಟಿಹಾಕಬಹುದು.

ಮೀನಿ : ಕಿಟಕಿಗಳೇ ಕಾಣೋದಿಲ್ಲಲ್ಲ ಈ ಅರಮನೇಗೇ.

ಮಿಟ್ಟಿ : ಒಂದೇ ಒಂದು ಬಾಗಿಲು ಅಂತ ಕಾಣುತ್ತೆ, ಬೇರೆ ಬಾಗಿಲೇ ಕಾಣಿಸೋದಿಲ್ಲ.

ಸೋನಿ : ಒಳಗೆ ಯಾರೂ ಇಲ್ವೇ ಇಲ್ವಾ?

ಬಂಟು : ಇಲ್ಲಿ ಸುತ್ತಾ ಎಲ್ಲಾ ನೋಡಿದ್ರೆ ನಮ್ಮ ಡ್ಯಾಮ್ ಸೈಟ್ ಇದ್ದ ಹಾಗೇ ಇದೆ ಅಲ್ವಾ?

ಬಿಂಕು : ನಾವು ಇನ್ನು ಆಡೋದಕ್ಕೆ ಇಲ್ಲೇ ಬರಬಹುದ್ದು.

ಕೆಲವರು : ಹೌದು, ಹೌದು, ಇಲ್ಲೇ ಬರೋಣ.

ಕೇಳು : ದೊಡ್ಡ ಅಂಗಳ ಇದೆ.

ಮ.ಕೆಲ : ಇಲ್ಲೇ ಬರೋಣ.

ಕಾಮು : ಅಂಕಲ್ ಇಲ್ಲೇ ಬಂದ್ರು ಅಲ್ವಾ?

ಕೇಳು : ಎಲ್ಲೋ ಹೋಗೇ ಬಿಟ್ರು.

ಚಾರು : ಈ ಅರಮನೆ ಒಳಗೇ ಹೋದರೋ ಏನೋ.

ನಿಮ್ಮಿ : ಒಳಗಡೆ ಏನೂ ಕಾಣಿಸೋದೇ ಇಲ್ಲಲ್ಲ.

ಬಾಳ : ಅಂಕಲ್ ಹೋದ್ರು, ನಮಗೆ ಅರಮನೆ ಸಿಗ್ತು.

ಚೆನ್ನ : ನಮಗೆ ಅಂಕಲ್ಲೂ ಬೇಕು.

(ಹನುಮ ಮೆಲ್ಲನೆ ಪ್ರವೇಶಿಸುತ್ತಾನೆ.)

ಹನುಮ : ಒಳ್ಳೇ ಗಂಟು ಬಿದ್ದವಲ್ಲ ಮಾರಾಯ್ರೆ.....

ಹುಡುಗರು : (ಕೆಲವರು) ಅಂಕಲ್ ಬಂದರು, ಅಂಕಲ್ ಬಂದರು.

(ಇನ್ನು ಕೆಲವರು) ಅಂಕಲ್ ಸಿಕ್ಕರು.

ಹನುಮ : (ಹುಡುಗರು ತನ್ನ ಕಡೆ ಬರುತ್ತಿರಲು ತಾನೂ ಅವರನ್ನು ಸಮೀಪಿಸಿ ಭಾಗವತರ ಹಾಡಿನ ಧಾಟಿಯಲ್ಲಿ) ಎಲವೋ ಪೋರರೆ ಕೇಳಿ ಕೇಳಿ....(ಅಷ್ಟರಲ್ಲಿ ಮುಂಡಾಸು ಬಿಚ್ಚುತ್ತಿರಲು) ಪೇಟ ಬಿಚ್ಚಿತು ಸ್ವಲ್ಪ ತಾಳಿ.... (ಪೇಟ ಸುತ್ತಿಕೊಂಡು) ಎಲವೋ ಪೋರರೇ ಕೇಳಿ ಕೇಳಿ, ಯಾಕೆ ಬಂದಿರಿ ಇಲ್ಲಿ ಹೇಳಿ, ಈಗ ಯಾತಕ್ಕೆ ಬಂದದ್ದು ಹೇಳಿ....

(ಹುಡುಗರೆಲ್ಲಾ ಖುಷಿಯಿಂದ ಚಪ್ಪಾಳೆ ತಟ್ಟುತ್ತಾರೆ.)

ಬಾಳ : ಅಂಕಲ್ ಸಂಗೀತದಲ್ಲೇ ಮಾತಾಡ್ತಾರೆ!

ಹುಡುಗರು : (ಕೆಲವರು) ಜಿಂದಾಬಾದ್

(ಇನ್ನು ಕೆಲವರು) ಹೊಸ ಅಂಕಲ್ ಜಿಂದಾಬಾದ್

ಬಂಟು : ಇನ್ನೊಂದು ಹಾಡು ಹೇಳಿ, ಅಂಕಲ್.

ಜೇನಿ : ಹೇಳಿ, ಅಂಕಲ್.

ಎಲ್ಲರೂ : ಹೇಳಿ ಅಂಕಲ್, ಹೇಳಿ ಅಂಕಲ್.

ಹನುಮ : ಎಲಾ ಎಲಾ ಧೂರ್ತ ಬಾಲಕರಿರ, ತಟ್ಟನೆ ಕೇಳುವಂಥಾ ಪ್ರಶ್ನೆಗೆ ಚಟ್ಟಂತ ಉತ್ತರ

ಕೊಡತಕ್ಕದ್ದು ಬಲ್ಲಿರಾ? ಈಗ ಹೇಳಿಕೊಳ್ಳಿ– ನೀವೆಲ್ಲಾ ಯಾರು, ಯಾತಕ್ಕೋಸ್ಕರವಾಗಿ ಇಲ್ಲಿಗೆ ಬಂದಿದ್ದೀರಿ?

ನಿಮ್ಮಿ : ಹ್ಯಾಗೆ ಮಾತಾಡ್ತಾರೆ ನೋಡು–

ಪಮ್ಮಿ : ನಮ್ಮ ಕನ್ನಡ ಮೇಷ್ಟ್ರು ಪಾಠ ಮಾಡೋ ಹಾಗೆ.

ಬಂಟು : ಗೊತ್ತಿಲ್ವಾ ಅಂಕಲ್, ನಾವೆಲ್ಲಾ ಹಾಲುಹಳ್ಳ ಕಾಲೋನಿಯವರು

ಮೀನಿ : ಅಲ್ಲಿ ಡ್ಯಾಮ್ ನೋಡಿದರಲ್ಲಾ, ಅಲ್ಲೇ ಹಾಲಳ್ಳ ಕಾಲೋನಿ ಅಂತ.

ಬಿಂಕು : ಎಚ್.ಎಚ್. ಕಾಲೋನಿ ಅನ್ನೋಲ್ವಾ – ಅದೇನೇ.

ಮಿಟ್ಟಿ : ನಾವೆಲ್ಲಾ ಸ್ಕೂಲು ಹುಡುಗರು.

ಕಾಮು : ಅಪ್ಪರ್ ಪ್ರೈಮರಿ ಸ್ಕೂಲಿದೆ ನೋಡಿ, ಅಲ್ಲೀ ಹುಡುಗರು.

ಕೇಳು : ಗೊತ್ತಿಲ್ವಾ ನಿಮಗೆ? R.N.S. ಅಂತ ಮೇಷ್ಟ್ರು ಇದಾರಲ್ಲ.

ಸೋನಿ : ಲಿಲಿಯಾ ಅಂತ ಗುಂಗುರು ಕೂದಲು ಮೇಡಮ್ ಇದಾರಲ್ಲ......

ಹನುಮ : ಏಯ್ ನಿಲ್ಲಿಸ್ರೋ, ನಿಲ್ಲಿಸ್ರೋ, ನಿಲ್ಲಿಸ್ರೋ ಹಾಗೆ ಗುಬ್ಬಿಗಳ ಹಾಗೆ ಚೀಂ ಚೀಂ ಚೀಂ ಗುಟ್ಟಿ, ನನ್ನ ತಲೆ ಕೆಡಿಸಿಬಿಡ್ತೀರಿ ಅಷ್ಟೇ.....ಇಲ್ಲಿ ಯಾಕೆ ಬಂದಿರಿ?

ಚೆನ್ನ : ನೀವು ಬಂದ್ರಲ್ಲಾ, ನಾವೂ ಬಂದೆವು.

ಚಾರು : ನಿಮ್ಮ ಜೊತೆ ಮಾತಾಡೋಣ ಅಂತ ಬಂದೆವು.

ಹನುಮ : ನಿಲ್ಲಿ!....ನಾ ಹೇಳೋದು ಕೇಳಿ. ನೀವು ಬರಕೂಡದು, ಬರಲೇ ಕೂಡದು. ಇದು ಯಾರ ಅರಮನೆ ಗೊತ್ತಾ? ಇದು ಯಾರ ತೋಟ ಗೊತ್ತಾ?

ಎಲ್ಲರೂ : ಗೊತ್ತಿಲ್ಲ, ಗೊತ್ತಿಲ್ಲ....ಹೇಳಿ, ಹೇಳಿ.....

ಹನುಮ : ಇದು ಅಂತಿಂಥಾ ಜಾಗವಲ್ಲ. ಅಂತರ ಬೆಂತರದಲ್ಲಿ ಮಂತ್ರಹಾಕಿ ತಂತ್ರಾ ಕಟ್ಟಿದ್ದು!

ಜೇನಿ : (ಆಶ್ಚರ್ಯದಿಂದ) ಅಂತರ ಬೆಂತರದಲ್ಲಿ ಮಂತ್ರಾ ಹಾಕಿ ತಂತ್ರಾ ಕಟ್ಟಿದ್ದು!

ಹಲವರು : ತಂತ್ರಾ ಕಟ್ಟಿದ್ದು!

ಹನುಮ : ಥತ್ತೇರಿ. ಚುಪ್ ಅಂದ್ರೆ ಚುಪ್!..... ಇದು ರಾಕ್ಷಸರ ಅರಮನೆ. ಕಂಕಲಾಸುರರು ಅಂತ, ಪ್ರಚಂಡ ದೈತ್ಯರು, ಮಹಾರಾಕ್ಷಸರು, ಇದು, ಅವರ ಅರಮನೆ; ಇದು ಅವರ ತೋಟ.

ಕೇಳು : ರಾಕ್ಷಸರು ಅಂದ್ರೆ?

ಸೊಂಪ : ರಾಕ್ಷಸ! ಆಟದಲ್ಲಿ ಬರೋಲ್ವೇನೋ, ಇಂಥಿಂಥಾ ದೇಹ, ಇಷ್ಟಿಷ್ಟಗಲಾ ಮುಖಾ, ಕೋರೇ ದಾಡೇ, ಜೋಲೋ ನಾಲಗೆ, ಬೆಂಕೀ ಕಣ್ಣು....

ಚಾರು : ಇಪ್ಪತ್ತಿಪ್ಪತ್ತು ಕೈ. ಎಲೆಕ್ಟ್ರಿಕ್ ಸ್ಟ್ರಕ್ಚರ್ ಇರೋಲ್ವಾ, ಹಾಗಪ್ಪ.....

ಬಂಟು : ಟೀಚರ್ ಕಥೆ ಹೇಳಿರಲಿಲ್ವೇನ್ರೋ Selfish Giant ಅನ್ನೋ ರಾಕ್ಷಸನ ಕಥೆ....

ಬಿಂಕು : ಓ! ರಾಕ್ಷಸ ಅಂದರೆ ಜಯಂಟ್ ಅಂತಲಾ?....

ಚೇರ : ಅಂಕಲ್, ಜಯಂಟ್ ಇಲ್ಲೇ ಇರ್ತಾರಾ?

ಕಾಮು : ಅರಮನೇ ಒಳಗೆ ಇರ್ತಾರಾ?

ಬಾಳ : ಇದಾರಾ ಈಗ?

ಚೆನ್ನ : ಇಲ್ವಾ?

ಹನುಮ : ಥತ್ ನಿಮ್ಮ, ಚೀಂ ಚೀಂ ಚೀಂ ಅಂತ ನನ್ನ ತಲೆ ಚಿಟ್ಟು ಹಿಡಿಸಿ ಬಿಡ್ತೀರಿ!

ಸುಗ್ಗಿ : ಸಿಟ್ಟು ಬಂತಾ ಅಂಕಲ್?.....

ಹನುಮ : (ತಟ್ಟನೆ ಬದಲಾಗಿ) ಅಲ್ಲ ಅಲ್ಲ, ರಾಕ್ಷಸರು ಈಗ ಊರಲ್ಲಿಲ್ಲ. ಸ್ನೇಹಿತರನ್ನ ನೋಡೋಕೆ ದೂರದೇಶಕ್ಕೆ ಹೋಗಿದಾರೆ. ಹದಿನೈದು ದಿನದಲ್ಲಿ ಬರ್ತಾರೆ.

ತಂಪ : ಅವರು ಬಂದ್ರೆ ತುಂಬಾ ಚೆನ್ನಾಗಿರುತ್ತೆ.

ಹಲವರು : ಹೌದು ಹೌದು, ತುಂಬಾ ಚೆನ್ನಾಗಿರುತ್ತೆ.

ಹನುಮ : ಹಂ, ಆಯ್ತಲ್ಲವೋ, ನಡೆದು ಬಿಡಿ ಈಗ.

(ಹಿನ್ನೆಲೆಯಲ್ಲಿ ಸೈರನ್ ಕೂಗು ಸದ್ದು.)

ಸುಮ್ಮಿ : ಓ, ಸೈರನ್.

ಚೆಟ್ಟಿ : ನಡೀರಿ, ನಡೀರಿ, ಹೊತ್ತಾಗುತ್ತೆ ಇನ್ನು.

ಬಂಟು : ಅಂಕಲ್, ಇನ್ನು ದಿನಾ ಸಂಜೆ ನಾವೆಲ್ಲಾ ಇಲ್ಲಿಗೇ ಆಟಕ್ಕೆ ಬರ್ತೇವೆ.

ಕಾಮು : ಸಂಜೆ ಹೊತ್ತು ಆಟ ಆಡ್ಕೊಂಡು, ಹೀಗೆ ಸೈರನ್ ಕೂಗುತ್ತಲ್ಲಾ, ಆಗ ವಾಪಸ್ಸು ಹೋಗಿಬಿಡ್ತೇವೆ.

ಕೇಳು : ಆಮೇಲೆ (ಹಳ್ಳಿ ಹುಡುಗನ ಕಡೆ ತೋರಿಸಿ) ಇವರಿಗೆಲ್ಲ ಕಾಲೋನಿ ದಾಟಿ ಆಚೆ ಹಳ್ಳೀಗೆ ಹೋಗಬೇಕು. ಹೊತ್ತಾಗಿ ಬಿಡುತ್ತೆ.

ಮೀನಿ : ಬರ್ತೀವಿ, ಅಂಕಲ್.

ಮಿಟ್ಟಿ : ಬರ್ತೀವಿ.

ಸೋನಿ : ನಿಮ್ಮ ಹೆಸರು ಏನೂ ಅಂತ ಹೇಳೇ ಇಲ್ವಲ್ಲಾ ಅಂಕಲ್.

ಜೇನಿ : (ಅವನ ಕೈ ಹಿಡಿದು) ಹೇಳು. ಅಂಕಲ್, ನಿಮ್ಮ ಹೆಸರು ಹೇಳಿ.

ಹನುಮ : ಊರು ಹೆಸರು ಕಾಳು, ಹೆಸರು ಉದ್ದಿನ ಕಾಳು.

ಜೇನಿ : ತಮಾಷೆ ಮಾಡ್ತೀರಿ. ಸರಿಯಾಗಿ ಹೇಳಿ ಅಂಕಲ್.

ಹನುಮ : ಪುರುಸೊತ್ತಿದ್ದೋರು ಹನುಮನಾಯಕ ಅಂತಾರೆ. ಆತುರವಿದ್ದೋರು ಹನುಮ ಅಂತಾರೆ.

ಬಂಟು : ಅಂಕಲ್ ಹನುಮಾ! ಅಂಕಲ್ ಹನುಮಾ!

ಕಾಮು : ಹನ್ನು ಅಂಕಲ್, ಹನ್ನೂ ಅಂಕಲ್!

ಎಲ್ಲರೂ : ಹನ್ನೂ ಅಂಕಲ್. ಹನುಮಾ ಅಂಕಲ್!

ಮೀನಿ : ಬರ್ತೀವಿ ಹನುಮಾ ಅಂಕಲ್.

ಎಲ್ಲರೂ : ಬರ್ತೀವಿ ಹನುಮಾ ಅಂಕಲ್, ಬರ್ತೀವಿ ಅಂಕಲ್, ಟಾ ಟಾ.....

(ಎನ್ನುತ್ತಾ ಹೊರಡುತ್ತಾರೆ.

ಓಡುತ್ತ ಹೋಗುವ ಹುಡುಗರು ಘೋಷಣೆ ಕೂಗುತ್ತ ಹೋಗುವುದು ಕೇಳುತ್ತದೆ)

ಜಿಂದಾಬಾದ್ ಜಿಂದಾಬಾದ್! ಹನ್ನೂ ಅಂಕಲ್ ಜಿಂದಾಬಾದ್! ಅಂಕಲ್ ದೈತ್ಯ ಜಿಂದಾಬಾದ್.....

ಹನುಮ : (ಅವರನ್ನೇ ನೋಡುತ್ತ) ಮಕ್ಕಳ ಮ್ಯಾಳ – ಮಂಗನ ತಾಳ!.....

(ಅರಮನೆ ಕಡೆ ತಿರುಗಿ ನಡೆಯುವನು.)

* * *

(ಸ್ವಲ್ಪ ಹೊತ್ತಾದ ಮೇಲೆ ಹನುಮನಾಯಕನ ಪ್ರವೇಶ.)

ಹನುಮ : ಮಕ್ಕಳ ಮ್ಯಾಳ ಮಂಗನ ತಾಳ!.... ಅಲ್ಲಲ್ಲ; ಹಕ್ಕೀ ಮ್ಯಾಳ ಹನುಮನ ತಾಳ!....ಹಾಗೇ ಆಗಿ ಹೋಯಿತಲ್ಲಯ್ಯಾ!....ಗಂಟು ಬಿದ್ದೇಬಿಟ್ಟವು. ಒಂದೆರಡು ಅಲ್ಲ, ಹತ್ತು ದಿನ ಆಯ್ತಲ್ಲ. ದಿನಾ ಸಂಜೆ ಅವು ಹಾಜರ್, ಆಟಕ್ಕೆ....ಅಲ್ಲ, ನಾ ಎಂಥ ಮಂಗ ಮಾರಾಯರೆ, ಅವುಗಳ ಜತೆ ನಾನೂ ಆಟಕ್ಕೆ ತೊಡಗುವುದಾ?.... ಅಲ್ಲ, ಹೊಯ್, ಇನ್ನೊಂದು ಸಂಗ್ತಿ....ಏನೋ ಪರಿಮಳವಪ್ಪಾ....ಬರೀ ಮೂಗಿಗೆ ಅಂತಲ್ಲ, ಮೈಗೆಲ್ಲಾ ರೋಮರೋಮಕ್ಕೆಲ್ಲಾ ಮುಟ್ಟೋ ಪರಿಮಳ....ಮೊದಲು ಇಲ್ಲಿ ಮುನ್ನೂರ ಅರವತ್ತು

ಕಾಲವು ಅದೇನೋ ನಾತವಪ್ಪ....ನಮ್ಮ ಕಂಕಲಾಸುರರು ಕೂಡ, ವರ್ಷದಲ್ಲಿ ನಾಕುದಿನ, ಮೂಗು ಸ್ವಚ್ಛವಿದ್ದಾಗ, ಏನೋ ನಾತ ನಾತ ಅಂತ ಅಬ್ಬರಿಸುತ್ತಿದ್ದರು.... ಈಗ ಅದು ಹೋಗಿ ಎಂಥದೋ ಲಾಲೀ ಬಾಲೀ ಆಕಾಶ ನೀಲಿ ಪರಿಮಳವಪ್ಪ.... ಅಕಾ, ಬಂದವಲ್ಲ, ಹನುಮನಾಯ್ಕನ ದಂಡು!.....

(ಮಕ್ಕಳ ಪ್ರವೇಶ.)

ಎಲ್ಲರೂ : ಅಂಕಲ್....ಅಂಕಲ್....
ಅಂಕಲ್ ಅಂಕಲ್ ಟ್ವಿಂಕಲ್ ಸ್ಟಾರ್....
ಅಂಕಲ್ ಆಟದ ಸ್ಟಾರ್....

ಬಂಟು : ಅಂಕಲ್ ಅಂಕಲ್, ಇವತ್ತು ನಿಮಗಾಗಿ ಒಂದು ನಾಟಕ ಆಡ್ತೇವೆ.

ಬಿಂಕು : ಸಂಗೀತ ನಾಟಕ....

ಮೀನಿ : ಹಾಲಳ್ಳ ಕಾಲನಿ ಸಂಗೀತ ನಾಟಕ–ಅಂತ.

ಮಿಟ್ಟಿ : ನಮ್ಮ ಕನ್ನಡ ಮೇಷ್ಟ್ರು ದುಗ್ಧವತೀ ಚರಿತ್ರಮ್ ಅಂತ ಬರೆದಿಲ್ವಾ–ಅದನ್ನೇ ತಗೊಂಡು. ನಾಟಕ....

ಸೋನಿ : (ಬಾಳನನ್ನು ತೋರಿಸಿ) ಇವನೇ ಡೈರೆಕ್ಟರ್.

ಬಾಳ : ನಾ ಒಬ್ನೇ, ಏನಲ್ಲ, ಎಲ್ಲಾ ಸೇರಿ ಮಾಡೋದು....

ಬಾನಿ : ಬಾಳ, ಚೆನ್ನ, ಸೊಂಪ, ತಂಪ–ಈ ನಾಲ್ಕು ತುಂಬಾ ಚೆನ್ನಾಗಿ ಕುಣೀತಾರೆ.

ನಿಮ್ಮಿ : ಜೇನಿ, ಜೆಟ್ಟಿ, ಸುವ್ವಿ, ಸುಗ್ಗಿ – ಚಂದ ಹಾಡ್ತಾರೆ.

ಬಾಳ : ಮಾತಾಡೋದಿರ್ಲಿ, ನಡೀರಿ ಬೇಗ. ಪ್ರಾರಂಭ ಮಾಡಿ....

(ಮಕ್ಕಳು ತಯಾರಿಯಲ್ಲಿ ತೊಡಗುವರು.)

ಬಂಟು : ಅಂಕಲ್, ನಾವು ಮಾಡೋದು, ನೀವು ನೋಡೋರು. ನೀವು, ಇಕೋ ಇಲ್ಲಿ. (ರಂಗದ ಮಧ್ಯ ತೋರಿಸಿ) ಇಲ್ಲಿ ಕೂತ್ಕೊಳ್ಳಿ.... ಹಂ. ಶುರು ಮಾಡೋಣ,

ಮಕ್ಕಳ ನಾಟಕ ಪ್ರಾರಂಭವಾಗುತ್ತದೆ. ಹನುಮ ಪ್ರೇಕ್ಷಕನಾಗಿ ನೋಡುತ್ತ ಕೂರುತ್ತಾನೆ. ಹಾಡು ಕುಣಿತ ಅಭಿನಯಗಳ ನಾಟಕ.

ನದಿ : (ಹಾಡು) ಜುಳು ಜುಳು ಜುಳು ಹರಿಯುವೆ ನಾ
ಬಂಡೆಗಳಾ ಎಡೆಯೆ ।
ತುಳು ತುಳು ತುಳುಕಾಡುವೆ ನಾ
ದಂಡೆಗಳಾ ನಡುವೆ ॥

ಧಡ ಧಡ ಧಡ ಧುಮ್ಮಿಕ್ಕುವೆ
ಧರೆಯಂಚಿನ ಕೆಳಗೆ॥
ಜಲಪಾತದ ರೋಮಾಂಚನ
ಕಾಮನ ಬಿಲ್ ಮಳೆಗೆ

ಒಬ್ಬ : (ಎದುರು ಬಂದು ನಿಂತು–ಹಾಡು)

ಹಾಲಾಗಿ ಹರಿದು ನೆಲ ತಣಿಸುವಂಥ
ಓ ತಾಯಿ ದುಗ್ಧವತಿಯೇ।
ನಿನ್ನೊಳಿಹ ಶಕ್ತಿ ಮಿತಿಯಿಲ್ಲವಂತೆ
ನಮಗಿತ್ತು ಕರುಣಿಸೌ ತಾಯಿ॥

ನದಿ : (ಹಾಡು) ಹರಿಯೋ ನೀರು ಬೀಸೋ ಗಾಳಿ
ಲೋಕಕ್ಕೇ ಸೇರಿದ ಗಂಟು॥
ಬುದ್ಧಿಯ ಬೆಳೆಸಿ ಶ್ರಮಪಡುವ ಜನಕೆ
ಮೀಸಲು ಇಟ್ಟಹಾಗುಂಟು॥

ಒಬ್ಬ : ಹಾಗಾದರೆ, (ಹಾಡು)

ಹರಸು ತಾಯೀ ಮಕ್ಕಳ॥ ನಿನ್ನ ಕರುಣೆಯ ಒಕ್ಕಲ....
ಬೆಟ್ಟ ಕಡಿವೆವು। ಕಟ್ಟೆಯಿಡುವೆವು
ಹರಸು ತಾಯೀ....
ನಾಲೆ ಸಿಗಿವೆವು, ಕಲ್ಲು ಹುಗಿವೆವು
ಹರಸು ತಾಯೀ....
ಭೂಮಿಗೇ ನಂದನವನೆಳೆವೆವು
ಹರಸು ತಾಯೀ.....

(ಇತ್ಯಾದಿ ಹಾಡುತ್ತಿರುವಾಗ, ಆ ಒಬ್ಬ ಎಂಜಿನಿಯರ್‌ನ ಹಾಗೆ ಸಹಾಯಕರನ್ನೂ ಕರೆದುಕೊಂಡು ಸರ್ವೆ ನಡೆಸುತ್ತಾನೆ; ಅನಂತರ ಅವನ ಸೂಚನೆ ಪ್ರಕಾರ ಯೋಜನೆಯ ಕೆಲಸಗಳೆಲ್ಲ ನಡೆಯುತ್ತವೆ. ಯಂತ್ರಾಗಾರ ನಿರ್ಮಾಣವಾಗುತ್ತದೆ. ತುದಿಗೆ ಸ್ಲೋಗನ್‌ಗಳು....)

ಹಾಲಳ್ಳ ಪ್ರಾಜೆಕ್ಟ್ ಜೈ–ಜೈ
ಎಚ್.ಎಚ್. ಪ್ರಾಜೆಕ್ಟ್ ಜಿಂದಾಬಾದ್

(ಹನುಮ ಎದ್ದು ಬಂದು ನಾಟಕದೊಳಕ್ಕೆ ಸೇರಿಕೊಳ್ಳುತ್ತಾನೆ.)

ಹನುಮ : ಅಂದರೆ ಏನಾಯ್ತಯ್ಯ ಇಲ್ಲಿಗೆ?

ಬಂಟು : ಎಲೆಕ್ಟ್ರಿಸಿಟಿ ತಯಾರಾಯ್ತು.

ಮೀನಿ : ವಿದ್ಯುಚ್ಛಕ್ತಿ ಬಂತು.

ಹನುಮ : ಮುಂದಕ್ಕೆ ಏನಯ್ಯಾ?

ಬಿಂಕು : ಕಂಬ ಹುಗೀತೇವೆ. ತಂತೀ ಬಿಗೀತೇವೆ....

ಹನುಮ : ಅದರ ಮುಂದಕ್ಕೆ–

ಕಾಮು : ಮಿಲ್ ಮಾಡ್ತೇವೆ, ಫ್ಯಾಕ್ಟರಿ ಮಾಡ್ತೇವೆ....

ಕೇಳು : ಕಾರ್ಖಾನೆ ಮಾಡ್ತೇವೆ....

ಮಿಟ್ಟಿ : ಬ್ರೆಡ್ ಮಾಡ್ತೇವೆ. ಬಟ್ಟೆ ಮಾಡ್ತೇವೆ...

ಚಾರು : ಸಕ್ಕರೆ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ....

ಹನುಮ : ಹೋಯ್, ಇಲ್ಲಿ, ಕೇಳಿರಯ್ಯಾ–ನೀವು ಬ್ಯಾಡ, ನಾನೇ ಪಾಯಖಾನೆ ಮಾಡ್ತೇನೆ.

ಚೇರ : ಪಾಯಖಾನೆ ಅಲ್ಲ, ಕಾರ್ಖಾನೆ.

ಹನುಮ : ಹರಿ, ಹರಿ. ಅದನ್ನ ನಾನೇ ಮಾಡ್ತೇನೆ.

ಸೋನಿ : ಮಾಡಿ ಅಂಕಲ್.

ಬಾನಿ : ನೀವೇ ಮಾಡಿ ಅಂಕಲ್.

ಬಾಳ : ನಾವು ವರ್ಕರ್ಸ್ ಆಗ್ತೇವೆ.

ಚೆನ್ನ : ಕಾರ್ಖಾನೇಲಿ ಕೆಲಸ ಮಾಡ್ತೇವೆ.

ತಂಪ : ನಮಗೆ ಸಂಬಳ ಕೊಡಿ.

ಹನುಮ : ಆಯ್ತಯ್ಯಾ ಆಯ್ತು. ನಿಮಗೆಲ್ಲರಿಗೂ ಕೆಲಸ ಕೊಡುವ. ಅಟ್ಟಂಬಟ್ಟೇ ಅತ್ತೀಕಾಯೀ. ಸಂಬಳಾನೂ ಕೊಡುವ, ಹಾಗಂತ ಈಗ ಯಾವುದರ....(ಹೆಸರು ಮರೆತು)....

ಬಂಟು : ಕಾರ್ಖಾನೆ....

ಹನುಮ : ಯಾವುದರ ಕಾರ್ಖಾನೆ ಮಾಡುವುದಯ್ಯಾ?....ಅಟ್ಟಂಬಟ್ಟೇ ಅಳಲೆ ಕಾಯಿ, ಹೋಳಿಗೆ ಲಾಡು ಕಾರ್ಖಾನೆ ಮಾಡಿಬಿಡ್ತೇನೆ.

ಜೇನಿ : ಮಾಡಿ ಅಂಕಲ್.

ಎಲ್ಲರೂ : ಮಾಡಿ ಅಂಕಲ್.

ಹನುಮ : ಬ್ಯಾಡ ಬ್ಯಾಡ. ತಯಾರಿಸಿದ್ದೆಲ್ಲಾ ನೀವೇ ತಿಂದು ಹಾಕಿ ಬಿಡ್ತೀರಿ. ಆಮೇಲೆ....ಬಟ್ಟೇ ಕಾರಖಾನೆ....

ಬಂಟು : ಕಾರ್ಖಾನೆ....

ಹನುಮ : ಅಟ್ಟಂಬಟ್ಟೆ ಅಂಟಿನಕಾಯಿ, ಬಟ್ಟೆ ಕಾರ್ಖಾನೆ ಮಾಡುವ....ಬ್ಯಾಡ, ಅಷ್ಟೆಲ್ಲಾ ಬಟ್ಟೆ ತಯಾರಿಸಿ ಯಾರ ಮೈಮೇಲೆ ಹೊದೆಸುವುದು?....ಹೀಗೆ ಮಾಡ್ತೇನೆ....

ಜೆಟ್ಟಿ : ಹಾಗೇ ಮಾಡಿ ಅಂಕಲ್.

ಹನುಮ : ಆಫ್ರಿಕಾದಲ್ಲಿ ನಮ್ಮ ಉಮುಂಬಾಸುರರು ಇದ್ದಾರಲ್ಲಾ ಅವರಿಗೆ ಯಾವಾಗಲೂ ಮೃಗಗಳ ಹಾವಳಿ, ಮನುಷ್ಯ ಹಾವಳಿ.... ನಾವು ಕೋವಿ ಕಾರ್ಖಾನೆ ಮಾಡಿ ಬಿಡ್ತೇವೆ.... ಇಲ್ಲಿ ಕೋವಿ ಮಾಡಿ ಅವರಿಗೆ ಮಾರುವುದು ಲಾಭ ಲಪಟಾಯಿಸುವುದು.....

ಸುವ್ವಿ : ಹಾಗೇ ಮಾಡಿ ಅಂಕಲ್.

ಹನುಮ : ಹಂ, ಅಟ್ಟಂಬಟ್ಟಿ ಅಳಲೇಕಾಯಿ.... ಕಾರ್ಖಾನೆ ತಯ್ಯಾರ್.....

(ಎನ್ನುವಂತೆ ಮಕ್ಕಳೆಲ್ಲ ಫ್ಯಾಕ್ಟರಿ ಆಗಿ ಕೆಲಸಗಾರರಾಗಿ ಫಾರ್ಮೇಶನ್ ಮಾಡಿಕೊಳ್ಳುವರು. ಮೂಕಾಭಿನಯ– ಸದ್ದು. ಜುಕ್ ಜುಕ್ ಜುಮ್ ಜುಮ್ ಟೀಂಕ್ ಟೀಂಕ್ – ಇತ್ಯಾದಿ.)

ಹನುಮ : ಲಾಭ ಒಂದು.... ಲಾಭ ಎರಡು....ಲಾಭ ನಾಲ್ಕು....ಲಾಭ ಎಂಟು.. ಲಾಭ ಹದಿನಾಲ್ಕು....ಅರೆ! ಹದಿನಾರು ಬರಬೇಕಿತ್ತಲ್ಲ, ಹದಿನಾಲ್ಕೇ ಬಂತು! ಸರೀ ಲಾಭ ಬರ್ತಿಲ್ಲ, ಜಾಸ್ತಿ ಕೆಲಸ ಮಾಡಿ....

(ಎದ್ದು ಹೋಗಿ 'ಜಾಸ್ತಿ ಕೆಲಸ ಮಾಡಿ' 'ಸೋಮಾರಿತನ ಮಾಡಬೇಡಿ' ಎನ್ನುತ್ತ ಒಬ್ಬೊಬ್ಬರಿಗೂ ಹೊಡೆಯುತ್ತಾನೆ, ಒದೆಯುತ್ತಾನೆ.)

ಬಾಳು : ಊಟಕ್ಕೆ ಸಾಕಾಗೋಲ್ಲ, ಸಂಬಳ ಜಾಸ್ತಿ ಕೊಡಿ.

ಚೆನ್ನ : ಅಷ್ಟೆಲ್ಲಾ ಲಾಭ ತಗೋತೀರಲ್ಲ, ನಮಗೂ ಕೊಡಿ.

ಎಲ್ಲರೂ : ನಮಗೂ ಕೊಡಿ, ನಮಗೂ ಕೊಡಿ. (ಗಲಭೆ)

ಹನುಮ : ಹೇಳಿದ ಹಾಗೆ ಹೇಳಿಕೊಂಡು ಕೊಟ್ಟಷ್ಟು ತೊಗೊಂಡು ಕೆಲಸ ಮಾಡಿ. ನಾ ಯಜಮಾನ. ನೀವು ಕೆಲಸಗಾರರು. ಹೀಗೆ ಎದುರು ನಿಂತು ಲಟ್ಟೇಕಾಯಿ ಲಂಡೆಕಾಯಿ ಅನ್ನಕೂಡದು.

ತಂಪ : ಸಂಬಳ ಹೆಚ್ಚು ಕೊಡದಿದ್ರೆ ಕೆಲಸಾನೇ ಮಾಡೋಲ್ಲ.

ಸೊಂಪ : ಸ್ಟ್ರೈಕ್ ಮಾಡ್ತೀವಿ.

ಮೀನಿ : ಮುಷ್ಕರ ಹೂಡ್ತೀವಿ.

(ಎಲ್ಲರೂ ಕೆಲಸ ಬಿಟ್ಟು ಬಂದು ಕುಳಿತುಕೊಳ್ಳುತ್ತಾರೆ.)

ಹನುಮ : ಭಟರನ್ನ ಕರಸ್ತೇನೆ....ದಂಡು ಬರ ಮಾಡ್ತೇನೆ. ನಿಮಗೆಲ್ಲಾ ಲಾತು ಹಾಕಿಸ್ತೇನೆ....

ಬಂಟು : ಏನು ಬೇಕಾದರೂ ಮಾಡಿ. ನಾವು ಕೆಲಸ ಮಾಡೋದಿಲ್ಲ....

ಚೆನ್ನ : ನಾವು ಇಲ್ಲೇ ಕೂತು ಸತ್ಯಾಗ್ರಹ ಮಾಡ್ತೇವೆ....

ಬಿಂಕು : ಗಾಂಧಿ ಹೇಳಿದ ಹಾಗೆ ಸತ್ಯಾಗ್ರಹ ಮಾಡ್ತೇವೆ....

ಎಲ್ಲರೂ : ಸತ್ಯಾಗ್ರಹ ಮಾಡ್ತೇವೆ....

ಹನುಮ : ಚರ್ಮಾ ಸುಲಿಸ್ತೇನೆ....

ಕಾಮು : ಜೀವ ತೆಗೆದರೂ ಸರಿ....

ಮಿಟ್ಟಿ : ಕೊಂದು ಹಾಕಿದರೂ ಸರಿ....

ಎಲ್ಲರೂ : ಕೆಲಸಾ ಮಾಡೋದಿಲ್ಲ....

ಹನುಮ : ಪಾಯಿಖಾನೇಗೆ ಬೀಗ ಹಾಕಿಸ್ತೇನೆ....

ಕೇಳು : ಕಾರ್ಖಾನೆಗೆ–

ಹನುಮ : ಹುಂ, ಬೀಗ ಹಾಕಿಸ್ತೇನೆ....

ಕಾಮು : ಹಾಗೇ ಮಾಡಿ....

ಹನುಮ : ಬೆಂಕಿ ಹಚ್ಚಿಸ್ತೇನೆ....

ಬಾನಿ : ನಿಮ್ಮದೇ ಹೋಗುತ್ತೆ.....

ಹನುಮ : ಹಾಗಾದರೆ (ಯೋಚಿಸಿ) ಹೌದಾ, ನಿಮ್ಮದೇ ಹಟಾನಾ? ನನಗೂ ಹಟ ಇಲ್ಲವೋ, ನನಗೂ ಛಲಾ ಇಲ್ಲವೋ.... ಕೌರವರಾಯನ ಹಠ, ಕಾವೇರಿ ಮದ.... ಇಕೋ, ಇವತ್ತಿಂದ ಈ....

ಬಂಟು : ಕಾರ್ಖಾನೆ....

ಹನುಮ : ಹುಂ, ನಂದೂ ಅಲ್ಲ, ನಿಮ್ಮದೂ ಅಲ್ಲ. ಅಂದ್ರೆ, ನಂದೂ ಹೌದು, ನಿಮ್ದೂ ಹೌದು.... ನೀವೂ ದುಡಿಯೋದು, ನಾನೂ ದುಡಿಯೋದು. ಲಾಭ ಎಲ್ಲರೂ ಹಂಚಿಕೊಳ್ಳೋದು.

ಎಲ್ಲರೂ : ಜಿಂದಾಬಾದ್ ಜಿಂದಾಬಾದ್ ಅಂಕಲ್ ಫ್ಯಾಕ್ಟರಿ ಜಿಂದಾಬಾದ್!

(ಸೈರನ್ ಕೂಗು)

ಮೀನಿ : ಓ, ಸೈರನ್!

ಬಂಟು : ಹೋಗೋಣ, ಆಟ ಸಾಕು.

ಎಲ್ಲರೂ : ಹೋಗೋಣ ಹೋಗೋಣ.....

ಬಂಟು : ಹೋಗ್ತೀವಿ ಅಂಕಲ್

ಮಿಟ್ಟಿ : ನಾಳೆ ಬರ್ತೀವಿ, ಮತ್ತೆ....

ಚೇರ : ನಾಳೆ ಸಂಜೆ....

(ಎಲ್ಲರೂ ಓಡುವರು. ಹೋಗುತ್ತಲೇ ಘೋಷಣೆ:)

ಜಿಂದಾಬಾದ್ ಜಿಂದಾಬಾದ್! ಅಂಕಲ್ ಫ್ಯಾಕ್ಟರಿ ಜಿಂದಾಬಾದ್!

ಹನುಮ : ....ಆಟ ತುದೀಲಿ ಬುರುನಾಸು ಆಗಿ ಬಿಡ್ತಲ್ಲ.... ತುದೀಲಿ ತಪ್ಪಾಗಿ ಬಿಡ್ತಯ್ಯ....ಲಾಠೀ ಚಾರ್ಜ್ ಮಾಡಿಸಿ ಬಿಡ್ಬೇಕಾಗಿತ್ತು. ಗೋಲಿಬಾರ್ ಮಾಡಿಸಿ ಬಿಡ್ಬೇಕಾಗಿತ್ತು....

(ಎನ್ನುತ್ತ ಅರಮನೆ ಕಡೆಗೆ ಹೋಗುತ್ತಾನೆ – ಕತ್ತಲು)

* * *

(ಕತ್ತಲಲ್ಲಿ ಡೊಳ್ಳು ತಮಟೆ ಓಲಗ ಮುಂತಾದ ಭಾರೀ ಗದ್ದಲ. ಪಂಜಿನ ಭಾರೀ ಮೆರವಣಿಗೆ. ಆಮೇಲೆ ಕ್ರಮೇಣ ಬೆಳಕು. ಬೆಳಕಾದ ಮೇಲೆ ಹನುಮ ಪ್ರವೇಶ.)

ಹನುಮ : ಹೋಯ್....ಕಂಡಿರಾ ದಿಬ್ಬಣ? ಎಂಥಾ ದಿಬ್ಬಣವಯ್ಯಾ! ಅದೇನು. ಗೊತ್ತಾಯಿತಾ ನಿಮಗೆ?....ಮಕ್ಕಳ ಆಟ, ಮಳ್ಳೀ ತೋಟ ಅಂತ ಮಾಡಿಬಿಟ್ರಿರೋ? ಅಲ್ಲವಯ್ಯಾ ಅಲ್ಲ. ನಿನ್ನೆ ರಾತ್ರಿ ನಮ್ಮ ಕಂಕಲಾಸುರ ದಣಿಗಳು ವಾಪಸು ಬಂದರು. ಅವರದ್ದೇ ದಿಬ್ಬಣ...ಹ್ಞಾ ಅರಮನೆಯಲ್ಲಿ ಬಂದು ವಸ್ತಿ ಹಾಕಿಬಿಟ್ಟಿದ್ದಾಗಿದೆ. ಈಗ ಬೆಳಗಾಗಿ ಇಷ್ಟು ಹೊತ್ತು ಆಯಿತಲ್ಲ, ಇನ್ನೇನು ಒಡ್ಡೋಲಗ ಕೊಡುವಂಥಾ ಸಮಯ.

ಒಳಗಿನಿಂದ– ರಾಕ್ಷಸರ ಅಬ್ಬರ

ಹನುಮ : ಓ....ಬಂದುಬಿಟ್ಟರು ಒಡ್ಡೋಲಗಕ್ಕೆ....(ಒಳಗೆ ನೋಡಿ) ಹೋಯ್, ಎಲ್ಲಿ ಹೋದ್ರಿ ಚಂಡೆ ಮದ್ದಳೆ ಎಲ್ಲಾ?.... ಬೇಗೆ ಬನ್ನಿ, ದಣಿಗಳು ಒಡ್ಡೋಲಗಕ್ಕೆ ತಯ್ಯಾರ್.... ಭಳಿರೇ ಪರಾಕ್ರಮ ಕಂಠೀರವ....

(ಚಂಡೆ ಮದ್ದಳೆಯವರು ಪಾರ್ಶ್ವಕ್ಕೆ ಬಂದು ಕೂತು ಬಾರಿಸತೊಡಗುತ್ತಾರೆ. ಕಂಕಲ ದೈತ್ಯನ ಪ್ರವೇಶ. ಒಡ್ಡೋಲಗ, ಕುಣಿತ, ಅಭಿನಯ, ಆತ ತನ್ನ ದಿನಚರಿಯನ್ನು ಅಭಿನಯಿಸಿದ ಹಾಗೆ– ಹನುಮ ವಿವರಿಸುತ್ತ ಹೋಗುತ್ತಾನೆ.)

ಹನುಮ : ಭಳಿರೇ ಪರಾಕ್ರಮ ಕಂಠೀರವ – ಗಂಡರಗಂಡ, ವೈರಿಗಳ ರುಂಡಾ–ಮುಂಡಾ ಕಂಡಾಬಟ್ಟೆಕೊಂಡ ಗಂಡಭೇರುಂಡ, ಚಂಡ ಪ್ರಚಂಡಾ, ಜಗಭಂಡಾ–ಭಳಿರೇ ಶಹಬ್ಬಾಸ್ ಕಂಕಲಾಸುರ ಮಹಾಪ್ರಭೂ–ಭೋ ಪರಾಕ್, ಭೋ ಪರಾಕ್, ಭೋ ಪರಾಕ್....ಓಹೋಯ್, ಪಂಚಪಂಚ ಉಷಃಕಾಲದಲ್ಲಿ ಕೋಳಿ ಕೂಗಿದ್ದು ಕೇಳಿದ್ದೇ

ತಡ–ಕೋಳಿ ಸಾರಿನ ನೆನಪಾಗಿ– ಎಚ್ಚರವಾಗಿ ಬಿಡ್ತಾರೆ. ಎದ್ದದ್ದೇ ವರಳುಕಲ್ಲಿಗೆ ನಮಸ್ಕಾರ ಹಾಕ್ತಾರೆ, ಅಂದ್ರೆ ಈಶ್ವರ ದೇವ್ರಿಗೆ ಪ್ರಣಾಮ ಮಾಡ್ತಾರೆ. ಅದಾದ ಮೇಲೆ ನಿತ್ಯ ಕರ್ಮಗಳು,

(ಒಂದು ಎರಡು ಬೆರಳು ಬಿಚ್ಚಿ) ತಿಳೀತಲ್ಲ!

ಅದಾದ ಮೇಲೆ ಮುಖಕ್ಷೌರ; ಮುಖಕ್ಷೌರವಾದ ಮೇಲೆ ಕೈಪೊರಕೆ ಹಿಡಿದು ದಂತಮಂಜನ ಇದೆಲ್ಲ ಹೊಸತಾಗಿ ಆಫ್ರಿಕಾದಲ್ಲಿ ಕಲಿತುಕೊಂಡದ್ದು– ದಂತಮಂಜನ ಆದ ಮೇಲೆ ಅಭ್ಯಂಜನ–ಆಮೇಲೆ ಮತ್ತೆ ವರಳುಕಲ್ಲಿಗೆ ಜಳಕ, ಹೂವು. ಅಂದ್ರೆ ಈಶ್ವರ ಪೂಜೆ. ತದನಂತರದಲ್ಲಿ ಸಪ್ತಮೃಗಗಳ ಮಾಂಸದಿಂದ ಷಡ್ರಸೋಪೇತವಾಗಿ ತಯ್ಯಾರಿಸಿದಂಥಾ ಮೃಷ್ಟಾನ್ನಭೋಜನದ ಭುಂಜನ. ಗುಂಡು ಹೊಟ್ಟೆ ತೃಪ್ತಿಯಿಂದ ನೆಲಮುಟ್ಟಿ ಕೂತಮೇಲೆ ಎರಡೂ ಕೈ ನೆಲಕ್ಕೂರಿ ಮೇಲಕ್ಕೇಳ್ತಾರೆ. ಮೂರು ಸಲ ಢರ್ ಅಂತ ತೇಗಿ ಒಡ್ಡೋಲಗಕ್ಕೆ ಹೊರಡ್ತಾರೆ. ಹಾಗೆ ಇವತ್ತು ಒಡ್ಡೋಲಗ ಕೊಟ್ಟಿರುವಂಥಾ ಸಮಯ.....

ರಾಕ್ಷಸ : (ಗರ್ಜಿಸುತ್ತಾನೆ)

ಹನುಮ : ಒಡ್ಡೋಲಗ ಕೊಟ್ಟಂಥಾ ಸಮಯ, ಮತ್ತೇನು ರಾಜಕಾರ್ಯ ಅಂತಿದಾರೆ....(ರಾಕ್ಷಸನಿಗೆ) ಸದ್ಯ ಇವತ್ತು ಯಾವುದೂ ಕಾಣ್ತಾ ಇಲ್ಲ. ಪರಾಕೇ.

ರಾಕ್ಷಸ : (ಗರ್ಜನೆ)

ಹನುಮ : ಹೌದೋ, ಹಾಗಾದರೆ ಮೃಗಯಾವಿಹಾರ ಹೊರಡ್ತೇವೆ ಅಂತಿದಾರೆ. (ರಾಕ್ಷಸನಿಗೆ) ಆಗಬಹುದು ಮಹಾಸ್ವಾಮಿ. ಅಲ್ಲ, ಆಗಕೂಡದು ಅಂದ್ರೆ ಕೇಳ್ತಾರೋ, ಅದಕ್ಕಾಗಿ ಆಗಬಹುದು ಅಂತ ಅಪ್ಪಣೆ ಕೊಟ್ಟೇಬಿಟ್ಟೆ.

ರಾಕ್ಷಸ : (ಗರ್ಜನೆ)

ಹನುಮ : ಇದೇನಯ್ಯಾ ಹನುಮನಾಯಕಾ, ವಿದೇಶದಿಂದ ಹಿಂತಿರುಗಿ ಬಂದು ನಾವು ನೋಡುತ್ತಾ ಇರುವಾಗ ಇದೇನು ಕಾಣತಾ ಇದೆ; ಈ ನಮ್ಮ ಉದ್ಯಾನವನ ಯಾವತ್ತೂ ಇಲ್ಲದ ಹಾಗೆ ಹೀಗೆ ಚಂದವಾಗಿ ಕಂಗೊಳಿಸ್ತಾ ಉಂಟಲ್ಲ, ಚಿಗುರಿಕೊಂಡಂಥ ಗಿಡಮರಗಳು, ಚಿಲಿಪಿಲಿಗುಟ್ಟುವಂಥಾ ತಂಡೋಪತಂಡ ಪಕ್ಷಿಗಳು, ಲಂಡೇಲಗಾಮು ಲಟ್ಟಿಲಸಗು ಅಂತಿದಾರೆ!....ಹೌದಲ್ಲಾ ಮಹರಾಯರೆ, ನಾನೊ ಸಮಾ ನೋಡೇ ಇರ್ಲಿಲ್ಲ–(ರಾಕ್ಷಸನಿಗೆ) ಹೌದು ಮಹಾಸ್ವಾಮಿ, ನಾನೂ ಕಂಡೆ.

ರಾಕ್ಷಸ : (ಗರ್ಜನೆ)

ಹನುಮ : ಕಲ್ಪವೃಕ್ಷವೇ ಇರತಕ್ಕಂಥಾ ದೇವೇಂದ್ರನ ನಂದನವನದ ಹಾಗೆ ತೋರುತ್ತದಲ್ಲಾ ಅಂತಿದಾರೆ, ಹ್ವಾ, ಯಾರಾದರೂ ದನ ತಂದು ಕೂಡ್ತಾರೆ ಬಿಡಿ ಮೇಯೋಕೆ– (ರಾಕ್ಷಸನಿಗೆ) ನಾನೂ ಅದೇ ಹೇಳ್ಬೇಕು ಅಂತಿದ್ದೆ, ಪ್ರಭುಗಳೇ.

ರಾಕ್ಷಸ : (ಗರ್ಜನೆ)

ಹನುಮ : ಸಂತೋಷವಾಯಿತು. ಪರಮ ಸಂತೋಷವಾಯಿತು, ಇನ್ನು, ಇದೋ ಬೇಟೆಗೋಸ್ಕರವಾಗಿ ತೆರಳಿ ಬಿಡುವ ಅಂತಿದಾರೆ – (ರಾಕ್ಷಸನಿಗೆ) ಹಿಂದೇ ಹೊರಟು ಬಿಟ್ಟೇವು ಮಹಾ ಸ್ವಾಮಿ!..... ದೊರೆಚಿತ್ತ ಕಾಯಿಕತ್ತ...

(ರಾಕ್ಷಸ, ಹನುಮ ಕುಣಿಯುತ್ತ ನಿಷ್ಕ್ರಮಿಸುತ್ತಾರೆ.)

* * *

ಹನುಮ : ಓಯ್, ಬೇಟೆ ಮುಗಿಸಿ ಬಂದು ಬಿಟ್ಟೆವಯ್ಯಾ ಒಳ್ಳೇ ಭರ್ಜರಿ ಬೇಟೆ....ಅಂಥಾ ಮಟಮಟಾ ಮಧ್ಯಾಹ್ನದಲ್ಲೇ. ಕಾಡಿನಲ್ಲಿ ಎಲ್ಲಿ ನೋಡಲಿ, ಪ್ರಾಣಿಗಳೇ. ಸಿಂಹ, ಶಾರ್ದೂಲ, ಹುಲಿ, ಕರಡಿ, ಕುರ್ಕ, ಬರ್ಕ, ಕಾಡೆಮ್ಮೆ, ಕಾಡುಕೋಣ, ಕಾನ್‌ಕುರಿ, ಕಾನ್‌ಕೋಳಿ, ಹಂದಿ, ಮಿಕಾ–ಒಂದಾ ಎರಡಾ? ಮಟ್ಟಿ–ಮಟ್ಟೀಲೂ ಮೃಗಗಳೇ. ಒಂದು ತಾಸಲ್ಲಿ ನಾಲ್ಕು ಬಂಡಿ ತುಂಬಿಸಿಕೊಂಡು ಬಂದುಬಿಟ್ಟೆವು.... ದಣಿಗಳಿಗೆ ಆಶ್ಚರ್ಯವಾಗಿಬಿಡ್ತಯ್ಯಾ, ಇದೇನಾಗಿಬಿಟ್ಟಿದೆ ಅಂತ.... ಅಲ್ಲ, ಆಫ್ರಿಕಾದ ಕಾಡು ನೋಡಿ ದಣಿಗಳು ಹೇಳ್ತಾ ಇದ್ರು, ಕಾಡು ಅಂದ್ರೆ ಇದಪ್ಪಾ ಅಂತ. ಈಗ ಈ ನಮ್ಮ ಕಾಡು ಅದಕ್ಕಿಂತ ಸೊಂಪಾಗಿ ಬಿಟ್ಟಿದೆಯಲ್ಲಾ.... ಅಲ್ಲಿ ಅಣೆಕಟ್ಟು ಹಾಕಿದ್ದಕ್ಕೆ ಹೀಗೆ ಸೊಂಪಾಗಿ ಬಿಟ್ಟಿತಾ?.... ಇರಲಿಕ್ಕಿಲ್ಲ ಇರಲಿಕ್ಕಿಲ್ಲ. ಯಾಕೆಂದರೆ, ನಾನು ಇಲ್ಲಿಗೆ ಬಂದಾಗ ಒಂದು ಮಾಸದ ಹಿಂದೆ ಹೀಗಿರಲಿಲ್ಲ. ಗಿಡ ಮರ ಎಲ್ಲಾ ಬರಲು ಬರಲಾಗಿದ್ದವಪ್ಪ.... ಸಾಯಲಿ ಬಿಡಿ, ಸುಡುಗಾಡು. ಯೋಚಿಸಿ ತಲೆ ಯಾಕೆ ಹಾಳುಮಾಡಿಕೊಳ್ಳುವುದು?.... ಒಳಗೆ ಅರಮನೇಲಿ ದಣಿಗಳು ಪಲ್ಲಂಗದ ಮೇಲೆ ಮಲ್ಲಂಗ ಹಾಕಿದಾರೆ. ನಾವೂ ಇಲ್ಲೇ ಎಲ್ಲಾದರೂ ಮರದ ಕೆಳಗೆ ಕಾಲು ನೀಡಿ ಕಣ್ಣು ಬಾಡಿಸೋದು ಒಳ್ಳೇದು, ಸಂಜೆ ತನಕ– ಅಲ್ಲವೋ?

(ಹನುಮ ನಿಷ್ಕ್ರಮಿಸುತ್ತಾನೆ. ಸ್ವಲ್ಪ ಹೊತ್ತು ಕಳೆದು ಹುಡುಗರ ಗದ್ದಲ. ಹುಡುಗರ ಪ್ರವೇಶ. ಅವರಲ್ಲಿ ಜೇನಿ ಎಂಬ ಹುಡುಗಿ ನೆಲದ ಮೇಲೆ ಏನೋ ಕಂಡು, ಶಶ್–ಎಂದು ಹುಡುಗರ ಗದ್ದಲ ನಿಲ್ಲಿಸುತ್ತಾಳೆ.)

ಜೇನಿ : (ಮೇಲುದನಿಯಲ್ಲಿ) ಅಂಕಲ್ ದೈತ್ಯ ಬಂದಿದಾರೆ.

ಎಲ್ಲರೂ : ಆಂ? ಹೌದಾ? ಹ್ಯಾಗೆ ಹೇಳ್ತಿಯೆ?

ಜೇನಿ : ಇಲ್ಲಿ ನೋಡಿ ಹೆಜ್ಜೆ.

ಸುವ್ವಿ : ಹೌದು, ಹೌದು,

ಎಲ್ಲರೂ : ಹೌದು ಹೌದು....

(ತಟ್ಟನೆ ಬೆಳಕು ಮೂಡುತ್ತದೆ. ಜೇನಿ, ಜೆಟ್ಟಿ, ಸುವ್ವಿ, ಸುಗ್ಗಿ ಮಧುರವಾದ ಧಾಟಿಯೊಂದನ್ನು ಗುನುಗತೊಡಗುತ್ತಾರೆ. ಆಲಾಪದ ಹಿನ್ನೆಲೆಯಲ್ಲಿ ಹುಡುಗರೆಲ್ಲ ನೃತ್ಯಗತಿಯಲ್ಲಿ ಚಲಿಸುತ್ತ ತೋಟದ ಗಿಡಮರಗಳನ್ನು ಎಲೆ–ಹೂಗಳಿಂದ ಮತ್ತೂ ಶೃಂಗಾರಗೊಳಿಸುತ್ತಾರೆ. ಈಗ ತೋಟ ಮನೋಹರ ವಾಗಿದೆ. ನೆಲದ ತುಂಬ ಬಣ್ಣದ ಹೂಗಳ ರಂಗೋಲೆ ರಚಿತವಾಗಿದೆ. ಅನಂತರ–)

ಬಂಟು : ಅರಮನೆಗೆ ಒಳಗೇ ಹೋಗೋಣ.

ಬಿಂಕು : ಹೌದು, ನಡೀರಿ. ಅಂಕಲ್ ಜಯಂಟ್‌ನ ಮಾತಾಡಿಸೋಣ.

(ಎಲ್ಲರೂ ಅರಮನೆಯೊಳಕ್ಕೆ ಹೋಗುತ್ತಾರೆ. ಸ್ವಲ್ಪ ಹೊತ್ತು ಕಳೆದ ಮೇಲೆ ಹನುಮ ಕಣ್ಣು ತಿಕ್ಕುತ್ತ ಪ್ರವೇಶಿಸುತ್ತಾನೆ.)

ಹನುಮ : ಅದು ಯಾವಾಗ ನಿದ್ರೆ ಬಂದು ಬಿಟ್ಟಿತೋ..... ನಮ್ಮ ಎಂಟನೇ ಪೋರ ಕುಂಟುತ್ತಾ ಬರುತ್ತಿತ್ತು. ಅಪ್ಪಯ್ಯಾ ಅಂತು. ಓ ಅಂತ ಕೈನೀಡಿದೆ. ಬಿದ್ದು ಬಿಡ್ತು. ಮತ್ತೆ ನೋಡಿದ್ರೆ ಮಗೂ ಇಲ್ಲ, ಮಾಯ. ನೆಲದ ತುಂಬಾ ಹೂವು. ಇದೇನು ಅಚೋದ್ಯ ಮಾರಾಯರೆ, ಮನುಷ್ಯ ಜಾತಿ ಹೋಗಿ ರಾಕ್ಷಸ ಜಾತಿಗೆ ಬಂದ ಮೇಲೆ ಸ್ವಪ್ನ ಅಂತ ಕಂಡಿದ್ದಿಲ್ಲಪ್ಪ. ಇದೇ ಮ ಒದಲು. (ಮೇಲೆ ಕೆಳಗೆ ನೋಡಿ) ಅಲೆ!... ಇನ್ನೂ ಸ್ವಪ್ನದೊಳಗೇ ಇದ್ದೇನೋ.... ಅಲ್ಲಿ ಕಂಡದ್ದೇ. ಹೀಗೆ ನೆಲದ ಮೇಲೆಲ್ಲಾ ಹೂವು, ಗಿಡದ ಮೇಲೆಲ್ಲಾ ಹೂವು! ಅಲಲೆ! (ಒಳಗಿನಿಂದ ಸದ್ದು) ಏನು ಗಲಾಟೆ?..... ಓಯ್, ಹುಡುಗರ ಸಂಗತಿ ಮರೆತೆ ಬಿಟ್ಟಿದ್ದೆ – ಅವೇ ಬಂದು ಬಿಟ್ಟವೋ ಅಂತ. (ಹೋಗಿ ನೋಡಿ) ಹೋಯ್, ಅರಮನೆ ಒಳಗೇ ಹೋಗಿ ಬಿಟ್ಟಿದಾವೆ ಅಂತ ಕಾಣುತ್ತೆ.....ಒಳ್ಳೇ ಗೋಜಗೊಂಡ ಆಗಿ ಹೋಯ್ತಲ್ಲ ಮಾರಾಯರೆ, ಇನ್ನೇನು ರಾಕ್ಷಸರು ಕೆಂಡವೇ ಆಗಿ ಬಿಡ್ತಾರೆ.... ನನ್ನ ಚರ್ಮ ಸುಲೀತಾರೆ ಬಿಡಿ.... ಅರೆ ಅರೆ, ಅರೆ ಅರೆ, ದಣಿಗಳೇ ಹೊರಗೆ ಬಂದುಬಿಟ್ಟರಲ್ಲ. ಹುಡುಗರು ಮುತ್ತಿಗೆ ಹಾಕಿಬಿಟ್ಟಿದಾವೆ....(ಪಕ್ಕಕ್ಕೆ) ಏಯ್ ಚಂಡೆ, ದಣಿಗಳಿಗೆ ಕ್ರೋಧ ಬಂದುಬಿಟ್ಟಿದೆ, ಉರಿ ಚಂಡೆ ತಗೋ, ಬೇಗ.....

(ಚಂಡೆಯವನು ಬಂದು ಪಕ್ಕಕ್ಕೆ ಕೂತು ಬಾರಿಸತೊಡಗುತ್ತಾನೆ. ಅರಮನೆಯೊಳಗಿಂದ ರಾಕ್ಷಸ ಮತ್ತು ಆತನನ್ನು ಸುತ್ತಿಕೊಂಡ ಹುಡುಗರು ಬರುತ್ತಾರೆ. ಚಂಡೆಯ ತಾಳಕ್ಕೆ ಕುಣಿತ. ರಾಕ್ಷಸ ಹುಡುಗರನ್ನು ಬೆದರಿಸುತ್ತಾನೆ. ಅಟ್ಟುತ್ತಾನೆ. ಹುಡುಗರು ಅದನ್ನು ಆಟವೆಂದುಕೊಂಡು ಆಡತೊಡಗಿದ್ದಾರೆ. ಹನುಮ ಅವರನ್ನು ಅಟ್ಟಲು ತೊಡಗುತ್ತಾನೆ. ಹುಡುಗರು–ಗುಡುಗುಡು, ಗುಡುಗುಡು, ಗುಡಾನೆ ಗುಡುಗುಡು ಎನ್ನುತ್ತ ರಾಕ್ಷಸ, ಹನುಮರ ಜೊತೆ ಮೋಜಿನಿಂದ ಆಡುತ್ತಾರೆ. ಇಡೀ ದೃಶ್ಯ ಹುಡುಗರ ಮುಟ್ಟಾಟದಂತಾಗಿ ಬಿಡುತ್ತದೆ. ತುದಿಯಲ್ಲಿ ಸೈರನ್ ಕೂಗು ಕೇಳಿಸುತ್ತದೆ.)

ಬಂಟು : ಅಕೋ, ಸೈರನ್.

ಕೇಳು : ಓ, ಎಷ್ಟು ಬೇಗ ಹೊತ್ತಾಗಿ ಹೋಯ್ತು ಇವತ್ತು.

ಚೆನ್ನ : ನಡೀರಿ, ಹೋಗೋಣ. ಹೊತ್ತಾಗುತ್ತೆ.

ಎಲ್ಲರೂ : ಹೌದು, ನಡೀರಿ ನಡೀರಿ.

ಕಾಮು : ಮತ್ತೆ ನಾಳೆ ಬರೋಣ.

(ಹುಡುಗರು ಹೊರಡಲು ತಯಾರಾಗುತ್ತಾರೆ. ರಾಕ್ಷಸ ಏನು ಮಾಡಲಿಕ್ಕೆ ತೋಚದೆ ಮುಜುಗರದಿಂದ ನಿಲ್ಲುತ್ತಾನೆ. ಹನುಮ ಬೆರಗಾಗಿ ನಿಂತಿದ್ದಾನೆ.)

ಹುಡುಗರು : ಟಾಟಾ ಟಾಟಾ ಅಂಕಲ್ ಜಯಂಟ್ ಬೈ ಬೈ ಬೈ ಬೈ ಬೈ.....
ಟಾಟಾ ಟಾಟಾ ಹನ್ನೂ ಅಂಕಲ್ ಬೈ ಬೈ ಬೈ ಬೈ ಬೈ

(ಹುಡುಗರು ಓಡುತ್ತ ನಿಷ್ಕ್ರಮಿಸುತ್ತಾರೆ. ಹೋಗುತ್ತಿದ್ದಂತೆ ಅವರ ಕೂಗು: 'ಜಿಂದಾಬಾದ್ ಜಿಂದಾಬಾದ್! ಅಂಕಲ್ ಜಯಂಟ್ ಜಿಂದಾಬಾದ್, ಹನ್ನೂ ಅಂಕಲ್ ಜಿಂದಾಬಾದ್!'.....)

ರಾಕ್ಷಸ : (ಕೊಂಚಕಾಲ ಧಿಙ್ಮೂಢನಾಗಿದ್ದು ಆಮೇಲೆ ಗರ್ಜಿಸುತ್ತಾನೆ)

ಹನುಮ : ಕಳ್ಳ ಮುಂಡೇಗಂಡರಾ, ಹುಚ್ಚು ಮುಂಡೇಗಂಡರಾ, ನಾಯಿ ಮುಂಡೇಗಂಡರಾ.... ನಿಮ್ಮ ಬಲೀ ಹಾಕಿಬಿಡ್ತೇವೆ, ನಿಮ್ಮ ತಿಥೀ ಮಾಡಿಬಿಡ್ತೇವೆ– ಅಂತಿದಾರೆ ದಣಿಗಳು, (ಹುಡುಗರಿಗೆ) (ರಾಕ್ಷಸನಿಗೆ) ಹೌದು ದಣಿಗಳೇ, ಕಳ್ಳ ಮುಂಡೇಗಂಡರು, ಬಲೀ ಹಾಕಿ ಬಿಡ್ಬೇಕು.

ರಾಕ್ಷಸ : (ಗರ್ಜನೆ)

ಹನುಮ : ಮತ್ತೂ ಮತ್ತೂ ರೋಷ ಉಕ್ಕತಾ ಇದೆ – ಅಂತಿದಾರೆ. (ಚಂಡೆವಾದಕನಿಗೆ) ಏಯ್, ಚಂಡೆ ಅಬ್ಬರ ಹೊಡಿ.

ರಾಕ್ಷಸ : (ಗರ್ಜನೆ)

ಹನುಮ : ಒಂದೊಂದು ಪಿಳ್ಳೇನೂ ಹಿಡಿದು ಕೋಳೀ ಮರಿ ಹಾಗೆ ಬಾಯಲ್ಲಿ ಹಾಕಿ ಜಗಿದು ಬಿಡತಿದ್ದೆ–ಅಂತಾರೆ. (ರಾಕ್ಷಸನಿಗೆ) ಹೌದು, ದಣಿಗಳೇ, ಕಚಕಚ ಜಗಿದು ಬಿಡಬೇಕಿತ್ತು.

ರಾಕ್ಷಸ : (ಗರ್ಜನೆ)

ಹನುಮ : ಅಲ್ಲಿ ಆಫ್ರಿಕಾದಲ್ಲಿ ತಿಮಿಂಗಿಲದ ಔತಣ ಮಾಡಿಸಿದ್ದರಲ್ಲಾ ಆವಾಗ ಎಲುಬು ಸಿಕ್ಕಿ ದಂತ ಜಕಂ ಆಗಿ ಹೋಗಿದೆಯಂತೆ. ಇಲ್ಲದಿದ್ರೆ ಜಗಿದೇ ಬಿಡುತಿದ್ರಂತೆ. (ರಾಕ್ಷಸನಿಗೆ) ಹೌದು, ಮಹಾಸ್ವಾಮಿ, ಇಲ್ಲದಿದ್ರೆ, ರಸದಾಳೀ ಕಬ್ಬು ಜಗಿದ ಹಾಗೆ ಜಗಿದೇ ಬಿಡಬೋದಿತ್ತು.

ರಾಕ್ಷಸ : (ಗರ್ಜನೆ)

ಹನುಮ : ನಮ್ಮ ಅಜ್ಜಂದಿರ ಕಾಲದಲ್ಲಿ ಕುಬೇರ ದೇವರು ನಮಗೆ ಉಂಬಳಿ ಹಾಕಿಕೊಟ್ಟ ನೆಲ ಇದು. ಇದೇನು ಅವರ ಅಪ್ಪನ ಮನೆ ಆಸ್ತೀನಾ–ಅಂತಿದಾರೆ. (ರಾಕ್ಷಸನಿಗೆ) ಅದೇ ಮಾಸ್ವಾಮಿ, ಇವರ ಅಪ್ಪನ ಮನೆ ಆಸ್ತೀನಾ?

ರಾಕ್ಷಸ : (ಗರ್ಜನೆ)

ಹನುಮ : ಅ ಲಾಲಾಲಾಲಾಲಾ! ಈ ನನ್ನಂಥಾ ಪರಾಕ್ರಮಿ, ದೈತ್ಯ ಕುಲತಿಲಕ ಅನ್ನೋ ಅಂಥವನ ಅರಮನೇಗೆ ತೋಟಕ್ಕೆ ಈ ಮನುಷ್ಯ ಕುನ್ನಿಗಳು ಬಂದು ಲಗ್ಗೇ ಹಾಕುವುದೇ. ಸಹಿಸಲು ಆಗಲಿಕ್ಕಿಲ್ಲವಯ್ಯಾ, ಆಗಲಿಕ್ಕಿಲ್ಲ – ಅಂತಿದಾರೆ, (ರಾಕ್ಷಸನಿಗೆ) ನಿಜಕ್ಕೂ ಆಗಲಿಕ್ಕಿಲ್ಲ ಪ್ರಭುಗಳೇ.

ರಾಕ್ಷಸ : (ಗರ್ಜನೆ)

ಹನುಮ : ಇಲ್ಲಿ ಸುತ್ತ, ಆರಾಳು ಎತ್ತರದ ಕೋಟೆ ಹಾಕಿಸಿಬಿಡು. ನರಕುನ್ನಿಗಳು ಇಲ್ಲಿ ಕಣ್ಣು ಹಾಯಿಸಲಿಕ್ಕಿಲ್ಲ; ನಮ್ಮ ಪರಮ ಮಿತ್ರರೇ ಉಮುಂಬಾಸುರರು ಅರಮನೆ ಕೋಟೆ ಉಂಟಲ್ಲವೋ ಅದೇ ಪ್ರಕಾರದಲ್ಲಿ – ಅಂತಿದಾರೆ. (ರಾಕ್ಷಸನಿಗೆ) ಅಪ್ಪಣೆ ಮಹಾಸ್ವಾಮಿ.

ರಾಕ್ಷಸ : (ಗರ್ಜನೆ)

ಹನುಮ : ಬೆಳಗಾಗೋದರೊಳಗೆ ಕೋಟೆ ತಯಾರಾಗಿ ಬಿಡ್ಬೇಕ್ ಅಂತಿದಾರೆ.... ನಮಗೆ ಒಳ್ಳೇ ಗಳಪಾಶಿ ಬಂತಲ್ಲಯ್ಯಾ.... ಮಕ್ಕಳನ್ನ ಸುತ್ತಿ ಮನುಷ್ಯರನ್ನ ಸುತ್ತಿ ನಮ್ಮ ಬುಡಕ್ಕೆ ಬಂತಲ್ಲವೋ.....ಆಕ್ಕಂಬ್ಕ್ ಆಗ, ಎಂಬ್ಬೆ ಎಡಿಯ....

ರಾಕ್ಷಸ : (ಗರ್ಜನೆ)

ಹನುಮ : ಮತ್ತೂ ಮತ್ತೂ ಕ್ರೋಧ ಉಕ್ಕತಾನೇ ಇದೆಯಂತೆ. (ಚಂಡೆಯವನಿಗೆ) ಏಯ್, ಜೋಡು ತಾಳದ ಅಬ್ಬರ ಹೊಡಿ,

(ರಾಕ್ಷಸ ಅಬ್ಬರಿಸುತ್ತ ಅರಮನೆ ಕಡೆ ಹೊರಡುತ್ತಾನೆ.)

ಹನುಮ : (ರಾಕ್ಷಸನಿಗೆ) ಹುಷಾರು ಮಾಸ್ವಾಮಿ, ಕ್ರೋಧದಲ್ಲಿ ಕಾಲು ಎಪರಾ ತಪರಾ ಆಗಿ ಮುಗ್ಗರಿಸಿದರೆ ಕಷ್ಟ.

(ರಾಕ್ಷಸನ ನಿರ್ಗಮನ.)

ಹನುಮ : ಇವರಿಗೆ ಕ್ರೋಧ ಸಮನೆ, ಆದರೆ ನಾವು ಹೇಗಯ್ಯಾ ಬೆಳಗಾಗೋದರೊಳಗೆ ಆರಾಳು ಎತ್ತರದ ಕೋಟೆ ಕಟ್ಟಿಸಿ ನಿಲ್ಲಿಸುವುದು?.....
ನೋಡುವ, ಅಲ್ಲಿ ಎಂಥದೋ ಕಾಲನಿ ಉಂಟಲ್ಲ, ಅಲ್ಲಿ ಹೋಗಿ ನೋಡುವ ಜನ ಸಿಕ್ಕಿಯಾರೋ ಅಂತ.

(ಮತ್ತೆ ರಾಕ್ಷಸನ ಪ್ರವೇಶ)

ರಾಕ್ಷಸ : ಹ್ಹಾ ಹ್ಹಾ ಹ್ಹಾ ಹ್ಹಾ ಹ್ಹಾ

ಹನುಮ : ಮತ್ತೆ ಉಕ್ಕಿತಾ ಮಾಸ್ವಾಮಿ....?

ರಾಕ್ಷಸ : ಹಾ ಹಾ ಹಾ ಹಾ! (ಗರ್ಜನೆ)

ಹನುಮ : ಓ, ಆಶ್ಚರ್ಯವಾಯಿತಯ್ಯಾ ಆಶ್ಚರ್ಯವಾಯಿತಯ್ಯಾ ಅಂತಿದಾರೆ.... (ರಾಕ್ಷಸನಿಗೆ) ಓ ಹೌದಾ?

ರಾಕ್ಷಸ : (ಗರ್ಜನೆ)

ಹನುಮ : ಈ ಇಂಥಾ ಗ್ರೀಷ್ಮ ಋತುವಿನಲ್ಲಿ, ಮನೋಹರವಾಗಿರತಕ್ಕಂಥಾ ತಂಗಾಳಿಯೇ ಬೀಸಲಿಕ್ಕೆ ತೊಡಗಿತಲ್ಲಾ – ಅಂತ ಉದ್ದಕ್ಕೆ ಉದ್ಗಾರ ಎಳೀತಿದಾರೆ. (ರಾಕ್ಷಸನಿಗೆ) ಅಹುದಲ್ಲವೋ ದಣಿಗಳೆ. ನಿಮಗೂ ಕೋಪ ಉಕ್ಕುತ್ತಿತ್ತು. ನನಗೂ ಉಕ್ಕುತ್ತಿತ್ತು. ಹಾಗಾಗಿ ಇಬ್ಬರೂ ಮೊದಲು ಗ್ರಹಿಸಲೇ ಇಲ್ಲ!

ರಾಕ್ಷಸ : (ಗರ್ಜನೆ)

ಹನುಮ : ಪರಿಮಳ ಪರಿಮಳ – ಅಂತ ಬಿಕ್ಕತಿದಾರೆ. (ರಾಕ್ಷಸನಿಗೆ) ಕಾಶ್ಮೀರ ದೇಶ ಉಂಟಲ್ಲವೋ ದಣಿಗಳೆ, ಹಾಗೆ ಆಗಿಬಿಟ್ಟಿದೆ – ಅದೇ ತಂಪು, ಅದೇ ಕಂಪು, ಅದೇ ಸೊಂಪು, ಅದೇ ಪೆಂಪು, ಅದೇ ಇಂಪು–ಎಲ್ಲಾ ಗುಂಪು ಗುಂಪು.

ರಾಕ್ಷಸ : (ಗಿಡ ಮರ ನೆಲ ನೋಡಿ – ಗರ್ಜನೆ)

ಹನುಮ : ಗಿಡದ ಮ್ಯಾಲಕ್ಕೆ ಹೂವು. ಇದೇನು ಹಸಿರಯ್ಯಾ ಇದೇನು ಬಣ್ಣವಯ್ಯಾ – ಅಂತಿದಾರೆ.

(ರಾಕ್ಷಸನಿಗೆ) ಅದೇ, ವರ್ಣನೆ ಮಾಡಿದೆನಲ್ಲಾ ಮಾಸ್ವಾಮಿ–

ರಾಕ್ಷಸ : ಆ ಹ್ಹಾ ಹ್ಹಾ ಹ್ಹಾ ಹ್ಹಾ ಹ್ಹಾ.....

ಹನುಮ : ಏನು ಹೇಳಿದರೋ ಗೊತ್ತಾಗಲಿಲ್ಲ. ನೆಲದ ಮೇಲೆ ಬಿದ್ದು ಹೊರಳಾಡಬೇಕು, ಅನ್ನಿಸ್ತಿದೆಯಯ್ಯಾ, ಹಂದಿಯ ಹಾಗೆ ಅಂದಿರಬೋದು ಬಿಡಿ.

(ರಾಕ್ಷಸ – 'ಹ್ಹಾ ಹ್ಹಾ'.... ಎಂದುಕೊಳ್ಳುತ್ತಾ ಅರಮನೆಯ ಕಡೆ ನಡೆಯುತ್ತಾನೆ.)

ಹನುಮ : ಪರಮಾನಂದವಾಗಿಬಿಟ್ಟಿದೆ ಸವಾರಿಗೆ! ಆಫ್ರಿಕಾ ದೇಶದಲ್ಲಿ "ಮಂಗಾ ಮೂಲಂಗಿ" ಅಂತ ಒಂದು ಥರಾ ಹೆಂಡ ಸಿಗತಿತ್ತು. ಅದು ಕುಡಿದಾಗ ಹಾಗೇ ಆಗತಿತ್ತು..... ಹೋಯ್, ಸವಾರಿ ಆನಂದ ಪಡ್ತದೆ ಅಂತ ನಾವು ಆನಂದ ಪಡಲಿಕ್ಕೆ ವೇಳೆ ಉಂಟೋ? ಇಲ್ಲವಯ್ಯ. ನಾವಿನ್ನು ರಾತ್ರೋ ರಾತ್ರಿ ಕೋಟೆಗೋಡೆ ಕಟ್ಟಿ ನಿಲ್ಲಿಸ ಬೇಕಲ್ಲ.... ಇಲ್ಲದಿದ್ರೆ ಅವರ ಸಿಟ್ಟು ಎಂಥಾದ್ದಂಥ ನಿಮಗೆ ತಿಳೀಲಿಕ್ಕಿಲ್ಲ– ನಾಳೆ ನನ್ನನ್ನ ತಲೆಕೆಳಗು ಮಾಡಿ ಮರಕ್ಕೆ ನೇತುಹಾಕಿ ಮೆಣಸಿನಕಾಯಿ ಹೊಗೆ ಹಾಕಿಸಿ ಯಾರು; ತಾವು ದೂರಕ್ಕೇ ನಿಂತು ಹೀಗೇ ಹ ಹ್ಹ ಹ್ಹಾ ಅಂತ ಬಾಯಿ ಕಿಸೀತಾ, ಚೂಪುಗಲ್ಲು ಹೆರಕಿ ಕವಣೇಲಿ ಇಟ್ಟು ಬೀಸಿ ಬಡಿದಾರು....

(ಎನ್ನುತ್ತ ನಿಷ್ಕ್ರಮಿಸುತ್ತಾನೆ.)

* * *

(ಕತ್ತಲು–ದೊಂದಿ ಬೆಳಕಿನಲ್ಲಿ ಅಸಂಖ್ಯ ಜನ ಕೋಟೆ ಕಟ್ಟುತ್ತಿರುವುದು. ಕೆಲಸಗಾರರ ಗದ್ದಲ ಕೂಗು – ಐಸಾ ಐಸಾ....ಚಂಡೀ ದೆವ್ವ ಐಸಾ.....ಗುಂಡೀ ಭೂತ ಐಸಾ..... ಚಾಮುಂಡಮ್ಮ ಐಸಾ.....ಗಾವುಂಡಪ್ಪ ಐಸಾ.....' ಇತ್ಯಾದಿ ಇತ್ಯಾದಿ–)

(ಮತ್ತೆ ಪೂರ್ತಾ ಕತ್ತಲು. ಪುನಃ ಮಸಕು ಬೆಳಕಾದಾಗ ಹನುಮನಾಯಕನ ಪ್ರವೇಶ–ಈಗ ಕೋಟೆ ಗೋಡೆ ಕಾಣಿಸುತ್ತಿದೆ.)

ಹನುಮ : ಕಂಡೀರೇನಯ್ಯಾ ನಮ್ಮ ಪರಾಕ್ರಮ! ರಾತ್ರಿ ಬೆಳಗಾಗೋದರೊಳಗೆ ಸುತ್ತಾ ಆರಾಳೆತ್ತರ ಕೋಟೆ ಕಟ್ಟಿಸಿ ಬಿಟ್ಟೆವಲ್ಲ!.....ಬಿಜ ಹೇಳೋದಾದ್ರೆ ನನಗೂ ಹೆದರಿಕೆ ಆಗಿತ್ತು ಮಾರಾಯರೇ ಈ ರಾಕ್ಷಸರ ಸಹವಾಸ ನೋಡಿ. ಆಮೇಲೆ ಮೈಯಲ್ಲಿ ಎಲುಬು ಉಳೀಲಿಕ್ಕೆ ಉಂಟಾ? ಪುಣ್ಯ. ಆ ಕಾಲನಿ ಉಂಟಲ್ಲಯ್ಯ, ಅಲ್ಲಿಗೆ ಹೋದೆ. ಅಲ್ಲಿ ಒಬ್ಬ ಕಂತ್ರಾಟ್ ಕಂತ್ರಾಟ್ ಅಂತ ಇದ್ದ. ಸರ್ಕಾರಿ ಕಂತ್ರಾಟನಂತೆ. ಯಾವ ಕೆಲಸವಾಗಲಿ, ಎಂಥಾ ಕೆಲಸವಾಗಲಿ, ಅವನು ರಾತ್ರಿ ಬೆಳಗಾಗೋದ್ರೊಳಗೇ ಮಾಡುವವನಂತೆ, ಬೆಳಗಾಗೋದ್ರೊಳಗೆ ಕೆಲಸಾ ಮುಗಿಸಿ, ಹಣ ಎಣಿಸ್ಕೊಂಡ್ ಧಿಮ್‌ದಗಡಿ ಅಂತ ನಡೆದೇಬಿಟ್ಟ. ಈಗ ಹುಡುಗರು ಅಲ್ಲ ಹುಳಾ ಬರಲಿಕ್ಕಿಲ್ಲ. ನಾನೇ ಬರಲಿಕ್ಕಿಲ್ಲ ಮತ್ತೆ ಕೇಳಿದರೆ.... ಒಂದು ಸುರಂಗಮಾರ್ಗ ಉಂಟು ಅನ್ನಿ ನಮ್ಮ ಮಟ್ಟಿಗೆ....ಹೋಯ್, ಆ ಕಂತ್ರಾಟ್ ಹೋಗಿ ಇಷ್ಟು ಹೊತ್ತಾದ್ರು ಬೆಳಗೇ ಆಗಲಿಲ್ಲಲ್ಲ....ಯಾಕೆ ಅಂತೇನೆ.....(ಒಳಗಿನಿಂದ ಕೂಗು) ಸವ್ವಾರಿ ದಂದಿ ಹಿಡಿದು ಕೂಗು ಹಾಕ್ತಾ ಬಂದೇ ಬಿಡ್ತಲ್ಲ. ಇತ್ಲಾಗಿ.....

(ರಾಕ್ಷಸ ದೊಂದಿ ಹಿಡಿದು ಪ್ರವೇಶಿಸುತ್ತಾನೆ.....)

ರಾಕ್ಷಸ : (ಗರ್ಜನೆ)

ಹನುಮ : ಸಂತೋಷವಾಯ್ತಂತೆ ಕೋಟೆ ತಯಾರಾದ್ದಕ್ಕೆ. (ರಾಕ್ಷಸನಿಗೆ) ನಾನು ಅಲ್ಲವೋ ಪ್ರಭುಗಳೇ ತಮ್ಮ ತೈನಾತಿ? ನೆರವೇರಿಸಿಯೇ ಬಿಟ್ಟೆ. ಹಾಗಂತ ಅಲ್ಪ ಸ್ವಲ್ಪ ಕಷ್ಟವಾಯಿತಾ?.....

ರಾಕ್ಷಸ : (ಗರ್ಜನೆ)

ಹನುಮ : ಹೋಯ್, ಅಷ್ಟುದ್ದಾ ನಾಲಗೆಯುಂಟು, ಶಾಭಾಸ್ ಹೇಳಲಿಕ್ಕೆ ಬಾಯಿ ಬರಲಿಲ್ಲ ನೋಡಿ.... ಹಾಸಿಗೇಲಿ ಹತ್ತು ಸಲ ಆಚೆಯೀಚೆ ಹೊರಳಿದರಂತೆ, ಅರುಣೋದಯ ವಾಗಲಿಲ್ಲ ಯಾಕೆ, ಸೂರ್ಯೋದಯವಾಗಲಿಲ್ಲ ಯಾಕೆ – ಅಂತ ಕೇಳತಿದಾರೆ.....ನಂಗೂ ಇವತ್ತು ಸಿಕ್ಕಲಿಲ್ಲಪ್ಪ ಸೂರ್ಯ..... (ರಾಕ್ಷಸನಿಗೆ) ಹೊರಗೆ ಹೋಗಿ ನೋಡಿ ಬರ್ತೇನೆ, ದಣಿಗಳೇ.

(ಹನುಮ–ಹೊರ ಹೋಗಿ ಆಮೇಲೆ ವಾಪಸು ಬರುತ್ತಾನೆ.)

ಹನುಮ : (ರಾಕ್ಷಸನಿಗೆ) ನಮಗಿಬ್ಬರಿಗೂ ಅಕ್ಕಲ್ ಹೋಗಿಬಿಡ್ತಲ್ಲ ದಣಿಗಳೇ!.....ಆರಾಳೆತ್ತರ ಕೋಟೆ

ಅಲ್ಲವೋ? ಸೂರ್ಯೋದಯ ಆಗಿ ನಾಲ್ಕು ತಾಸು ಆಯ್ತು. ಅದರ ಬೆಳಕು ಒಳಗೆ ಬರೋದು ಹ್ಯಾಗೆ?.....ಹೊರಗೆ ಕೋಟೆ ಮೇಲೆ ಬಿದ್ಕಂಡು ಕಾಯ್ತಿದೆ!

ರಾಕ್ಷಸ : (ಗರ್ಜನೆ)

ಹನುಮ : ಹಾಗೋ, ಹಾಗೋ, ಸಂತೋಷ – ಅಂತಿದಾರೆ.

ರಾಕ್ಷಸ : (ಗರ್ಜನೆ)

ಹನುಮ : ಭಾರೀ ತಾಪವಯ್ಯಾ–ಅಂತಿದಾರೆ. (ರಾಕ್ಷಸನಿಗೆ) ನೆನ್ನೆ ಭಾರೀ ಕೋಪ ಬಂದಿತ್ತಲ್ಲ ಧಣಿಗಳೇ, ಅದರದ್ದೇ ಇದ್ದೀತು ತಾಪ.

ರಾಕ್ಷಸ : (ಗರ್ಜನೆ)

ಹನುಮ : ತಡೀಲಿಕ್ಕಾಗದ ನಾತ–ಅಂತಿದಾರೆ. ನೀವೇ ಇದ್ದೀರಲ್ಲ ನಮಗೆಲ್ಲಾ ಪ್ರಾಣನಾಥ! (ರಾಕ್ಷಸನಿಗೆ) ಹೊಸದಾಗಿ ಗೋಡೆ ಕಟ್ಟಿದ್ದಲ್ಲವೋ ಪ್ರಭುಗಳೇ, ಗಾರೆಗಚ್ಚಿನ ನಾತ ಇದ್ದೀತು.

(ರಾಕ್ಷಸ ಗರ್ಜಿಸುತ್ತ ತೆರಳುತ್ತಾನೆ.)

ಹನುಮ : ಇದ್ದೀತಿದ್ದೀತು – ಅಂತಿದಾರೆ!......ಹೌದಯ್ಯಾ.....ಇಷ್ಟೆತ್ತರ ಗೋಡೆ ಕಟ್ಟಿ ಈ ಗೋಡೆ ಬಾವಿಯಲ್ಲಿ ವಸ್ತಿ ಮಾಡಲಿಕ್ಕೆ ಆದೀತಾ?.....

(ರಾಕ್ಷಸ ಮತ್ತೆ ಬರುತ್ತಾನೆ.)

ರಾಕ್ಷಸ : (ಗರ್ಜನೆ)

ಹನುಮ : ಅಲೆ, ಹೌದಾ ಪ್ರಭುಗಳೇ!..... ಇವರು ಹೋಗುತ್ತಿದ್ದಾಗ ದಾರಿ ಮೇಲೆ, ಹಕ್ಕಿಗಳು ಕಂಕಲ ಕಂಕಲ ಅಂತ ಚೀರ್ತಾ ಬಿದ್ದು ಸಾಯ್ತಿವೆಯಂತೆ.....(ತಾನೂ ಕಿವಿಗೊಟ್ಟು – ರಾಕ್ಷಸನಿಗೆ) ದಣಿ, ಅಕೋ ಮತ್ತೂ ಚೀರ್ತಾನೇ ಇವೆ. (ಪ್ರೇಕ್ಷಕರಿಗೆ) ನಾನೂ ಜತೇಲಿ ಬರಬೇಕಂತೆ. ಸತ್ತು ಬಿದ್ದ ಹಕ್ಕಿಗಳನ್ನು ಚೀಲಕ್ಕೆ ತುಂಬಿಕೊಳ್ಳೋಕೆ! (ರಾಕ್ಷಸನಿಗೆ) ನಡೀರಿ! ಧಣಿ.

(ಇಬ್ಬರೂ ನಿಷ್ಕ್ರಮಿಸುತ್ತಾರೆ.)

* * *

(ಹನುಮ–ಈಗ ಪ್ರೇಕ್ಷಾಂಗಣದಲ್ಲಿ ಹೊರಭಾಗದಿಂದ ಬರುತ್ತಾನೆ.)

ಹನುಮ : ಹೋಯ್, ಹ್ಯಾಗಾಯಿತು ಕಂಡಿರಾ? ಸಿಟ್ಟು ಮಾಡಿದ್ದು ಹುಡುಗರ ಮ್ಯಾಲೇ....ಶಿಕ್ಷೆ ಕೊಟ್ಟುಕೊಂಡದ್ದು ತನ್ನ ಮ್ಯಾಲೇ....ಎರಡು ತಿಂಗಳಾಯಿತಲ್ಲ ಈ ಕೋಟೆ ಕಟ್ಟಿ ದಿನ ಇಡೀ ಕತ್ತಲು, ಗಾಳಿ ಹೋಗಲಿಕ್ಕಿಲ್ಲ, ಯಾವಾಗ ನೋಡಿದರೂ ತಾಪ! ಮತ್ತೆ ಅದೆಂಥದೋ ದುರ್ನಾತ, ಮಾರಾಯರೆ!....ಗಿಡ ಮರ ಎಲ್ಲ ಎಲೆ ಉದುರಿ

ಬಕ್ಕಲು ಬರಲು ನಿಂತವು. ಹಕ್ಕಿ ಸತ್ತು ಬಿದ್ದವು. ಅವೂ ಈಗ ಇಲ್ಲಿ ಸುಳಿಯೋದೇ ಇಲ್ಲ.....ಈ ರಾಕ್ಷಸರೇ ಹಾಗೆ– ಕಾಲು ಮೆಟ್ಟಿದ್ದೂ ತಿಳೀದು ಕೈ ಹಿಡಿದದ್ದೂ ತಿಳೀದು. ಸಿಟ್ಟು ಅಂದ್ರೆ ಸಿಟ್ಟು, ಹಠ ಅಂದ್ರೆ ಹಠ.....

(ಮುಂದೆ ಹನುಮನಾಯಕ ಹೇಳುತ್ತ ಹೋಗುವಂತೆ ಅದೇ ರೀತಿ ಹುಡುಗರ ಮೂಕಾಭಿನಯ ಕಾಣಿಸುತ್ತದೆ.)

ಆ ಹುಡುಗರು ಪಾಪ, ದಿನಾ ಬಂದು ಆಡಿಕೋತಿದ್ದವು. ಇವರ ನೆಲಾ ತಿನ್ನತಿದ್ದವಾ?.... ಆಮೇಲೂ ದಿನಾ ಬರತಿದ್ದವು ಮಾರಾಯ್ರೆ. ಕೋಟೆ ಗೋಡೆ ಮುಟ್ಟಿ ನೋಡಿದವು. ತಟ್ಟಿ ನೋಡಿದವು, ಕುಟ್ಟಿ ನೋಡಿದವು; ಒತ್ತಲಿಕ್ಕೆ ನೋಡಿದವು, ಎತ್ತಲಿಕ್ಕೆ ನೋಡಿದವು, ಅದನ್ನೇ ಹತ್ಲೀಕ್ಕೂ ನೋಡಿದವು. ಆಗಲಿಕ್ಕಿಲ್ಲ ಅಂತ ಕಂಡಮೇಲೆ ಬಿಟ್ಟವು.... ಹಾಗಂತ ಈಗಲೂ ದಿನಬಿಟ್ಟು ದಿನವಾದರೂ ಬರದೆ ಇರಲಿಕ್ಕಿಲ್ಲ. ಬರ್ತವೆ, ಅಲ್ಲೇ ನಿಂತು ಕೋಟೆಗೋಡೆ ನೋಡ್ತವೆ, ಆಮ್ಯಾಲೆ ಹಿಂದಕ್ಕೆ ಹೋಗ್ತವೆ.....ಓಯ್, ಹಾಗಂತ ಈ ನಮ್ಮ ದಣಿಗಳಿಗೂ ಸಾಕಷ್ಟು ಆಯ್ತಲ್ಲ... ಈ ಕೋಟೆಗೋಡೆ ಒಳಗೆ, ಕಬ್ಬಿಣದ ಮೂಸೇಲಿ ಹೆಗ್ಗಣ ಹಾಕಿಟ್ಟ ಹಾಗೆ ಆಗಿದಾರೆ.... ಈಗೀಗ ದೇಹಕ್ಕೂ ಸೌಖ್ಯವಿಲ್ಲ.....ನಾನು ಮಾತ್ರ, ದಿನಕ್ಕೆ ತಿಂದು, ಬೆಳಕು ಕುಡಿದು ಹೋಗದಿದ್ದರೆ ನನಗೆ ಆಗಲಿಕ್ಕಿಲ್ಲಪ್ಪ.....ಬಂದು ಬಿಟ್ಟೆ.....

(ಒಳಗಿನಿಂದ ರಾಕ್ಷಸನ ಕೂಗು.)

ಹನುಮ : ಓ ಶುರುವಾಯ್ತಲ್ಲ ಅಬ್ಬರ ಹಾಕೋಕೆ.... ಓ ಬಂದೆ, ದಣಿಗಳೆ.

(ರಂಗಕ್ಕೆ ಹೋಗುತ್ತಾನೆ. ಅಷ್ಟರಲ್ಲಿ ರಾಕ್ಷಸ ಸೋತ ಹೆಜ್ಜೆಯಲ್ಲಿ ಪ್ರವೇಶಿಸುತ್ತಾನೆ.)

ರಾಕ್ಷಸ : (ದಣಿದ ಗರ್ಜನೆ)

ಹನುಮ : ಆಗಲಿ ದಣಿಗಳೆ. ಅಪ್ಪಣೆ ದಣಿಗಳೆ.... ಕೈ ಹಿಡಿಕೋಬೇಕಾ? (ಅವನ ಕೈ ಹಿಡಿದು ಅರಮನೆ ಕಡೆಗೆ ನಡೆಸುತ್ತ) ನಡೀರಿ, ದಣೀ. ಮೆಲ್ಲ, ಮೆಲ್ಲ, ಜ್ವಾಕೆ... (ಅವನನ್ನು ಒಳಕ್ಕೆ ಕಳಿಸಿ ಪುನಃ ತಾನು ಹೊರಬಂದು) ದೇಹದಲ್ಲಿ ಸೌಖ್ಯವಿಲ್ಲವಂತೆ. ಏನೇನೂ ಸೌಖ್ಯ ವಿಲ್ಲವಂತೆ.... ಅದೇನೋ ಅರಮನೆ ಒಳಗೇ ಲಂಘನ ಚಿಕಿತ್ಸೆ ಮಾಡಿಕೋತಾರಂತೆ. ಹದಿನೈದು ದಿನ ಕಟ್ಟೇಕಾಂತದಲ್ಲಿ ಇರುತ್ತೇವೆ, ಯಾರನ್ನೂ ಬಿಡಲಿಕ್ಕಿಲ್ಲ, ಒಂದು ಹುಳವನ್ನೂ ಕೂಡ ಬಿಡಲಿಕ್ಕಿಲ್ಲ. ನೀನೂ ಕೂಡ ಪ್ರವೇಶ ಮಾಡಲಿಕ್ಕಿಲ್ಲ – ಹುಶಾರ್ ಅಂದರು. (ಹೊರಗೆ ನೋಡಿ) ಅರೆ, ಅದೇನದು, ಬೆಳಕು ಬರತಾ ಉಂಟಲ್ಲ! (ಹೋಗಿ ನೋಡಿ ಬಂದು) ಹೋಯ್, ಇದೇನಯ್ಯಾ ಬಂತು ನಮಗೆ ಗ್ರಹಚಾರ.... ಅವತ್ತು ಆ ಕಂತ್ರಾಟನ ಕೆಲಸ ನೋಡಿದಾಗಲೇ, ಅನುಮಾನ ಬಂತಯ್ಯಾ ನಮಗೆ, ಹಾಗೇ ಆಗಿಬಿಡ್ತಲ್ಲ..... ಸುಮಾರು ದೊಡ್ಡದೇ ಉಂಟು ಬಿರುಕು. (ಮತ್ತೆ ಹೋಗಿ ನೋಡಿ ವಾಪಸು ಬಂದು) ಹೋಯ್, ಈ ಕೈ ಹೀಗೆ ಹೋಗಬಹುದಯ್ಯಾ

ತೂರಿಸಿದರೆ., ಅಷ್ಟು ದೊಡ್ಡ ಬಿರುಕು! (ಮತ್ತೆ ಹೋಗಿ ನೋಡಿ ಬಂದು) ಹೋಯ್, ಆ ಮಕ್ಕಳೆಲ್ಲಾ ಬಂದು ನಿಂತುಬಿಟ್ಟಿವೆ ಅಲ್ಲಿ ಹೊರಗೆ. ಬಿರುಕಿನಲ್ಲಿ ಕಾಣಿಸಿತಯ್ಯಾ, ಮತ್ತೆ ಅವಕ್ಕೆ ನನ್ನ ಮುಖ ಕಂಡುಬಿಟ್ಟೀತು ಅಂತ ಬಂದುಬಿಟ್ಟೆ....(ಸದ್ದು, ನೋಡಿ) ಅಲಲೆ! ಒಂದು ತುಂಡು ಕಳಚಿಯೇ ಬಿಟ್ಟಿತಲ್ಲ.... ಹೋಯ್, ಇದು ಗಳಪಾಶಿಯೆ.... ಈಗ ಏನು ಮಾಡೋದು? ಇದು ನಮ್ಮ ಕುತ್ತಿಗೆಗೆ ಬಂತು, ಸುಮ್ಮನೆ ಉಳಿಯೋದಲ್ಲ. ಹೋಗಿ, ಅಲ್ಲಿ ಆ ಕಡೆಯಲ್ಲಿ ಇರುವ ಒಂದು ಚಪ್ಪಡಿಯನ್ನಾದರೂ ತಂದು ಮುಚ್ಚತೇನೆ.... ಯಮರಾಮಾಯಣ ಮಾರಾಯ್ರೆ, ನಮಗೆ ಧರ್ಮಸಂಕಟ.....

(ಹನುಮ ಹೋಗುತ್ತಾನೆ. ಜೇನಿ ಪ್ರವೇಶಿಸುತ್ತಾಳೆ. 'ಅಂಕಲ್ ಅಂಕಲ್, ಜಯಂಟ್ ಮಾಮಾ' ಎಂದು ಮೆಲು ದನಿಯಲ್ಲಿ ಕರೆಯುತ್ತ ಹಗುರವಾಗಿ ಚಲಿಸುತ್ತಾಳೆ. ಹುಡುಗರೆಲ್ಲ ಮೆಲುಹೆಜ್ಜೆಯಲ್ಲಿ ಮೃದುವಾದ ಒಂದು ಧಾಟಿ ಗುನುಗುತ್ತ ಪ್ರವೇಶಿಸಿ ರಂಗದ ತುಂಬ ಚಲಿಸುತ್ತಾರೆ; ತೋಟವನ್ನು ಕೊಂಚ ಶೃಂಗರಿಸುತ್ತಾರೆ. ಅನಂತರ ಅರಮನೆ ಕಡೆ ನಡೆಯುತ್ತಾರೆ. ಆದಾದ ಮೇಲೆ ಚಪ್ಪಡಿ ಹೊತ್ತು ಹನುಮ ಪ್ರವೇಶಿಸುತ್ತಾನೆ. ಆತ ಪ್ರವೇಶಿಸುತ್ತಿದ್ದ ಹಾಗೇ ಭಾರಿ ಸದ್ದು; ಬೆಳಕು ಹರಿದು ಬರುತ್ತದೆ. ಹನುಮ ಆ ಕಡೆ ನೋಡುತ್ತ ಕೈಲಿದ್ದ ಚಪ್ಪಡಿಯನ್ನು ಧೊಪ್ಪೆಂದು ಕೆಡವಿಕೊಳ್ಳುತ್ತಾನೆ.)

ಹನುಮ : ಆಯ್ತಲ್ಲಯ್ಯ ಧೊಪ್....! ಈ ಕಡೆ ಕೋಟೆಗೋಡೆ ಇಡೀಗೆ ಇಡೀ ಅಪ್ಪಡಿ ಎಪ್ಪಡೀ ಕುಸಿದುಬಿಡ್ತಲ್ಲ. ಇನ್ನೂ ಈ ಚಪ್ಪಡಿ ತಗೊಂಡು ಏನು ಮಾಡೋದು.... (ಚಪ್ಪಡಿ ಮೇಲೆ ತಾನೆ ಕುಸಿದು ಕೂತು) ನಮ್ಮ ದಣಿಗಳು ಇದನ್ನು ಕಂಡರು ಅಂದರೆ, ಆ ಕ್ಷಣಕ್ಕೆ ನನ್ನ ತಪ್ಪಡಿ ತುಪ್ಪಡಿ.

(ಹನುಮ ಯೋಚಿಸುತ್ತ ಕೂತಿರಲು ಒಳಗಿಂದ ರಾಕ್ಷಸ ಮತ್ತು ಹುಡುಗರ ಪ್ರವೇಶ. ಎಲ್ಲರೂ ಹರ್ಷೋತ್ಸವವೆನ್ನುವಂತೆ ಆಡುತ್ತ ಕುಣಿಯುತ್ತ ಹಾಡುತ್ತ ಬರುತ್ತಾರೆ. ಹನುಮ ದಿಙ್ಮೂಢನಾಗಿ ನಿಲ್ಲುತ್ತಾನೆ.)

ಹುಡುಗರು : (ಹಾಡು) ಅಂಕಲ್ ದೈತ್ಯ ಅಂಬೆಗಾಲು । ಸುತ್ತಾ ಮುತ್ತಾ ಹೂವಿನ ಕೋಲು ।

ರಾಕ್ಷಸ : (ನಗು/ಹಾಡು) ಹಿ ಹ್ಹಿ ಹ್ಹೀ ಲಾಲಾ ಲೂಲು । ಹೆ ಹ್ಹೆ ಹ್ಹೇ ಲಾಲಾ ಲೂಲೂ ।

ಹುಡುಗರು : (ಹಾಡು) ದೈತ್ಯ ಮಾಮನ ದಂಡಿಗೆ ಸಾಲು ॥ ಸುತ್ತಾ ಮುತ್ತಾ ಹೂವಿನ ಕೋಲು॥

ರಾಕ್ಷಸ : (ನಗು/ಹಾಡಿ) ಹಿ ಹ್ಹಿ ಹ್ಹೀ ಲಾಲಾ ಲೂಲು ॥ ಹೆ ಹ್ಹೆ ಹ್ಹೇ ಲಾಲಾ ಲೂಲೂ।

(ರಾಕ್ಷಸ–ಪೆಚ್ಚಾಗಿ ನಿಂತ ಹನುಮನನ್ನು ನೋಡುತ್ತಾನೆ. ಅವನ ಹತ್ತಿರ ಹೋಗಿ ಖುಷಿಯಿಂದ)

ರಾಕ್ಷಸ : ಹಿ ಹ್ಹಿ ಹ್ಹಿ ಲಾಲಾ ಲೂಲು! ಹೆ ಹ್ಹೆ ಹ್ಹೆ ಲಾಲಾ ಲೂಲೂ ॥

ಹನುಮ : ಲಂಬಾ ಎಳೆದರೆ ಲಾಲಾ । ಕೊಂಬು ಕೊಟ್ಟರೆ ಲೂಲೂ ॥

(ಹುಡುಗರೆಲ್ಲ 'ಹನ್ನೂ ಅಂಕಲ್' ಎಂದು ಅವನನ್ನು ಸುತ್ತುವರಿಯುತ್ತಾರೆ. ಹನುಮ – ತನ್ನ ದಣಿಯ ಅಭಿಪ್ರಾಯ ತಿಳಿಯದೆ, ತಾನೂ ಹುಡುಗರ ಜೊತೆ ಸೇರುವುದು ಸರಿಯೋ ತಪ್ಪೋ ಎಂದು ಯೋಚಿಸಿ, ಕೊನೆಗೆ ಹುಡುಗರನ್ನು ಅಟ್ಟುತ್ತ ಹೋಗ್ತಾನೆ.)

ಬಂಟು : (ಹಾಡು) ಟ್ವಿಂಕಲ್ ಟ್ವಿಂಕಲ್ ಲಿಟ್ಲ್ ಸ್ಟಾರ್ । ಅಂಕಲ್ ಹನ್ಮೂ ಮೇಕ್ಸ್ ಎ ವಾರ್.
(ಹುಡುಗರೆಲ್ಲ ಆಟದ ಅಮಲಿನಲ್ಲಿರುವಾಗ – ಸೈರನ್ ಸದ್ದು.)

ಹುಡುಗರು : ಟಾಟಾ ಟಾಟಾ ಜಯಂಟ್ ಮಾಮಾ । ಬೈ ಬೈ ಬೈ ಬೈ ಬೈ.....
ಟಾಟಾ ಟಾಟಾ ಹನ್ಮೂ ಅಂಕಲ್ । ಬೈ ಬೈ ಬೈ ಬೈ ಬೈ.....

(ಎಂದು ಹಾಡಿಕೊಳ್ಳುತ್ತ, ಓಡುತ್ತ ನಿಷ್ಕ್ರಮಿಸುತ್ತಾರೆ.)

("ಲಂಬಾ ಎಳೆದರೆ ಲಾಲಾ ಕೊಂಬು ಎಳೆದರೆ ಲೂಲೂ".... ಅವರು ಹೋದ ಮೇಲೆ, ರಾಕ್ಷಸ ಹಿಹ್ಹಿಹ್ಹಿಹ್ಹಿ– ಎಂದು ಭಾರೀ ಖುಷಿಯಿಂದ ಸುತ್ತುತ್ತಾನೆ. ಹನುಮನ ಹತ್ತಿರ ಬಂದು ನಗುತ್ತಾನೆ. ಹನುಮನೂ ನಗುತ್ತಾನೆ. ಇಬ್ಬರೂ ನಗುತ್ತ ಕುಣಿಯುತ್ತ ಅದರಲ್ಲೇ ಸಂಭಾಷಣೆ ನಡೆಸುತ್ತಾರೆ. ಅನಂತರ ರಾಕ್ಷಸ, ಸುತ್ತ ಹೂವು ಅರಳಿರುವುದನ್ನು, ಹಕ್ಕಿ ಹಾಡುತ್ತಿರುವುದನ್ನು, ಬೆಳಕು ಗಾಳಿ ಒಳಕ್ಕೆ ತುಳುಕಿ ಬಂದಿರುವದನ್ನು, ತನ್ನ ದೇಹ ಸೌಖ್ಯಗೊಂಡಿರುವುದನ್ನು ಮುಂತಾಗಿ– 'ಹಿಹ್ಹಿಹ್ಹಿ ಲಾಲಾ ಲೂಲೂ' ಎಂದು ಹಾಡಿಕೊಳ್ಳುತ್ತ ಅಭಿನಯಿಸುತ್ತ ತೋರಿಸುತ್ತಾನೆ. ಆಮೇಲೆ ಅರಮನೆಗೆ ಹೋಗುತ್ತಾನೆ.)

ಹನುಮ : (ತಾನೂ) ಹಿ ಹ್ಹಿ ಹ್ಹಿ ಹ್ಹಿ ಲಾಲಾ ಲೂಲೂ.... ಭಯಂಕರ ಆನಂದವಾಗಿ ಬಿಟ್ಟಿದೆಯಯ್ಯಾ, ನಮ್ಮ ದಣಿಗಳಿಗೆ ಮರಣಾಂತರ ಆನಂದವಾಗಿ ಬಿಟ್ಟಿದೆ....ಒಂದು ಗಳಿಗೆಯಲ್ಲಿ ದೇಹಕ್ಕೆ ಎಂಥಾ ಸೌಖ್ಯ ಬಂದು ಬಿಟ್ಟಿತಯ್ಯಾ–ಅಂತಾರೆ!.....

(ರಾಕ್ಷಸ ಮತ್ತೆ ಬರುತ್ತಾನೆ.)

ರಾಕ್ಷಸ : ಹಿ ಹ್ಹಿ ಹ್ಹಿ ಲಾಲಾ ಹಿ ಹ್ಹಿ ಹ್ಹಿ ಲಾಲೂ....

(ಎನ್ನುತ್ತ ಅಭಿನಯಿಸಿ ತೋರಿಸುತ್ತಾನೆ.)

ಹನುಮ : ಅಪ್ಪಣೆ ದಣಿ. ತಾವು ಹೇಳಿದ ಹಾಗೆ–ಲಂಬಾ ಎಳೆದರೆ ಲಾಲಾ, ಕೊಂಬು ಕೊಟ್ಟರೆ ಲೂಲೂ.....

(ರಾಕ್ಷಸ ಹೋಗುತ್ತಾನೆ.)

ಹನುಮ : ಈ ಕೋಟೆಗೋಡೆ ಒಡೆಸಿ ನೆಲಸಮ ಮಾಡಿಬಿಡು ಅಂದರು....ನಾನೂ ಅದೇ ಕಾಯ್ತಿದ್ದೆ ಮಾರಾಯರೆ. ಆ ದರಿದ್ರ ಕಂತ್ರಾಟ್ ಗಳಪಾಶಿ ತಂದಿಟ್ಟಿದ್ದ. ಅಂತೂ ಪುಣ್ಯ ಬಚಾವಾದೆ....ಹಿಹ್ಹಿಹ್ಹಿ ಲಾಲಾ....

(ಇತ್ಯಾದಿ ಗುನುಗಿಕೊಳ್ಳುತ್ತಾ ನಿಷ್ಕ್ರಮಿಸುತ್ತಾನೆ.)

* * *

(ಹನುಮ ಆಡಿಟೋರಿಯಂ ಹಿಂಭಾಗದಿಂದ ಪ್ರವೇಶಿಸುತ್ತಾನೆ.)

ಹನುಮ : ಹೋಯ್, ದೋಣಿ ಒಳಗೆ, ದೊಣ್ಣೆ ಹೊರಗೆ!....ಗೊತ್ತಾಗಲಿಲ್ಲವೋ?....ನಾ ಹೊರಗೆ, ನಮ್ಮ ದಣಿಗಳು ಒಳಗೆ. ಹೌದಯ್ಯ, ನಾ ಹೊರಗೆ. ಈಗ – ನಿಮ್ಮ ಹಾಗೇ.... ನಮಗೂ ದಿವಾಮಾನದ ಪ್ರಕಾರ ಹೇಳುವುದಾದರೆ ಹದಿನೈದೋ, ಮೂವತ್ತೋ,

ಐವತ್ತೋ ದಿನಗಳಾದವಯ್ಯ; ತಿಂಗಳೆರಡು ತಿಂಗಳು ಅನ್ನಿ. ಈಗ, ಹೋಯ್, ದಿನಾ ಸಾಯಂಕಾಲ ಹುಡುಗರೆಲ್ಲ ಬರ್ತವೆ, ನಮ್ಮ ದಣಿಗಳನ್ನ ಕೂಡಿಕೊಂಡು ಆಟ ಆಡ್ತವೆ. ಅವು ಹುಡುಗರಾದರೆ, ನಮ್ಮ ದಣಿ ಶಿಶು!....ಯಾವತ್ತೂ ನಮ್ಮ ದಣಿ ನಕ್ಕದ್ದು ಅಂತ ಇಲ್ಲ ಮಾರಾಯ್ರೆ, ಈಗ ಕಂಡರೆ ಮಾತ್ರ ಯಾಹೊತ್ತಿಗೂ ಹೆಹ್ಹೆಹ್ಹೆ...ಇಲ್ಲ, ಹಿಹ್ಹಿಹ್ಹಿ....ಮೊನ್ನೆ ಆ ಹುಡುಗಿ ಇವರ ಗಲ್ಲ ಹಿಡಿದು "ಛೀ ಕಳ್ಳ" ಅಂತು ಇವರಿಗೆ, ಹೆಹ್ಹೆ ಹ್ಹೆ ಹ್ಹೆ ಹ್ಹೆ ಪರಮಾನಂದವಾಗಿ ಬಿಡ್ತು.... ಹಂಗಂತ, ಹ್ವಾಯ್, ಆ ಹುಡುಗರಿಗೆ ನನ್ನ ಕಂಡರೆ ಮತ್ತೂ ಅಕ್ಕರಾತಿ. ಅದಕ್ಕೇ ಅಲ್ಲವೋ ಈಗ, ಬೆಕ್ಕು ಒಳಗೆ ಬಾಲ ಹೊರಗೆ ಆದದ್ದು?....ಆ ಹುಡುಗರು ಹನುಮನಾಯಕನ ಜತೆಗೂ ಆಡತಾವಲ್ಲ ಅಂತ ಹೊಟ್ಟೆಕಿಚ್ಚು ನಮ್ಮ ದಣಿಗಳಿಗೆ.... ಇವತ್ತು ಕರೆದರಪ್ಪ, "ಎಲಾ, ಹನುಮನಾಯ್ಕ ಇವತ್ತಿಂದ ಯಾ ಪ್ರಕಾರ ಗೊತ್ತುಂಟೋ" ಅಂದರು, "ಗೊತ್ತಿಲ್ಲ ದಣಿ" ಅಂದೆ. "ಹುಡುಗರು ಒಳಕ್ಕೆ–ನೀನು ಹೊರಕ್ಕೆ" ಅಂದರು.... ಹಾಗಾಗಿ ಹನುಮಪ್ಪ ಹೊರಗೆ!....

(ಅರಮನೆ ಒಳಗಿಂದ ರಾಕ್ಷಸನೂ ಹುಡುಗರೂ ಬರುತ್ತಾರೆ.)

ಹನುಮ : ಅಕಾ ಅಕಾ.... ಮೊನ್ನೆಯಿಂದ ಒಂದು ಹೊಸಾ ಉಪದ್ವ್ಯಾಪ ಮಾರಾಯ್ರೆ. ಈ ಹುಡುಗರು ಅದ್ಯಾವುದೋ ವಯಸ್ಕ ಶಿಕ್ಷಣ ಅಂತೆ. ಆ ಪುಸ್ತಕ ಸ್ಲೇಟು ತಂದು ನಮ್ಮ ದಣಿಗಳಿಗೆ ಓದು ಬರಾ ಕಲಿಸಲಿಕ್ಕೆ ಸುರುಮಾಡಿ ಬಿಟ್ಟಿವೆ!....ಅಕಾ...ಅಕಾ

(ರಾಕ್ಷಸನ ಕೈಯಲ್ಲಿ ಸ್ಲೇಟು ಪುಸ್ತಕ–ಹುಡುಗರು ಕಲಿಸುತ್ತಾರೆ – ಎಲ್ಲಾ ಕುಣಿತದಲ್ಲೇ)

ಹುಡುಗರು : (ಕೆಲವರು) ಕಕಾ ಕಿಕೀ ಕುಕೂ ಕೆಕೇ....

ರಾಕ್ಷಸ : (ಪುನರುಚ್ಚರಿಸುತ್ತಾನೆ)

ಹುಡುಗರು : (ಕೆಲವರು) ಕ ಗುಡುಸಿ ಕಿ – ಉದ್ದ ಎಳದ್ರೆ ಕೀ.....

ರಾಕ್ಷಸ : (ಪುನರುಚ್ಚಾರ)

ಹುಡುಗರು : (ಕೆಲವರು) ಕ ಕೊಂಬು ಕು – ಉದ್ದ ಎಳದ್ರೆ ಕೂ....

ರಾಕ್ಷಸ : (ಪುನರುಚ್ಚಾರ)

ಹುಡುಗರು : (ಕೆಲವರು) ಕಕೇತ್ವ ಕೇ ಕಕೈತ್ವ ಕೈ, ಕಕೋತ್ವ ಕೋ ಕಕೌತ್ವ ಕೌ....
(ಕೆಲವರು) ಉದ್ದ ಎಳದ್ರೆ –ಕೇ ಕೋ....

ರಾಕ್ಷಸ : (ಪುನರುಚ್ಚಾರ)

ಹುಡುಗರು : ಕ ಕ್ಕೆ ಸೊನ್ನೆ ಕಂ, ಕ ವಿಸರ್ಗ ಕಃ.....

ರಾಕ್ಷಸ : (ಪುನರುಚ್ಚಾರ) (ಕಃ ಎನ್ನಲು ಹ್ಹ ಹ್ಹ ಎನ್ನುತ್ತಾನೆ.)

ಹುಡುಗರು : (ಕೆಲವರು) ಹ್ಹ ಹ್ಹ ಅಲ್ಲ, ಕಃ.....

ರಾಕ್ಷಸ : ಹಹ್ಹ ಅಲ್ಲ, ಕಃ.....

ಹುಡುಗರು : (ಕೆಲವರು) ಕಂ ಕಃ ಕಂ.... ಅಂಕಲ್ ನೀನೂ ಕಂ....

(ಇತ್ಯಾದಿ ಆಡುತ್ತಿರುವಾಗ ಸೈರನ್ ಕೂಗು. ಹುಡುಗರೆಲ್ಲ ಗಲಿಬಿಲಿಯಿಂದ ಹೊರಡಲು ತೊಡಗುತ್ತಾರೆ.....)

ಹುಡುಗರು : ಅಂಕಲ್ ಜಯಂಟ್ ಬೈ ಬೈ...ಜಯಂಟ್ ಮಾಮಾ ಬೈ ಬೈ.....

(ಇತ್ಯಾದಿ ಹೇಳುತ್ತ ನಿಷ್ಕ್ರಮಿಸುತ್ತಾರೆ. ರಾಕ್ಷಸ ಹಹಹ್ಹ ಹಿಹ್ಹಿಹ್ಹಿ ಎನ್ನುತ್ತ, ಕಲಿತ ಪಾಠವನ್ನು ಉರುಹಾಕಿಕೊಳ್ಳುತ್ತ, ಅರಮನೆ ಕಡೆ ಹೋಗಿ ನಿಷ್ಕ್ರಮಿಸುತ್ತಾನೆ. ಅನಂತರ, ಒಳಗಿನಿಂದ ಅವನ ಗರ್ಜನೆ.)

ಹನುಮ : ಹುಡುಗರು ಹೊರಕ್ಕೆ, ಇನ್ನು ಹನುಮನಾಯ್ಕ ಒಳಕ್ಕೆ....(ರಾಕ್ಷಸನಿಗೆ , ಕೂಗಿ) ಬಂದೆ ದಣೀ.... (ರಂಗ ಹತ್ತಿ ಒಳಕ್ಕೆ ಹೋಗುತ್ತಾನೆ....)

* * *

(ಮುದುಕ, 'ಮೇಷ್ಟ್ರು', ಸಿಸ್ಟರ್ ಪ್ರವೇಶ.)

ಮೇಷ್ಟ್ರು : (ತಟ್ಟನೆ) ಮೇಡಮ್ಮ, ನಿಲ್ಲು....ಇಗೋ, ಇಲ್ಲೇ ಎಲ್ಲೋ ಇದೆ, ಅರಮನೆ!..... ಹಾಗಂತ್ಹೇಳಿ, ನನ್ನ ಕಣ್ಣು ಮಸುಕು.... ಸುಡುಗಾಡು ಸುಂಟಿ, ನಿಮ್ಮ ಕಣ್ಣುಗಳು ಕೂಡಾ ಹಾಗೇನೇನೇ – ಈ ಎಳೇ ಪ್ರಾಯದಲ್ಲೇ.... ಇಗೋ ಇಗೋ, ಕಣ್ಣು ಮಸುಕಾಗಿದ್ರೂನೂವೇ ಮೂಗಿಗೆ ಬಡೀತಾ ಇದೆ ನೋಡು, ಕಿವಿ ತಾನಾಗೇ ನಿಮಿರಿಕೊಳ್ಳುತ್ತಲ್ಲಮ್ಮಾ..... ಕರೀಕಲ್ಲು ಗೋಡೆ, ದುಂಡು ಬತೇರಿ–ಕಾಣಿಸಬೇಕಿತ್ತು, ಇಲ್ಲೇನೇ ಕಾಣಿಸೋ ದಿಲ್ಲವಲ್ಲಾ.... ಹಾಗಂತಂದ್ಹೇಳಿ.....

ಸಿಸ್ಟರ್ : ಸುಮ್ನಿರಿ ಸಾರ್, ನಾ ಅದನ್ನೆಲ್ಲಾ ನಂಬೋಲ್ಲ....

ಮೇಷ್ಟ್ರು : ನಂಗೂ ಅನ್ನಿಸಿತಮ್ಮಾ, ಕಾಣದಿದ್ದನ್ನ ನಂಬಬಾರದು ಅಂತಾನೇನೇನೇ....ಆದ್ರೆ, ಸುಡುಗಾಡು ಸುಂಟಿ, ಈ ನಂಬಿಕೆ ಅಂಬೋದು ನಾವು ತಂದ್ಕೊಳ್ಳೋದಲ್ಲ. ತಾನೇ ಬಂದುಕೊಂಡದ್ದು.... ನಂಬಿಕೆ ಇಲ್ಲಾಂತಾನೇನೇನೇ ಹೇಳೋದಾದ್ರೆ ಏನಮ್ಮಾ, ಈ ಮುದುಕನ ಜತೆ ನೀನು ಈ ದೂರ ಬರತಿದ್ಯಾ?

ಸಿಸ್ಟರ್ : ನಾ ಬಂದದದ್ದು ಕೇಳಿ ಸರ್ – ಊರಲ್ಲೆಲ್ಲಾ ಇದೇ ಸುದ್ದಿ....ಎಲ್ಲಾರೂ ನಮ್ಮನ್ನ ಕೇಳೋರೆ. ಹುಡುಗರು ದಿನಾ ಸಂಜೆ ಎಲ್ಲಿ ಹೋಗ್ತಿವೆ? ಅವು ರಾಕ್ಷಸನ ಮನೆಗೆ ಆಡೋಕೆ ಹೋಗ್ತಾವಂತೆ ಹೌದಾ? ರಾಕ್ಷಸ, ಅರಮನೆ ಇದೆಲ್ಲಾ ನಿಜಾನಾ? – ಅಂತ ಎಲ್ಲಾ ಕೇಳ್ತಾರೆ.....

ಮೇಷ್ಟ್ರು : ಅಲ್ಲ, ಹಾಗಂತ್ಹೇಳಿ – ಅದೇನೇನೇನೇ.....

ಸಿಸ್ಟರ್ : ಇವತ್ತು ನಾವು ಚೀಫ್‌ನ ನೋಡೋಕೆ ಹೋಗಿದ್ದೆವು. ಅವರು ಸರಿಯಾಗೆ ಹೇಳಿದರು. – ಹುಡುಗರು ಅವುಗಳ ವಯಸ್ಸಿಗೆ ಸರಿಯಾಗಿ ಏನೋ ಕತೆ ಕಟ್ಟಿ ಹೇಳತವೆ. ಹಾಗಂತ ನೀವು ದೊಡ್ಡೋರು ಯೋಚ್ನೆ ಮಾಡಬೇಡವಾ ಅಂದರು. ಸೈಂಟಿಫಿಕ್ ಆಗಿ ಯೋಚಿಸೋದನ್ನ ಕಲಿತುಕೊಳ್ಳಿ ಅಂದರು. ರಾಕ್ಷಸ ಗೀಕ್ಷಸ ಅಂತ ಹುಡುಗರು ತಮಾಷೆ ಮಾಡಿರಬಹುದು. ಅಥವಾ ಅವಕ್ಕೆ ಯಾವಾಗ್ಲೂ ಆಟದ್ದೇ ಕನಸಲ್ಲಾ, ಅದೇ ಕನಸಿನ ಆಟ ನಂಬ್ಕೊಂಡು ಕತೆ ಹೇಳಿರಬಹುದು. ಅದಕ್ಕೆ ಊರಲ್ಲಿರೋ ದೋಡ್ಡೋರೆಲ್ಲ ಯಾಕೆ ಹಾಗೆ ತಲೆ ಕೆಡಿಸ್ಕೋಬೇಕು– ಅಂದರು.

ಮೇಷ್ಟ್ರು : ಹಾಗಿದ್ರೂ ಕೂಡಾ ನೂನೂನೂವೇ.....

ಸಿಸ್ಟರ್ : ನಿಮಗೂ ಈ ಭ್ರಮೆ ಇವತ್ತಿಗಾದರೂ ಹರಿದು ಹೋಗಲಿ ಅಂತಾನೆ ನಾನು ಬಂದೆ; ನಿಮ್ಮ ಜತೇಗೆ....

ಮೇಷ್ಟ್ರು : ಸುಡುಗಾಡು ಸುಂಟಿ, ಹುಟ್ಟತಾ ಬಂದ ಭ್ರಮೆ ಹರಿಯೋದು ಈ ಘಟ ಸುಟ್ಟು ಹೋದ ಮೇಲೇನೇನೇ.... ಹಾಗಂತಂದ್ಹೇಳಿ....

ಸಿಸ್ಟರ್ : ಆಯ್ತು ಸರ್, ಗೊತ್ತಾಯ್ತಲ್ಲ ಭ್ರಮೆ ಅಂತ....ನಡೀರಿ, ಇನ್ನಾದ್ರೂ ಹೋಗೋಣ. (ಗಡಿಯಾರ ನೋಡಿಕೊಂಡು) ಎಷ್ಟು ಹೊತ್ತಾಗಿ ಬಿಡ್ತು....

(ಅಷ್ಟರಲ್ಲಿ ಹನುಮ–ಗಹಗಹಿಸಿ ನಗುತ್ತ ಪ್ರವೇಶಿಸುತ್ತಾನೆ. ಆಮೇಲೆ ಮೇಷ್ಟ್ರನ್ನು ಕಂಡು ತಟ್ಟನೆ ತಿರುಗಿ ನಿಷ್ಕ್ರಮಿಸುತ್ತಾನೆ. ಮೇಷ್ಟ್ರು ಅವನು ಹೋದ ಕಡೆಗೇ 'ಅಲೆ!ಅಲೆ!' ಎನ್ನುತ್ತ ಹಿಂಬಾಲಿಸುತ್ತಾರೆ. ಏನೂ ಕಾಣದ ಮೇಷ್ಟ್ರ ಹಿಂದೆ ನಡೆದು ನಿಷ್ಕ್ರಮಿಸುತ್ತಾಳೆ. ಸ್ವಲ್ಪ ಹೊತ್ತಾದ ನಂತರ ಹನುಮನ ಪ್ರವೇಶ.)

ಹನುಮ : ಎಲಾ ಮುದಿಯ!....ಅಲ್ಲ, ನಾ ಯಾಕೋ ಬಂದೆನಲ್ಲಾ.... ಕಾಗೇ ಕಾಲು, ಗುಬ್ಬೀ ಗೂಡು, ಯಾಕೆ ಬಂದೆ?....(ತಟ್ಟನೆ ಹಿಂದಿನ ಹಾಗೆ ಗಹಗಹಿಸಿ ನಗುತ್ತ) ಓಯ್, ನಿಮಗೆ ಹೇಳುವ ಅಂತ ಬಂದೆ..... ನಮ್ಮ ದಣಿಗಳು ಮಾರಾಯ್ರೆ, ಈಗ ಈ ಹುಡುಗರಿಂದ ಕಲಿತ ಭಾಷೆ ಮಾತಾಡೋಕೆ ಪ್ರಾರಂಭಿಸಿ ಬಿಡ್ತಾರೆ ನೋಡಿ.... ಅದೇ. ಬೆಳಗ್ಗೆ ಯಥಾ ಪ್ರಕಾರ ಬಂದು ಕಡಾಯದ ಕವಳಗೇಲಿ ಆಡಿನ ರಕ್ತ ತಗೊಂಡ್ಹೋಗಿ ಕೊಟ್ಟೆನಪ್ಪ ಕುಡಿಯೋಕೆ ಅಂತ. ಕೈ ಹೀಗೆ ಮಾಡಿದ್ರು – "ಬಡಾ ಆನೆಗೆ ಆರು ಕೋಡು, ಬಡಾ ಆನೆಗೆ ಆರು ಕೋಡು" ಅಂತಾರೆ!.... ಇದೆಲ್ಲೀ ಆನೆ, ಆನೆಗೆ ಎಲ್ಲೀ ಕೋಡು ಅಂತ ಅರ್ಧ ತಾಸು ಆಲೋಚನೆ ಮಾಡಿದ ಮೇಲೆ ಅವರ ಸನ್ನೆ ನೋಡಿ ಅರ್ಥ ಮಾಡಿಕೊಂಡೆ – ಬಡಾ ಆನೆಗೆ ಆರು ಕೋಡು–ಅಂದ್ರೆ ಬೇಡ ನನಗೆ ಹಾಲು ಕೊಡು ಅಂತ.... ಹೂಂ, ರಕ್ತ ಕುಡಿಯೋದು ಬಿಟ್ಟು ಹಾಲು ಕುಡಿಯೋಕೆ ಶುರು.... ಈಗ ಮಾರಾಯ್ರೆ ಅಲ್ಲಿ ಕೂತ್ಬಿಟ್ಟಿದಾರೆ, ಗಲ್ಲಕ್ಕೆ ಕೈಕೊಟ್ಟು ಯೋಚ್ನೆ ಮಾಡ್ತಾ.....ಹಾಗೆ ಯಾವತ್ತೂ ಯೋಚ್ನೆಗೀಚ್ನೆ ಅಂತ ಇದ್ದವರಲ್ಲಪ್ಪ.....

ಎದುರು ಹಾದೆ, ಕಾಣಲೇ ಇಲ್ಲ, ಹೋಗಿ ನಿಂತ್ಕೊಂಡೆ, ಸ್ವಲ್ಪ ಹೊತ್ತಿನ ಮೇಲೆ ತಲೆಯೆತ್ತಿ ನೋಡಿದ್ರು, ಅದೇ ಯೋಚ್ನೇಲೇ ಗಡ್ಡದಲ್ಲಿಟ್ಟ ಕೈ ತೆಗೆದ್ರು. ಮೂಗಿಗೆ ಬೆರಳಿಟ್ಟರು. ಹನುಮನಾಯ್ಕಾ ಅಂದರು. ದಣೀ ಎಂದೆ. ಆಲೋಚ್ಸಿ ಆಲೋಚ್ಸಿ ಕೇಳಿದರು. ಹನುಮನಾಯಕ ಕರಟು ಮರಟೋ ಮರೆಟು ಕರಟೊ – ಅಂತ. ಏನು ಹೇಳಲಿ? ಏನು ಕೇಳಿದರು ಅಂತ ಗೊತ್ತಾದರಲ್ಲವೊ? ನಾನು ತಡಮಾಡಲಿಲ್ಲ. ತಟ್ಟನೆ ಹೇಳಿಬಿಟ್ಟೆ – ಕರಟು ಮರಟೋ ಅಲ್ಲ ಮರಟು ಕರಟೋ ಅಲ್ಲ. ಬೆಸಗೊಂಬಾತನ ತಲೆಕಾಯಿ ಗೊರಟು ದಣೀ – ಅಂದ್ಬಿಟ್ಟೆ: ಓಹ್ಹಿಹ್ಹಿ ಅಂತ ನಗೋಕೆ ಪ್ರಾರಂಭಿಸಿದ್ರು. ಅಲ್ಲಿಂದ ಗಾಡಿಬಿಟ್ಟೆ...... ಹೌದು ಮಾರಾಯ್ರೇ ಹುಡುಗರು ಬರೋ ಹೊತ್ತಾಯ್ತಲ್ಲ. ನಾವಿನ್ನು ಹೊರಡುವುದೇ....

(ಎನ್ನುತ್ತ ಹನುಮ ನಿಷ್ಕ್ರಮಿಸುತ್ತಾನೆ. ಅನಂತರ ಹುಡುಗರು ಬರುತ್ತಾರೆ. ಅರಮನೆ ಕಡೆ ಹೋಗುತ್ತಾರೆ. ರಾಕ್ಷಸನನ್ನು ಕೂಡಿ ರಂಗಕ್ಕೆ ಬರುತ್ತಾರೆ. ಏನೇನೋ ಮಾತಾಡಿಕೊಳ್ಳುತ್ತ ರಾಕ್ಷಸನನ್ನು ಬಿಟ್ಟು, ಎಲ್ಲಾ ಚದುರಿ ವಿಂಗ್‌ನೊಳಕ್ಕೆ ನಿಷ್ಕ್ರಮಿಸುತ್ತಾರೆ. ಈ ಹೊತ್ತಿನಲ್ಲಿ ಹನುಮ ಪ್ರೇಕ್ಷಾಂಗಣದ ಹಿಂಭಾಗದಿಂದ ಪ್ರವೇಶ.)

ಹನುಮ : ಓಯ್, ಪಾಪ ನಿನ್ನೆ ಆ ಹುಡುಗರು ನನಗೆ ಎದುರಾದವು, ನನ್ನನ್ನು ಕರೆದವು ಮಾರಾಯ್ರೆ, ಇವತ್ತು ಅದೇನೋ ಗೋಕುಲಾಷ್ಟಮಿ ಆಟವಂತೆ ನೀವೂ ಬನ್ನಿ ಅಂಕಲ್ ಟ್ವಿಂಕಲ್ ಅಂದವು.... ಬರ್ತೇನೆ, ಹೋಗಿ ಅಂತ ಹೇಳಿ ಬಂದ್ಬಿಟ್ಟೆ.... ಅದೇನ್ ಆಟವೋ, ನಿಮ್ಮ ಜತೇನೇ ಕೂತು ನೋಡಿಬಿಡುವ.

(ಪ್ರೇಕ್ಷಾಂಗಣದಲ್ಲಿ ಕೂರುತ್ತಾನೆ. ರಂಗದಲ್ಲಿ ಆಟವು ಪ್ರಾರಂಭ. ರಾಕ್ಷಸ ಹೆಹ್ಹೆಹ್ಹೆ ಎಂದು ಮೆಚ್ಚಿ ತಿರುಗುತ್ತ ನೋಡುತ್ತಾನೆ.)

ಹುಡುಗರು : (ವಿಂಗ್‌ಗಳಿಂದ ಬೇರೆ ಬೇರೆಯಾಗಿ ಹಾಡಿಕೊಳ್ಳುತ್ತ ಹುಡುಕ್ತ ಪ್ರವೇಶಿಸುತ್ತಾರೆ)

(ಹಾಡು) ನಂದನಕಂದ ಮುಕುಂದಾ ॥ ಹುಡುಕುತ್ತ ಹೊರಟೆವು ನಿನ್ನಾ ॥
ಕಾಪಾಡು ಬಾರೋ ನಮ್ಮನ್ನಾ....
ಕಾಳಿಂಗ ಸರ್ಪನ ವಿಷಕ್ಕೆ ನಮ್ಮ ಪಶುಗಳು ಸತ್ತವು ಕೃಷ್ಣಾ!
ಕಾಪಾಡು ಬಾರೊ ನಮ್ಮನ್ನಾ ॥
ಕೊಳಲು ಹಿಡಿದವನೇ ಬಾರೊ ॥ ನವಿಲುಗರಿ ಮುಡಿದವನೇ ಬಾರೋ॥
ಕಾಪಾಡು ಬಾರೊ ನಮ್ಮನ್ನಾ....

(ಈಗ ಜೇನಿ ಕೃಷ್ಣನಾಗಿ, ರಂಗಕೇಂದ್ರಕ್ಕೆ ಪ್ರವೇಶಿಸುತ್ತಾಳೆ.)

(ಎಲ್ಲರಿಗೂ ಅಭಯಹಸ್ತ ತೋರಿಸಿ, ಕಾಳಿಂಗನ ಹೆಡೆಯನ್ನು ಹತ್ತಿ ಕುಣಿಯುವಂತೆ ನಟಿಸುತ್ತಾಳೆ.)

ಹುಡುಗರು : (ಹಾಡು) ಆಡಿದನೋ ರಂಗಾ! ಅದ್ಭುತದಿಂದಲಿ । ಕಾಳಿಂಗನ ಫಣಿಯಲಿ....
ದುಷ್ಟ ಕಾಳಿಂಗನ ಇಷ್ಟಗಲ ಹೆಡೆಯಲ್ಲಿ ॥
ಪುಟ್ಟ ಪಾದಗಳಿಟ್ಟು ತುಳಿದನು ನೆಲದಲ್ಲಿ ಆಡಿದನೋ.....

(ಹಾಡು ಮುಗಿಸಿ ಹುಡುಗರು ಭಜಿಸತೊಡಗುತ್ತಾರೆ–)

ಹುಡುಗರು : ಮುಕುಂದ ಜಯ ಜಯ । ಮುರಳೀಧರ ಜಯ....

(ಮೊದಲು ಹೆಹ್ಹೆಹ್ಹೆ ಹಿಹ್ಹಿಹ್ಹಿ ಎಂದು ಮೆಚ್ಚಿಕೊಂಡು ನೋಡುತ್ತ ನಿಲ್ಲುವ ರಾಕ್ಷಸ ಕ್ರಮೇಣ ಅವರ ಆಟದಲ್ಲಿ ಕೂಡಿಕೊಳ್ಳುತ್ತಾನೆ. ತುದಿಗಂತೂ ಭಜನೆಯಲ್ಲಿ ತೀರಾ ತನ್ಮಯನಾಗಿ ಜೇನಿಯ ಎದುರು ನಿಂತು ಭಜಿಸುತ್ತ ತಟ್ಟನೆ ಅವಳ ಕಾಲಿಗೆ ಎರಗುತ್ತಾನೆ. ಆಕೆಯ ಕಾಲಿಗೆ ರಾಕ್ಷಸನ ತಲೆ ತಾಗಿ ಆಕೆ ಮುಗ್ಗರಿಸಿ ಧೊಪ್ಪನೆ ಬಿದ್ದು ನರಳುತ್ತಾಳೆ. ಹುಡುಗರೆಲ್ಲ ಗಾಬರಿಗೊಂಡು ಅವಳ ಸುತ್ತ ಜಮಾಯಿಸುತ್ತಾರೆ. ಆಕೆ ನೋವಿನಿಂದ ನರಳುತ್ತಾಳೆ. ರಾಕ್ಷಸ ಏನೂ ತೋಚದೆ ದಿಙ್ಮೂಢನಾಗಿ ನಿಲ್ಲುತ್ತಾನೆ.)

ಹನುಮ : ಅಯ್ಯೋ, ಆ ಹುಡುಗಿ ಬಿದ್ದೇಬಿಟ್ಟಳಲ್ಲ!
(ಎನ್ನುತ್ತ ಪ್ರೇಕ್ಷಾಂಗಣದಿಂದ ಆತನೂ ಧಾವಿಸುತ್ತಾನೆ.)

ಹುಡುಗರು : ಭಾರೀ ಪೆಟ್ಟಾಗಿ ಬಿಟ್ಟಿದೆ....ಕಾಲು ಉಳುಕಿ ಹೋಗಿರಬೇಕು....ಅಲ್ಲ, ಬೆನ್ನಿಗೇ ಪೆಟ್ಟು ಬಿದ್ದಿದೆ....ಏಳೋಕೇ ಆಗೋದಿಲ್ಲ....ಏನು ಮಾಡೋದು ಈಗ?.... ಮೆಲ್ಲಗೆ ಅವಳನ್ನು ಎಬ್ಬಿಸಿ ಕರಕೊಂಡು ಹೋಗೋಣ. ಏಳೋಕೆ ಮಾಡ್ತಿದಾಳೆ, ಆಗೋದಿಲ್ಲ.... ಎಲ್ಲಾ ಸುಮ್ನಿರಿ, ನಾನು ಬೇಗ ಹೋಗಿ ನನ್ನ ತಂದೇಗೆ ಹೇಳಿ ಜೀಪ್ ತಗೊಂಡು ಬರ್ತೇನೆ– ಅದರಲ್ಲಿ ಕರಕೊಂಡು ಹೋಗೋಣ.... ನಾವೇ ಹೊತ್ಕೊಂಡು ಹೋಗಿಬಿಡಬಹುದು.

ಹನುಮ : ಸುಮ್ನಿರಿ, ಏನೂ ಬೇಡ. ನಾನು ಅವಳನ್ನು ಮೆಲ್ಲಗೆ ಎತ್ಕೊಂಡು ಬರ್ತೇನೆ. ನಡೀರಿ, ಎಲ್ಲಾ ಹೋಗೋಣ.

(ಹನುಮ ಆಕೆಯನ್ನು ಮೆಲ್ಲ ಎತ್ತಿಕೊಳ್ಳುತ್ತಾನೆ. ಆಕೆ ನರಳುತ್ತಿದ್ದಾಳೆ. ಎಲ್ಲಾ ನಿಷ್ಕ್ರಮಿಸುತ್ತಾರೆ. ಒಬ್ಬನೇ ಉಳಿದ ರಾಕ್ಷಸ ಆ ಕಡೆಗೇ ನೋಡುತ್ತ ನಿಂತಿದ್ದು ಆಮೇಲೆ ಅಸ್ವಸ್ಥನಾಗಿ ಅಲ್ಲೆಲ್ಲಾ ಸುತ್ತುತ್ತಾನೆ. ಗರ್ಜಿಸುತ್ತಾನೆ.)

(ರಂಗದ ಮಧ್ಯದಲ್ಲಿ, ನಿಧಾನವಾಗಿ ಕೂತು ಭಜನೆ ಮಾಡತೊಡಗುತ್ತಾನೆ.)

ರಾಕ್ಷಸ : ಮೂಗುದ್ದ ಝೀ ಝೀ ॥ ಮುಳು ಮುಳು ಝೀ ಝೀ....

(ಸ್ವಲ್ಪ ಹೊತ್ತಿನ ಮೇಲೆ ಹನುಮ ಪುನಃ ಪ್ರವೇಶಿಸುತ್ತಾನೆ. ರಾಕ್ಷಸ ಸುದ್ದಿ ತಿಳಿಯಲು ಕುತೂಹಲದಿಂದ ಮೇಲೇಳುತ್ತಾನೆ.)

ಹನುಮ : ಏನೆಂದರೂ ಪಡಪೋಶಿ ಆಗ್ಹೋಯ್ತು, ದಣಿಗಳೇ.... ಅವಳನ್ನ ಹೊತ್ಕೊಂಡು ಅವಳ ಮನೆಗೇ ಹೋದೆವು. ನೋವಿನಿಂದ ಪಾಪ, ನರಳ್ತಾನೇ ಇತ್ತು. ಮನೆಯವರು ನೋಡಿ ಏನು ಮಾಡಲಿಕ್ಕೂ ತೋಚದೆ ಆಸ್ಪತ್ರೆಗೆ ತಗೊಂಡು ಹೋದರು. ಅಲ್ಲಿ ವೈದ್ಯರು ತುಂಬಾ ಹೊತ್ತು ಪರೀಕ್ಷೆ ಮಾಡಿ, ಇದು ಬಹಳ ಕಷ್ಟ, ಇಲ್ಲಿ ಆಗೋದಿಲ್ಲ, ದೂರದ ನಗರದಲ್ಲಿರೋ ದೊಡ್ಡಾಸ್ಪತ್ರೇಗೇ ಕರಕೊಂಡು ಹೋಗಬೇಕು – ಅಂದರಂತೆ. ಅದೇನೋ ಬೆನ್ನು ಹುರಿಯಲಿ ಉಂಗುರ ಜಾರಿಬಿಟ್ಟಿದೆಯಂತೆ. ಅದಕ್ಕೆ ಅದೆಂತದೋ

ಚಿಕಿತ್ಸೆ...ಹುಂ, ಅದೂ ಗುಣವಾದೀತು ಅಂತ ಹೇಳೋದು ಕಷ್ಟ - ಅಂದ್ರಂತೆ..... ನಾನೂ ಆಸ್ಪತ್ರೆ ಹತ್ತಿರ ಹೋಗಿದ್ದೆ. ಹುಡುಗರೆಲ್ಲ ಅಲ್ಲೇ ಸುತ್ತುತ್ತ ಇದ್ದವು. ನಾನು ತಡಮಾಡಬಾರದು, ದಣಿಗಳಿಗೆ ತಿಳಿಸಬೇಕೂ ಅಂತ ತತ್‌ಕ್ಷಣವೇ ಬಂದು ಬಿಟ್ಟೆ...

(ರಾಕ್ಷಸ ದಿಕ್ಕು ತೋರದೆ ಆಚೀಚೆ ಶತಪಥ ಹಾಕುತ್ತಾನೆ. ದುಃಖದಿಂದ ಗರ್ಜಿಸಿ, ನಿಟ್ಟುಸಿರು ಬಿಡುತ್ತಾನೆ.)

ಹನುಮ : (ವಿಂಗ್ ಕಡೆಗೆ), ಏಯ್, ದಣಿಗಳಿಗೆ ಶೋಕ ಉಕ್ಕುತಾ ಉಂಟು.... ಪಿಟೀಲಿನವನೆ.... ಬೇಗ....

(ಪಿಟೀಲು ಮತ್ತು ಮೃದಂಗವರು ಬಂದು ಬಾರಿಸುತ್ತಾರೆ. ರಾಕ್ಷಸ ಶೋಕವನ್ನು ಅಭಿನಯಿಸಿ ಕುಣಿಯುತ್ತಾನೆ. ಆಮೇಲೆ ಯೋಚನಾಮಗ್ನವಾಗಿ ಕೂರುತ್ತಾನೆ - ಸ್ವಲ್ಪ ಹೊತ್ತಿನ ನಂತರ-)

ರಾಕ್ಷಸ : (ತಟ್ಟನೆ ಕಣ್ಣು ಹೊಳೆಸಿ) ಸಾಮಾ....ಸಾಮಾ....

ಹನುಮ : ಸಾಮ ಒಂದೇ ಅಲ್ಲ. ಸಾಮ ದಾನ ಭೇದ ದಂಡ ಅಂತ ನಾಲ್ಕು ಚತುರೋಪಾಯಗಳೂ!

(ಹಾಗಲ್ಲ ಎನ್ನುವಂತೆ ರಾಕ್ಷಸ ತಲೆಯಲ್ಲಾಡಿಸುತ್ತಾನೆ. ಹನುಮನನ್ನು ಸಂಜ್ಞೆಯಿಂದ ಹತ್ತಿರಕ್ಕೆ ಕರೆಯುತ್ತಾನೆ.)

ಹನುಮ : ಹೌದಾ? ಗುಟ್ಟಾ?.....

(ಎನ್ನುತ್ತ ರಾಕ್ಷಸನ ಹತ್ತಿರ ಹೋಗುತ್ತಾನೆ. ರಾಕ್ಷಸ ಹನುಮನ ಕೈಹಿಡಿದು ಅಭಿನಯಿಸುತ್ತ, ಬೆರಳುಗಳಲ್ಲಿ ಅವನ ಅಂಗೈ ಮೈ ಮುಟ್ಟಿ ಆ ಮೂಲಕ ಕುಣಿತ ಅಭಿನಯಗಳಿಂದ ವಿಷಯ ವಿವರಿಸುತ್ತಾನೆ.)

ಹನುಮ : ಹೌದಯ್ಯಾ ಇದು ಬೆರಳಿನ ಭಾಷೆ - ನನಗೆ ಮತ್ತು ನಮ್ಮ ದಣಿಗಳಿಗೆ ಮಾತ್ರ ತಿಳಿಯೋದು. (ರಾಕ್ಷಸನಿಗೆ) ತಿಳೀತು, ದಣಿಗಳೇ, ಸರಿಯಾಗಿ ತಿಳಿದುಕೊಂಡೆ. ಬೇಕಾದರೆ ಇನ್ನೊಂದು ಸಲ ಹೇಳಿಬಿಡ್ತೇನೆ. ಕೇಳಿಬಿಡಿ, ಸರಿಯೇ ಅಂತ.... ಇಕೋ, ಈ ತಕ್ಷಣ ನಾನು ಹೊರಟು ಬಿಡ್ಬೇಕ್.... ಇಲ್ಲಿಂದ ಉತ್ತರ ದಿಕ್ಕಿನಲ್ಲಿ ಏಳು ನದಿಗಳನ್ನು ದಾಟಿ ಏಳು ಯೋಜನ ದೂರ ಮನೋವೇಗದಲ್ಲಿ ಧಾವಿಸಿ ಹೋಗಬೇಕ್.... ಅಲ್ಲಿ ಶಾಲ್ಮಲೀ ನದೀ ತೀರದಲ್ಲಿರುವ ಅಲಕಾರಣ್ಯವನ್ನು ಪ್ರವೇಶಿಸಬೇಕ್.... ಅರಣ್ಯದ ನಡುವೆ ಇರತಕ್ಕಂಥಾ ಕಿರು ಬಯಲನ್ನು ಸೇರ್ಬೇಕ್.... ಆ ಕಿರುಬಯಲಿನಲ್ಲಿ ಯಾವ ಏಳು ವಟವೃಕ್ಷಗಳಿದ್ದಾವೆ, ಅವುಗಳನ್ನು ಸಮೀಪಿಸಬೇಕ್.....ಏಳರಲ್ಲಿ ನಟ್ಟ ನಡುವೆ ಇರುವ ವಟವೃಕ್ಷಕ್ಕೆ ಏಳುಕೊಂಬೆ; ಅದರ ನಡುವಣ ಕೊಂಬೆಯಲ್ಲಿ ಒಂದು ಪೊಟರೆ ಉಂಟು; ಆ ಪೊಟರೆಗೆ ಮುಖಮಾಡಿ 'ಜೈ ಕಂಕಲಾಸುರ' ಎಂದ ತಕ್ಷಣ ಒಂದು ಕೆಂಪು ಪಾರಿವಾಳ ಹೊರಕ್ಕೆ ಬರ್ತದೆ.... ಅದನ್ನ ಅಂಗೈಯಲ್ಲಿ ಹಿಡಿದದ್ದೇ ಮುಂಗೈ ಮೇಲೆ ಕೂರಿಸಿಕೊಂಡು ಇಲ್ಲಿಗೆ ತರಬೇಕ್.... ಆಮೇಲೆ ಯಾರಿಗೂ ಕಾಣದಂಥ ಪರಿಯಲ್ಲಿ ಆಸ್ಪತ್ರೆಯನ್ನು ಪ್ರವೇಶಿಸಿ

ಆ ಪಾರಿವಾಳವನ್ನು ಕೊಯ್ದು ಅದರ ರಕ್ತವನ್ನು ಆ ಹುಡುಗಿಯ ಬೆನ್ನಿಗೆ ಹಚ್ಚಬೇಕು.....ಅಲ್ಲವೋ ದಣಿಗಳೇ?....

(ರಾಕ್ಷಸ ಹೌದು ಎಂದು ತಲೆಯಾಡಿಸುತ್ತಾನೆ.)

ಹನುಮ : ಇಕೋ ದಣಿಗಳೇ, ಹೊರೆಟೇಬಿಟ್ಟೆ.

(ಹನುಮ ನಿಷ್ಕ್ರಮಿಸುತ್ತಾನೆ. ಆಮೇಲೆ ರಾಕ್ಷಸ ಗರ್ಜಿಸುತ್ತಾನೆ. ಅದನ್ನು ಕೇಳಿ ಹನುಮ ಮತ್ತೆ ಹಿಂತಿರುಗುತ್ತಾನೆ.)

ಹನುಮ : ಮತ್ತೆ ಯಾಕೋ ಬಂತಲ್ಲಪ್ಪ ಬುಲಾವ್.... ಕರೆದಿರಾ ದಣಿಗಳೇ?

ರಾಕ್ಷಸ : (ಅಭಿನಯ ಸಮೇತ– ಗರ್ಜನೆ)

ಹನುಮ : ಆಂ? ಹಕ್ಕಿಗಳು ಏನು ಮಾಡ್ತವೆ ಅಂದಿರಾ? ಹಕ್ಕಿಗಳು ಏನು ಮಾಡ್ತವೆ, ಮರದ ಮೇಲೆ ಗೂಡು ಕಟ್ಟಿ ವಾಸ ಮಾಡ್ತವೆ.

ರಾಕ್ಷಸ : (ಪುನಃ ಅಭಿನಯ – ಗರ್ಜನೆ)

ಹನುಮ : ಮತ್ತೇನು ಮಾಡ್ತವೆ ಅಂತಲೋ? – ಗೂಡು ಬಿಟ್ಟು ಆಕಾಶಕ್ಕೆ ಜಿಗೀತವೆ. ನೀಲಿಯಲ್ಲಿ ಸ್ವಚ್ಛಂದ ಹಾರಾಡ್ತಾ ನಡೆದು ಬಿಡ್ತವೆ, ಲೋಕ ಲೋಕಾಂತರವನ್ನೇ ಕಾಣ್ತಾ.

ರಾಕ್ಷಸ : ಹಾಂ!....ಅಕ್ಕಿ, ಅಕ್ಕಿ! ಆರಿಬಿಡಬೇಕು ಕಾಂತರಕಾಂತಾರಕ್ಕೆ!

ಹನುಮ : ನೀವೂ ಹಾರಿಬಿಡ್ತೀರಾ, ಲೋಕ ಲೋಕಾಂತರಕ್ಕೆ? (ತನ್ನಲ್ಲೇ) ನೀವು ಹಾರಲಿಕ್ಕೆ ಹೊರಟರೆ ಹಾರುವುದಿಲ್ಲ, ನೀವೇ ಹೇಳಿದ ಹಾಗೆ, ಆರಿ ಹೋಗ್ತೀರಿ ಅಷ್ಟೇ ತಣ್ಣಗೆ!.... (ರಾಕ್ಷಸನಿಗೆ) ದಣಿಗಳ ಇಚ್ಛೆ ಹಾಗಿದ್ದರೆ, ನಾನಾದರೂ ಏನು ಹೇಳಲಿ? ಅಷ್ಟಕ್ಕೆ ಮತ್ತೆ ಕರೆದದ್ದೇ?.... ಸರಿ, ಇನ್ನು ತಡಮಾಡಲಿಕ್ಕಿಲ್ಲ, ನಾನು ಹೊರಟುಬಿಡ್ತೇನೆ.

(ಎಂದು ನಿಷ್ಕ್ರಮಿಸುತ್ತಾನೆ. ರಾಕ್ಷಸ ಆನಂದೋದ್ರೇಕದಿಂದ ಹಾಡಿಕೊಳ್ಳುತ್ತ ಕುಣಿದುಕೊಳ್ಳುತ್ತ ಅರಮನೆ ಕಡೆ ನಡೀತಾನೆ.)

ರಾಕ್ಷಸ : ಅಕ್ಕಿ ಅಕ್ಕಿ.... ಕಾಂತಾರಕಾಂತಾರ ಆರಿಬಿಡಬೇಕು.....

* * *

ಸ್ವಲ್ಪ ಹೊತ್ತಿನ ಮೇಲೆ ಪುನಃ ರಾಕ್ಷಸನ ಪ್ರವೇಶ; ಅದೇ ಆನಂದೋದ್ರೇಕದಲ್ಲಿ ಹಾಗೇ ಹಾಡಿಕೊಳ್ಳುತ್ತ ಕುಣಿಯುತ್ತ ಬರುತ್ತಾನೆ.

ರಾಕ್ಷಸ : ಅಕ್ಕಿ ಆರಿಬಿಡಬೇಕು.... ಅಕಶಾ ಆರಿಬಿಡಬೇಕು.

(ಹಾಗೆ ಕುಣಿಯುವಾಗ ಯಾರೋ ಗಂಟಲು ಹಿಡಿದ ಹಾಗೆ ಭಾಸವಾಗಿ ನೋವು ಅನುಭವಿಸುತ್ತ ತಪ್ತರಿಸಿ ಧೊಪ್ಪನೆ ಕೂಡುತ್ತಾನೆ. ನಿಶ್ಚೇತನನಾಗುತ್ತಾನೆ. ಒಡನೆಯೇ ಹನುಮನ ಪ್ರವೇಶ)

ಹನುಮ : ಆಗಿ ಹೋಯ್ತು ದಣಿಗಳೇ – ಎಲ್ಲಾ ಮುಗಿದುಹೋಯ್ತು. ನೀವು ಹೇಳಿದ ಹಾಗೇ ಮಾಡಿಬಿಟ್ಟೆ. ಕೆಂಪು ಪಾರವಾಳ ಕೊಯ್ದು ಬಿಸಿರಕ್ತ ಬೆನ್ನಿಗೆ ಸವರಿದ್ದೇ

ತಡ, ಆ ಹುಡುಗಿ ಹುಷಾರಾಗಿ ಎದ್ದು ಕೂತುಬಿಟ್ಟಿತು!.... (ರಾಕ್ಷಸನನ್ನು ನೋಡಿ) ಅಲೆ!....(ಹತ್ತಿರ ಹೋಗಿ) ದಣಿ! ದಣಿಗಳೇ! (ಮುಟ್ಟುವನು; ರಾಕ್ಷಸನ ಶವ ದೊಪ್ಪನೆ ಮಲಗಿದ ಹಾಗೆ ಕೆಳಕ್ಕೆ ಬೀಳುತ್ತದೆ.) ಆಂ?.... ದಣಿಗಳು ಸತ್ತು ಹೋದರು?....ಸತ್ತು ಹೋದರು! (ಹುಚ್ಚಾಪಟ್ಟೆ ಖುಷಿಯಿಂದ ಕುಣಿಯುತ್ತಾನೆ) ನಾನೂ ಸತ್ತು ಹೋಗಬಹುದು. ಹೋಯ್, ನಾನೂ ಸತ್ತುಹೋಗ್ತೇನೆ....ಹಕ್ಕೀ ಹಾಗೆ ಜಿಗಿದು ಬಿಡ್ತೇನೆ.... ಲೋಕ ಲೋಕಾಂತರಕ್ಕೆ ನಡೆದು ಬಿಡ್ತೇನೆ....

(ಎನ್ನುತ್ತ ಕುಣಿಕುಣಿದು ರಾಕ್ಷಸನ ಪಕ್ಕದಲ್ಲಿ ದೊಪ್ಪನೆ ಕುಸಿದು ಬೀಳುತ್ತಾನೆ – ಸ್ವಲ್ಪ ಹೊತ್ತು ನೀರವ– ಆಮೇಲೆ ಹುಡುಗರ ಪ್ರವೇಶ. ಜೇನಿ ಇಲ್ಲ.)

ಬಂಟು : ಜಯಂಟ್ ಮಾಮಾ, ಜೇನಿ ಗುಣವಾಗಿ ಬಿಟ್ಟಳು....

ಬಿಂಕು : ಡಾಕ್ಟರು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಿದ್ರು....

ಕಾಮು : ಮನೆಗೆ ಕರಕೊಂಡು ಬಂದಿದ್ದಾರೆ....

ಬಾಳ : ಹನ್ನೂ ಮಾಮಾ....

(ಎಲ್ಲರೂ ತಟ್ಟನೆ ಕೆಳಗೆ ಬಿದ್ದಿರುವ ರಾಕ್ಷಸ, ಹನುಮನನ್ನು ನೋಡ್ತಾರೆ.)

ಮೀನಿ : ಏಯ್, ಜಯಂಟ್ ಮಾಮಾ, ಹನ್ನೂ ಮಾಮಾ ಇಬ್ಬರೂ ಮಲಗಿದ್ದಾರೆ ನೋಡಿ ನಿದ್ದೆ ಮಾಡ್ತಿದಾರೆ.

ಮಿಟ್ಟಿ : ಹೌದು, ಗಲಾಟೆ ಮಾಡಬೇಡಿ, ಪಾಪ, ನಿದ್ದೆ ಮಾಡ್ತಿದಾರೆ.

ಜೆಟ್ಟಿ : ಹೌದು, ಗಲಾಟೆ ಮಾಡಬೇಡಿ, ನಿದ್ದೆ ಮಾಡ್ತಿದಾರೆ....

ಚೆನ್ನ : ಆಮೇಲೆ ಮತ್ತೆ ಬರೋಣ ಹೇಳೋದಕ್ಕೆ....

ಚೇರ : ಇವತ್ತೆಲ್ಲಾ ನಿದ್ದೆ ಮಾಡಲಿ, ನಾಳೆ ಬರೋಣ....

ಜೆಟ್ಟಿ : ಹೌದು. ನಾಳೆ ಜೇನೀನೂ ಬರ್ತಾಳೆ. ಎಲ್ಲಾ ಬರೋಣ. ನಾಳೆಯಿಂದಾ ಮತ್ತೆ ಆಟ ಆಡಬಹುದು–

ಮಿಟ್ಟಿ : ಪಾಪ, ಇಬ್ರೂ ಚಳೀಲಿ ಮಲಗಿದಾರೆ....ಏನಾದರೂ ಹೊದೆಸಿ ಹೋಗೋಣ.

ಚೆನ್ನ : ಬನ್ನಿ. ಇಲ್ಲಿ ಹೂವು ಉಂಟಲ್ಲ ಬೇಕಾದಷ್ಟು, ಅದನ್ನೇ ತಂದು ಹೊದೆಸೋಣ.

(ಹೂವು ಕೊಯ್ದು ತಂದು ಇಬ್ಬರ ಮೇಲೂ ಮೃದುವಾಗಿ ಹೊದೆಸಿ ಎಲ್ಲರೂ ಹೊರಡುತ್ತಾರೆ. ಆಚೆಯಿಂದ ಅವರ ಕೂಗು ಕೇಳಿಸುತ್ತದೆ. 'ಜಿಂದಾಬಾದ್, ಜಿಂದಾಬಾದ್, ಜಯಂಟ್ ಮಾಮಾ ಜಿಂದಾಬಾದ್....ಜಿಂದಾಬಾದ್ ಜಿಂದಾಬಾದ್, ಅಂಕಲ್ ಹನ್ನೂ ಜಿಂದಾಬಾದ್'....ಇತ್ಯಾದಿ.)

# ಒಗಟಿನ ರಾಣಿ

ಕೆ. ರಾಮಯ್ಯ

## ಪಾತ್ರಗಳು

ಶಾಲೆಯ ಮಕ್ಕಳು
ಒಗಟಿನ ರಾಣಿ
ಕಂಬಳಿಗಾರರು
ಬತ್ತ ಕುಟ್ಟೋರು
ಮಜ್ಜಿಗೆಯೋರು
ಅಡಿಗೆಯವರು
ಬಡಗಿಯರು
ನೀರೆಯರು
ದರ್ಜಿಗಳು
ಕೊಡೆ ವ್ಯಾಪಾರಿ
ದೀಪದ ಮಲ್ಲಿ

# ಒಗಟಿನ ರಾಣಿ

ಕಾಲಾನುಕಾಲದ ನೆನಪಿನ ಆ ನದಿ ಬತ್ತಿ
ಚಿಗುರದೇ ಹೋಯ್ತು ಮನಮನದ ಅಂಗಳದಲ್ಲಿ

ಕನಸಿನ ಹೂಗಳ ಕಲ್ಪನೆಯ ಬಳ್ಳಿ ಕಲ್ಪಕವಲ್ಲೀ...
ಕಾಲಾನುಕಾಲದ ನೆನಪಿನ ಆ ನದಿ ಬತ್ತಿ
ಚಿಗುರದೇ ಹೋಯಿತು ಮನಮನದ ಅಂಗಳದಲ್ಲಿ

ಬಣಬಣ ಬರಡು ಒಳಮನ ಕುರುಡು
ದಿನದಿನ ನೋಡಿ ನಿಟ್ಟುಸಿರಿಟ್ಟು
ಕಲೆತರು ಒಂದೆಡೆ ಕಲೆತರು ಒಂದೆಡೆ
ತಲೆತಲೆ ತಲೆತಲೆ
ತಲೆತಲೆತಲೆತಲೆ
ತಲೆತಲೆಮಾರಿನ
ಪೂರ್ವಿಕರು

ಕಾಮನಾ ಬಿಲ್ಲಿನ ಬಣ್ಣಗಳನ್ನ
ಮಿನುಗುವ ಚುಕ್ಕೆಯ ಕಣ್‌ಬೆಳಕನ್ನ
ಮಿಣುಕು ಹುಳುಗಳ ಮಿಣಿ ಮಿಣಿ ಮಿಂಚನ್ನ
ಎಳೆ ಎಳೆ ಎಳೆ ಚಿಗುರಿನ ಕೋಮಲ ಕನಸನ್ನ
ಬಗೆಬಗೆ ಹೂಗಳ ತರತರ ಗಂಧವನ್ನ
ತಂದರು ತುಂಬಿ ನಂಬಿ
ನಡುನಡುಗುವ ಕೈ ಬೊಗಸೆಗಳಲ್ಲಿ

ಹಗಲು ಇರುಳು ಇರುಳು ಹಗಲು
ಹಗಲೂ ಇರುಳು ಇರುಳೂ ಹಗಲು
ಕಣ್ಣೆವೆ ಮುಚ್ಚದೆ, ಅದ್ದಿತಿದ್ದಿ ಹೊಸೆದು ಬೆಸೆದು
ತೇದಿ ನಾದಿ ಮಾಡಿದರೊಂದು ಮುತ್ತಿನ ಬಾಲೆಯ ಮೂರುತಿಯ
ಮಾಡಿದರೊಂದು ಮುತ್ತಿನ ಬಾಲೆಯ ಮೂರುತಿಯ

ಮರುಜವಣಿಯ ಮುಟ್ಟಿಸಿ ಪ್ರಾಣವ ಹುಯ್ದು
ಬಿಟ್ಟರು ಭೂಮಿಗೆ ಕಲ್ಪನೆ ಬಳ್ಳಿಯ ಚಿಗುರಿಸಲು
ಆ ನೆನಪಿನ ಆ ನೆನಪಿನ ಅ ನೆನಪಿನ ನದಿಯನು ಬದುಕಿಸಲು
ಅವಳೆ ಅವಳೆ ಅವಳೆ ಅವಳೆ ಒಗಟಿನ ರಾಣಿ
ಬರುವಳು ನೋಡಿ, ಬರುವಳು ನೋಡಿ
ತೇಲಿ ತೇಲಿ ತೇಲಿ ತೇಲಿ ಒಗಟಿನ ರಾಣಿ
ಒಗಟಿನ ರಾಣಿ

ರಾಜಕುಮಾರಿ ಒಗಟಿನ ರಾಣಿ
ಎಂದೂ ಮುಗಿಯದ ಒಗಟಿನ ಗಣಿ
ಅವಳ್ ಕುಂತರೆ ಒಗಟೋ...
ಒಗಟೇ ಒಗಟು ಒಗಟೊಗಟು, ಅವಳಿದ್ದ ಕಡೆ
ಅವಳಿದ್ದ ಕಡೆ ಲಲ್ಲಲ್ಲಲಾಲಾ... ಲಲ್ಲಲ್ಲಲಾಲಾ....

(ಶಾಲೆಯ ಮಕ್ಕಳ ಗದ್ದಲ)

ಶಾಲೆಯ ಮಕ್ಕಳು : ಟ್ವಿಂಕಲ್ ಟ್ವಿಂಕಲ್ ಲಿಟ್ಲ್ ಸ್ಟಾರ್
ಹೌ ಐ ವಂಡರ್ ವ್ಹಾಟ್ ಯು ಆರ್
ಅಪ್ ಅಬೌದ ವರ್ಲ್ಡ್ ಸೋ ಹೈ
ಲೈಕ್ ಎ ಡೈಮಂಡ್ ಇನ್ ದ ಸ್ಕೈ

ಒಂದು : ಆಲ್ ನೋಡ್ರೋ...
ಹಾಂ ಹೌದಲ್ರೋ

ಎರಡು : ಯಾರೋ ಆಕಾಶದಿಂದ ತೇಲ್‌ಕೊಂಡು ತೇಲ್‌ಕೊಂಡು ಬರ್‍ತಾ ಇದಾರೆ.

ಮೂರು : ಇದ್ದಾರೆ ಅಲ್ವೋ ಇದ್ದಾಳೆ

ನಾಲ್ಕು : ಹೌದ್ಹೌದು ಬರ್‍ತಾ ಇರೋದು ಹುಡ್ಗಿ

ಐದು : ಅವಳ್ ತಲೆಮೇಲ್ ನೋಡ್ರೋ ಒಂದ್ ಕಿರೀಟ

ಆರು : ಹಾಂ ಹಾಂ ಥಳಥಳಾ ಹೊಳೀತಾ ಇದೆ

ಏಳು : ಅವಳ್ ಮೈಮ್ಯಾಲ್ ನೋಡ್ರೋ ರಾಶಿರಾಶಿ ಒಡವೆ
ಮುತ್ತು, ರತ್ನ, ವಜ್ರ, ವೈಢೂರ್ಯ, ಅರೆರೆ... ಇಲ್ಲೇ ಬರ್‍ತಾ ಇದ್ದಾಳೆ.

ಗುಂಪು : ಬಂದೇ ಬಿಟ್ಲು

ಒಂದು : ದೇವತೆ ಇದ್ದಂಗೆ ಇದ್ದಾಳೆ ಅಲ್ಲಪ್ಪಾ!

ಎರಡು : ದೇವತೇ? ಹಂಗಂದ್ರೆ ಏನ್ರೋ

ಮೂರು : ಲಾಲಿಪಪ್ಪು–ಕೊಡ್ತೀನಿ ನೋಡು

ನಾಲ್ಕು : ದೇವತೆ ಅಂದ್ರೆ Angel ಕಣೋ Angel

ಐದು : ಕೋಲ್ಗೇಟ್ ಜಲ್ ಅಲ್ಲ

ಆರು : ಏಯ್.... ಬನ್ರೋ ಬನ್ರೋ ಬೇಗ ಹತ್ರ ಹೋಗೋಣ.

ಗುಂಪು : ಹಾಂ. ನಡೀರಿ ನಡೀರಿ.

ಒಗಟಿನ ರಾಣಿ : ಗುಡ್‌ಮಾರ್ನಿಂಗ್

ಗುಂಪು : ವೆರಿ ವೆರಿ ಗುಡ್‌ಮಾರ್ನಿಂಗ್

(ಹಾಡು)

ಚಬ್ಬಿ ಚೀಕ್ಸ್ ಡಿಂಪಲ್‌ಚಿನ್  
ರೋಜಿ ಲಿಪ್ಸ್ ಟೀತ್ ವಿತಿನ್  
ಕರ್ಲಿ ಹೇರ್ ವೆರಿ ವೆರಿ ಫೇರ್  
ಐಸ್ ಆರ್ ಬ್ಲೂ ಲವ್ಲಿ ಟೂ  
ಟೀಚರ್ಸ್ ಪೆಟ್ ಈಜ್‌ದಟ್ ಯೂ?

ಗುಂಪು : ಯಸ್ ಯಸ್ ಯಸ್ ಯಸ್...

ಒಗಟಿನ ರಾಣಿ : ಓ ಓ ಹೋ...ಹೋ...ಹೋ

ಹೌದಾ! ಸರಿ ಹಾಗಾದ್ರೆ ನಿಮ್ ಟೀಚರ್ ನಿಮ್‌ಗೆಲ್ಲ ಏನ್ ಕಲ್ಸಿದಾರೋ ಹೇಳಿ ನೋಡೋಣ...

ಗುಂಪು : ಜಾನಿ ಜಾನಿ ಎಸ್ ಪಾಪಾ  
ಈಟಿಂಗ್ ಶುಗರ್ ನೋ ಪಾಪಾ  
ಟೆಲ್ಲಿಂಗ್ ಲೈ ನೋ ಪಾಪಾ  
ಓಪನ್ ಯುವರ್ ಮೌತ್ ಹಹಹಾ...

ಒಗಟಿನ ರಾಣಿ : ಗುಡ್ ಗುಡ್ ಗುಡ್ ವೆರೀ ಗುಡ್...

ಈಗ್ ನಾನೊಂದು ಒಗಟು ಹಾಕ್ತೀನಿ ಬಿಡಿಸ್ತೀರಾ?

ಮಕ್ಕಳು

ಒಂದು : ಒಗಟು!? ವ್ಹಾಟ್ ಈಜ್ ದಟ್

ಎರಡು : ಹೌ ಇಟ್ ಲುಕ್ಸ್?

ಒಗಟಿನ ರಾಣಿ : ಒಗಟು. ಒಗಟೆಂದ್ರೆ...ಹಾ ರಿಡ್ಲ್ಸ್

ಗುಂಪು : ಓ ರಿಡ್ಲ್ಸ್... ಒಗಟು. ಹಾಕಿ ಹಾಕಿ ಒಗಟು ಹಾಕಿ ಹಾಕಿ

ಮಕ್ಕಳು

ಒಂದು : ನಾನ್ ಬಿಡಿಸ್ತೀನೋ

ಎರಡು : ಇಲ್ಲ ನಾನ್ ಬಿಡಿಸ್ತೀನಿ

ಮೂರು : ಇಲ್ಲ ಎಲ್ಲರಕಿಂತ ಮೊದ್ಲು ನಾನ್ ಬಿಡಿಸ್ತೀನಿ

ನಾಲ್ಕು : ನನ್ನ ಕ್ಲಾಸ್‌ಗೆ ನಾನೇ ಫಸ್ಟ್‌ರ್‍ಯಾಂಕ್

ಐದು : ಇಲ್ಲ ನನ್ ಬಿಡಿಸ್ತೀನಿ, ಎಲ್ಲಾ ಕ್ವಿಜ್‌ಲ್ಲು ನಂಗೇ ಫಸ್ಟ್ ಪ್ರೈಜ್

ಆರು : ನನ್ನ ಕೈಯಲ್ಲಿ ಬಿಡಸಾಕಾಗಲ್ಲಪ್ಪ

ಏಳು : ಲೋ ಪೆದ್ದು ಅದೇನ್ ಮಹಾ ಕಷ್ಟಾ ಅಲ್ವೋ, ನೀನೂ ಬಿಡಸ್ಬೋದು ನಿಮ್ಮನೆಯಲ್ಲಿ ನಾಯಿಮರಿ ಕೂಡ ಬಿಡಸ್ಬೋದು.

ಎಂಟು : ಹೌದ...ಹಾಗಾದ್ರೆ ನಾನೂ ಒಂದು ಕೈ ನೋಡ್ತೀನಿ ಹಾಕು ಹಾಕು.

ಗಂಪು : ಹೂಂ...ಹಾಕು

ಒಗಟಿನ ರಾಣಿ : ಓಕೆ ಓಕೆ ಓಕೆ<br>
ಬಿಳಿಮೋಡ ಮುಳುಗೈತೆ<br>
ಕರಿಮೋಡ ತೇಲೈತೆ<br>
ಒಳಗೊಂದು ಹಕ್ಕಿ ಅಡಗೈತೆ

ಮಕ್ಕಳು

ಒಂದು : ಏಯ್ ಫಸ್ಟ್ ರ್‍ಯಾಂಕು, ಯಾಕ್ ಸುಮ್ನಾಗ್‌ಬಿಟ್ಟೆ, ಬಿಡ್ಸೋ...

ಎರಡು : ಸಾರಿ ಗುರು, ಯಾಕೋ ಎಷ್ಟು ಯೋಚ್ನೆ ಮಾಡಿದ್ರೂ ಏನೂ ಹೊಳೀತಾ ಇಲ್ಲ

ಮೂರು : ನಂಗೂ ಹೊಳೀತಾನೇ ಇಲ್ಲ, ಏಯ್ ಕ್ವಿಜ್ಜೂ ನೀನ್ ಬಿಡ್ಸೇ

ನಾಲ್ಕು : ಕ್ವಿಜ್ ಆಗಿದ್ರೆ ಬಿಡಿಸ್ತಾ ಇದ್ದೆ, ಏನ್ ಮಾಡ್ಲಿ, ಏನೂ ಹೊಳೀತಾನೇ ಇಲ್ಲ. ಯಾವ ಸೀಮೇ ಹಕ್ಕೀನಪ್ಪಾ!

ಐದು : ಏಯ್ ನಿನ್‌ಗೇನಾದ್ರು ಹೊಳೀತೇನೋ?

ಆರು : ಅವನ್ನೆಲ್ಲಿ ಹೊಳೆದಿರುತ್ತೆ, ಅವನು ಮೊದ್ಲೇ ದಡ್ಡಾ

ಏಳು : ಹೌದಪ್ಪಾ...ನಾನ್ ದಡ್ಡಾ, ಈಗ ನೀವೆಲ್ರೂ ದಡ್ಡರಾಗಿದ್ದೀರಲ್ಲಾ ಯಾಕೆ?

ಎಂಟು : ಆ ದೇವರಿಗೇ ಗೊತ್ತು

ಒಂಬತ್ತು : ನೀವೇ ಹೇಳಿಬಿಡಿ ಸಿಸ್ಟರ್

ಒಗಟಿನ ರಾಣಿ : ಹೇಳ್‌ಬಿಡ್ಲಾ! ಕಣ್ಣು.

ಗುಂಪು : ಓ.....ಅಯ್ (eye)

ಒಗಟಿನ ರಾಣಿ : ಯಸ್ ಕಣ್ಣನ್ನೋಡಿ... ಬಿಳಿಮೋಡ ಮುಳುಗೈತೆ
ಕರೀಮೋಡ ತೇಲೈತೆ
ಒಳಗೊಂದು ಹಕ್ಕಿ ಅಡಗೈತೆ ಅಂದ್ರೆ
ಕಣ್ಣಿನ ಪಾಪೆ ತಿರುಗುತ್ತೆ. ನೋಡಿ ಅದೇ ಹಕ್ಕಿ.

ಗುಂಪು : ಓ... ಬ್ಯೂಟಿಫುಲ್... ಚೆನ್ನಾಗಿದೆ. ಚೆನ್ನಾಗಿದೆ. ನಂಗೆ ಮೊದ್ಲೇ ಗೊತ್ತಿತ್ತು.
ಆದ್ರೆ ಹೇಳ್‌ಲಿಲ್ಲ ಅಷ್ಟೇ

ಒಂದು : ಹೌದಾ! ಈಗ್ಹೇಳು, ಅಕ್ಕ ಇನ್ನೊಂದು ಒಗಟ್ಹಾಕ್ತಾರೆ.

ಗುಂಪು : ಹೌದ್ಹೌದು... ಹಾಕು... ಹಾಕು...

ಒಗಟಿನ ರಾಣಿ : ಓಕೆ ಓಕೆ ಓಕೆ...
ಚಿಕ್ಕಮನೆಗೆ ಚೆಕ್ಕೆ ತುಂಬಿವೆ
ಚಿಕ್ಕ ಮನೆಗೆ ಚೆಕ್ಕೆ ತುಂಬಿವೆ
ಚಿಕ್ಕ ಮನೆಗೆ ಚೆಕ್ಕೆ ತುಂಬಿವೆ ಹೇಳಿ ನೋಡೋಣ ಇದನ್ನಾ!

ಮಕ್ಕಳು

ಒಂದು : ಏನಪ್ಪಾ ಇದು, ತಲೆಬುಡ ಒಂದೂ ಗೊತ್ತಾಗ್ತಿಲ್ಲಾ.

ಎರಡು : ಎಲ್ಲಾರಿಗಿಂತ ಮೊದ್ಲು ಬಿಡಿಸ್ತೀನಿ ಅಂತ ಜಂಬಾ ಕೊಚ್ತಿದ್ದೆ.

ಮೂರು : ದೊಡ್ಡ ಮನೇಗೆ ಆಗಿದ್ರೆ ಬಿಡಿಸ್ತಿದ್ದೇ...

ನಾಲ್ಕು : ಹೌದು ಹೌದು ಬಿಡಿಸ್ತಿದ್ದೆ... ರವೆ ಉಂಡೆ

ಐದು : ಹೋಗ್ಲಿ... ನೀನ್ ಬಿಡಿಸೋ.

ಆರು : ಹೂಂ.... ಹೂಂ ಸಾರಿ ಗುರು

ಏಳು : ಅಕ್ಕಾ, ನಾನೊಬ್ಬನೇ ದಡ್ಡಾ ಅಲ್ಲ... ಎಲ್ಲರೂ ದಡ್ಡರೇ. ಹೋಗ್ಲಿ ನೀನೇ
ಬಿಡ್ಸಕ್ಕಾ...

ಗುಂಪು : ಹೌದೌದು ನೀನೇ ಬಿಡ್ಸಕ್ಕಾ, ಬಿಡ್ಸು...

ಒಗಟಿನ ರಾಣಿ : ಆಯಿತು... ಆಯಿತು ಆಯಿತು...ಬಾಯಿ ಚಿಕ್ಕ ಮನೆ. ಅದರಲ್ಲಿರೋ ಹಲ್ಲುಗಳೇ ಚೆಕ್ಕೆಗಳು.

ಗುಂಪು : ಓ... ಬಾಯಿನಾ! ಅಕ್ಕಾ ಅಕ್ಕಾ. ಇನ್ನೊಂದು ಒಗಟು ಹೇಳ್ ಕೊಡಕ್ಕಾ, ಪ್ಲೀಜ್.

ಒಗಟಿನ ರಾಣಿ : ಓಕೆ ಓಕೆ, ಓಕೆ.
ಅಣ್ಣಾ ತಮ್ಮ ಇಬ್ಬರ ಮನೆಗೂ ಒಂದೇ ಗೋಡೆ

ಗುಂಪು : ಎರಡು ಮನೆ ಒಂದೇ ಗೋಡೆ
ಮನೆ ಎರಡು ಗೋಡೆ ಒಂದೇ

ಒಂದು : ಓ... ಚೈನಾ ವಾಲ್ ಆ...

ಒಗಟಿನ ರಾಣಿ : ಅಲ್ಲಾ... ಅದು ನಿಮ್ಮಲ್ಲೇ ಇದೆ, ನಿಮ್ಮುಖದಲ್ಲೇ ಇದೆ.

ಗುಂಪು : ನಮ್ಮುಖದಲ್ಲಾ! ಎಲ್ಲಿ? ಎಲ್ಲಿ?
ನೋ.... ನೋ.... ನೋ.... ನೀನೇ ಹೇಳಕ್ಕಾ.... ಪ್ಲೀಜ್.

ಒಗಟಿನ ರಾಣಿ : ಹೇಳ್‌ಲಾ!? ಮೂಗು.

ಗುಂಪು : ಓ... ಮೂಗಾ?!

ಒಗಟಿನ ರಾಣಿ : ಹೂಂ... ಮುಟ್‌ನೋಡ್ಕೊಳ್ಳಿ. ಎರಡು ಮನೆ ಈ ಎರಡು ಹೊಳ್ಳೆಗಳು, ಎರಡಕ್ಕೂ ಮಧ್ಯದಲ್ಲಿರೋ ದಿಂಡೇ ಗೋಡೆ.

ಗುಂಪು : (ನಗುತ್ತಾ) ಹೌದಲ್ರೋ...

ಒಂದು : ಅಕ್ಕಾ ಅಕ್ಕಾ, ನಾವು ನಿಮ್ ಜೊತೆ ಬರ್ತೀವೇ, ನಮ್ಮನ್ನ ಕರಕೊಂಡ್ ಹೋಗೆ.
ಪ್ಲೀಜ್, ಕರಕಂಡು ಹೋಗೆ.

ಗುಂಪು : ಯಾಕೋ?

ಒಂದು : ಹೋಮ್‌ವರ್ಕ್ ಮಾಡ್ಬೇಕು, ಅದಕ್ಕೇ...

ಎರಡು : ಇದೂ ಒಂದು ಹೋಂ ವರ್ಕ್ ತಾನೆ.

ಮೂರು : ಏನು ನೀನೊಬ್ಬನೇನಾ ಹೋಂವರ್ಕ್ ಮಾಡೋನು, ನಡಿಯೋ.

ನಾಲ್ಕು : ಅವನು ಬರ್ದೆ ಇದ್ರೆ ಕತ್ತೆಬಾಲ, ಕುದುರೆ ಜುಟ್ಟು, ನಾವು ಹೋಗೋಣ ನಡೀರೋ

ಐದು : ಕಮಾನ್ ಫ್ರೆಂಡ್ಸ್...

ಆರು : ನೀನು ಇಲ್ಲೇ ಇರು, ಕತ್ತೆ ಕಿರುಬ ಬಂದು ನಿನ್ನನ್ನ ಹೊತ್ಕೊಂಡು ಹೋಗುತ್ತೆ...

ಏಳು : ಅಯ್ಯಯ್ಯೋ ಬೇಡಪ್ಪಾ, ನಾನೂ ಬರ್ತೀನಿ ನಡೀರೋ..

ಎಂಟು : ಅಕ್ಕ ಅಕ್ಕಾ, ನಿನ್ಗೆ ಬರೋ ಎಲ್ಲ ಒಗಟು ನಮ್ಗೂ ಹೇಳ್‌ಕೊಡಕ್ಕಾ.

ಗುಂಪು : ಪ್ಲೀಜ್... ಹೇಳ್‌ಕೊಡೇ...

ಒಗಟಿನ ರಾಣಿ : ಆಯಿತು ಆಯಿತು ಆಯಿತು.

ಮಕ್ಕಳು

ಒಂದು : ಏಯ್ ಅಕ್ಕಾ, ಒಪ್ಪಿಕೊಂಡ್ಲು ಅಕ್ಕ ಒಪ್ಪಿಕೊಂಡ್ಲು

ಎರಡು : ಬನ್ನಿ ಬನ್ನಿ ಹೋಗೋಣ
ಎಲ್ಲಾ ಒಗಟು ಕಲಿಯೋಣ
ಸೋಲ್ಲಿ ಖುಷಿ ಪಡೋಣ

ಮೂರು : ಏಯ್ ಅಕ್ಕಾ, ಮೊದ್ಲು ಯಾವ ಕಡೆ ಹೋಗೋಣ?

ನಾಲ್ಕು : ಈ ಕಡೆ...

ಐದು : ಬೇಡ ಆ ಕಡೆ...

ಆರು : ಬೇಡ ಕಂಬ್ಳಿ ನೇಯ್ತಾ ಇದ್ದಾರೆ ಅಲ್ಲಿ ಆ ಕಡೆ ಹೋಗೋಣ.

(ಹಾಡು)

ಲಲಲ.... ಲಾಲಾಲಾ.... ಲಲಲಲ...... ಲಾಲಾಲಾ....
ರಾಜಕುಮಾರಿ ಒಗಟಿನ ರಾಣಿ
ಎಂದೂ ಮುಗಿಯದ ಒಗಟಿನ ಗಣಿ
ಒಗಟೇ ಒಗಟೋ ನಿಂತರೆ ಒಗಟು
ಅವಳ್ ಕುಂತರೆ ಒಗಟೋ
ಒಗಟೇ ಒಗಟು ಒಗಟೊಗಟು ಅವಳಿದ್ದ ಕಡೆ.
ಅವಳಿದ್ದ ಕಡೆ...
ಲಲ್‌ಲಾಲಾ ಲಾಲಾ... ಲಲ್‌ಲಾ...
ಜೇನಿನ ಹಿಂಡೋ ಇರುವೆಯ ಸಾಲೋ–
ಗಿಜಿಗಿಜಿ ಗಿಜಿಗಿಜಿ ಗಿಜಿಗಿಜಿ ಗಿಜಿಗಿಜಿ ಗಿಜಿ...
ಗೆಳೆಯರ ಗುಂಪು ಗೆಳೆಯರ ಗುಂಪು
ಲಲ್‌ಲಾಲ ಲಾಲಾಲಾ ಲಾಲಾಲಾ ಲಾ...
ಕಂಬಳಿ ನೇಯುವ ಅಲ್ಲಿಗೆ ಹೋಗಿ ಹಾಕುವಳೊಂದು ಒಗಟನ್ನ

ಒಗಟಿನ ರಾಣಿ : ಏ ಏ ಏ...ಒಂದ್ ಒಗಟು ಹಾಕ್ತೀನಿ. ಬಿಡಿಸ್ತೀರಾ?

ಕಂಬಳಿಗಾರ : ಓಹೋ... ಒಗಟು! ಹಾಕು ಒಗಟು

ಒಗಟಿನ ರಾಣಿ : ಜಾಡ್ಸ್ ಕಂಬ್ಳಿ ಝಡಾಯ್ಸ್ ಕಂಬ್ಳಿ
ದೇಶಕ್ಕೆಲ್ಲಾ ಒಂದೇ ಕಂಬ್ಳಿ

ಕಂಬಳಿಗಾರರು

ಮೊದಲನೆಯವ : ದೇಶಕ್ಕೆಲ್ಲಾ ಒಂದೇ ಕಂಬ್ಳಿ?!

ಎರಡನೆಯವ : ಅಷ್ಟಗಲಾ ! ಅಷ್ಟುದ್ದಾ! ಅದ್ಯಾವ್ ಮನೆಹಾಳ್ ಕಂಬ್ಳೀನೋ ಮಾರಾಯ.

ಮೂರನೆಯವ : ಶಿವಶಿವಾ ಯಾವ ಹುತ್ತದಲ್ಲಿ ಯಾವ ಹಾವೋ!?

ನಾಲ್ಕನೆಯವ : ಹೂಂ... ಬಿಡ್ರಪ್ಪಾ. ಬಿಡ್ರಿ..

ಒಗಟಿನ ರಾಣಿ : ಕಂಬಳಿ ನೇಯುವ ಕೈಗಳು
ಎಲ್ಲವು ಕಿತ್ತವು ನೆತ್ತಿಯ ಕೂದಲನು
ಕೆರೆದರೂ ಕಿತ್ತರೂ ಹೊಳೆಯದೆ ಉತ್ತರ
ಬೆಪ್ಪ ಬ್ಬೆ ಬ್ಬೆ ಬ್ಬೆ... ತೊದಲಿದರು

ಒಗಟಿನ ರಾಣಿ : ಗೊತ್ತಿಲ್‌ವಾ... ಅಷ್ಟೂ ಗೊತ್ತಿಲ್‌ವಾ!
"ದೇಶಕ್ಕೆಲ್ಲಾ ಒಂದೇ ಕಂಬಳಿ ನೆತ್ತಿ ಮೇಲಿನ ಆಕಾಶ'

ಕಂ. ಗುಂಪು : ಛೆ! ಹೌದಲ್ಲೋ ಸೋತ್‌ವಲ್ಲಪ್ಪಾ
ಅಂಗೈ ತೋರ್ಸಿ ಅವ್ ಲಕ್ಷಣ ಅನ್‌ಸ್ಕೊಂಡಂಗಾಯಿತಲ್ಲಪ್ಪಾ

ಮಕ್ಕಳು : ಅಕ್ಕಾ ಈವಾಗ್ಯಾವ್ ಕಡೆ? ಅಗೋ ಅಲ್ಲಿ ಬತ್ತಾ ಕುಟ್ತಾ ಇದ್ದಾರೆ. ರೈಟ್ ರೈಟ್.

(ಹಾಡು)

ಲಲ್‌ಲಲ್‌ಲಾಲಲ್... ಲಾಲಲಲಾಲಾಲಾ... ಲಲ್‌ಲಲ್‌ಲಾಲಾಲಾ
ಬತ್ತ ಕುಟ್ಟುವ ಅಲ್ಲಿಗೆ ನಡೆದರು ಹಾಕಿದರಲ್ಲೂ ಒಗಟನ್ನ...

ಮಕ್ಕಳು : ನಮಸ್ಕಾರ.

ಬತ್ತ ಕುಟ್ಟೋರು : ಶರಣು

ಮಕ್ಕಳು : ನಮ್ಮಕ್ಕಾ ಒಂದು ಒಗಟು ಹಾಕ್ತಾರೆ. ಅದನ್ನ ಬಿಡಿಸ್ತೀರಾ?

ಬತ್ತ ಕುಟ್ಟೋರು : ಓಹೋ... ದಂಡಿಗೆದರಲಿಲ್ಲ ದಾಳಿಗೆದರಲಿಲ್ಲ, ಇನ್

ಮೊದಲ್ನೆಯವಳು : ಇನ್ ನಿಮ್ಮಕ್ಕನ್ ಒಗಟಿಗೆ ಹೆದರ್‌ತೀವಾ.

ಎರಡನೆಯವಳು : ಅದ್ಸರಿ ಒಗಟು ಬಿಡಿಸಿದ್ರೆ ಏನ್ ಕೊಡ್‌ತೀರಾ?

ಒಗಟಿನ ರಾಣಿ : ಚಿನ್ನದ ಉಂಗುರ ಕೊಡ್ತೀನಿ, ನನ್ ಮುತ್ತಿನ ವಾಲೇನೂ ಕೊಡ್ತೀನಿ.

ಬತ್ತ ಕುಟ್ಟೋರು : ಹಾಂ.. ಚಿನ್ನದ ಉಂಗ್ರಾ! ಮುತ್ತಿನ ವಾಲೆ!
ಹಾಕು ಹಾಕು ಹಾಕು.

ಒಗಟಿನ ರಾಣಿ : ಬೆಳ್ಳಿ ಕಡಗ ಹಾಕವ್ಳೆ
ಬರ್‍ರ್ಂತಾ ಬರ್‍ತಾಳೆ ಸರ್‍ರ್ಂತಾ ಹೋಗ್ತಾಳೆ
ಸಣ್ಣ ಮುಖದೋಳು ನುಣ್ಣನೆ ಮೈಯೋಳು

ಮಕ್ಕಳು : ಯಾರವಳು? ಯಾರವಳು?
ಯಾರವಳು? ಯಾರವಳು!
ಯಾರವಳು? ಯಾರವಳು? ಯಾರವಳು ಯಾರವಳು ಯಾರವಳು?

ಬತ್ತ ಕುಟ್ಟೋರು : ಯಾರವ್ವ ಈ ರಂಬೆ!? ಮುಖ ಸಣ್ಣ ಮೈ ನುಣ್ಣಾ!?
ಇದ್ಯಾರಿರಬಹುದೆ ಯವ್ವಾ ಈ ಬಿದರೆ ಮೇಲಿನ ಚದುರೆ?!
ಯಾರವಳು? ಯಾರವಳು? ಬೇಗ ಹೇಳ್ರೆ...

ಮಕ್ಕಳು : ಯಾಕ್ರವ್ವಾ ಎಲ್ಲಾ ಸುಮ್ನಾಗೋದ್ರಿ, ಗಪ್‌ಚಿಪ್ ಆಗೋದ್ರಿ..
ಹೂಂ ಹೇಳ್ರಿ, ಒಗಟು ಒಡೀರಿ, ತೌಡು ಕುಟ್ರಿ

(ಹಾಡು)
ಒನಕೆ ಕುಟ್ಟುವ ಕೈಗಳು ಸೋತವು ಬಾಡಿತು ಮುಖವು
ಕುಟ್ಟಿದ ತೌಡನು ಮುಕ್ಕಿದ ಹಾಗೆ

ಒಗಟಿನ ರಾಣಿ : ಅಯ್ಯೋ ಅಷ್ಟು ಗೊತ್ತಾಗ್ಲಿಲ್ಲವಾ! ಅದು ನಿಮ್ ಕೈಯಲ್ಲೇ ಇರೋ ಒನಕೆ.

ಬತ್ತ ಕುಟ್ಟೋರು : ಹಾಂ...!

ಒಗಟಿನ ರಾಣಿ : ಕೈಯಲ್ಲಿರುವುದೇ ಅದಲ್ಲವೇನು ಬೆಳ್ಳಿ ಕಡಗ,
ನುಣ್ಣನೆ ಮೈ, ಸಣ್ಣ ಮುಖವು
ಬರ್‍ರ್ಂತಾ ಬರ್‍ತಾಳೆ ಸರ್‍ರ್ಂತಾ ಹೋಗ್ತಾಳೆ

ಬತ್ತ ಕುಟ್ಟೋರು : ಅಯ್ಯೋ ಸೋತೇ ಹೋದ್ವಲ್ಲೇ ಅಕ್ಕಾ,
ಉಂಗ್ರಾನೂ ಪೋಯಾ ವಾಲೇನೂ ಪೋಯಾ.
ಕೈಗೆ ಬಂದ್ ತುತ್ತು ಬಾಯೀಗೆ ಬರ್‍ದೆ ಹೋಯಿತಲ್ರೇ...

ಮಕ್ಕಳು : ತೌಡು ಕುಟ್ರಿ... ಅಕ್ಕಾ ಅಗೋ ಅಲ್ಲಿ ತೋಟ. ಹೂವಿನ ತೋಟ.
ಅಲ್ಲಿಗ್ಹೋಗೋಣ್ವಾ?

ಒಗಟಿನ ರಾಣಿ : ಕಮಾನ್
ಲಲ್‌ಲಲ್‌ಲಾಲ್‌ಲಾಲಾಲಾ ಲಾಲ ಲಾಲ ಲ...

ಮಕ್ಕಳು : ಆಹಾ.... ಘಮಘಮಾ ವಾಸ್ನೆ
ನೂರಾರು ತರದ ಹೂಗಳು.

ತೋಟದ ಮಾಲಿ : ಏಯ್... ಯಾರೋ ಅದು, ಯಾರೋ ಅದು ಹೂ ಕೀಳ್ತಾ ಇರೋದು?

ಮಕ್ಕಳು : ಅಕ್ಕಾ ಅಗೋ ಅಲ್ಲಿ ಮಾಲಿ, ಹಾಕು ಒಗಟು...

ಒಗಟಿನ ರಾಣಿ : "ಮಾಲಿ ಮಾಲಿ ಮಂಜಣ್ಣ
ಮಲ್ಲಿಗೆ ಬೆಳೆಯುವ ಓ ಅಣ್ಣ
ಗುಲಾಬಿ ತೋಟದ ಗಂಗಣ್ಣ
ಈ ಒಗಟೊಂದ ಬಿಡಿಸಣ್ಣ

ಮಾಲಿ : ಏನು ಒಗಟಾ! ಆಡು ಮುಟ್ದಿರೋ ಸೊಪ್ಪಿಲ್ಲ,
ನಾನ್ ಬಿಡಿಸದಿರೋ ಒಗಟಿಲ್ಲ,
ಹೂ ಎತ್ತಿದಷ್ಟು ಸಲೀಸಾಗಿ ನಿನ್ನ ಒಗಟನ್ನ ಒಡೀತೀನಿ, ಒಗಾಯ್ಸು.

ಒಗಟಿನ ರಾಣಿ : ಹಗಲೆಲ್ಲಾ ಹಾಳ್ ತೋಟ
ರಾತ್ರಿ ಹೂವಿನ ತೋಟ
ಹೂ ಕೊಯ್ಯೋರಿಲ್ಲ ಹೂ ಮುಡಿಯೋರಿಲ್ಲ
ಇದು ಯಾವ ತೋಟ ಹೇಳು?

ಮಾಲಿ : ಯಾವ ತೋಟ? ಯಾವ ತೋಟ?
ಒಳ್ಳೆ ಆಡ್ಕೋಳ್ಳೋರ್ ಮುಂದೆ ಜಾರಿ ಬಿದ್ದಂಗಾಯ್ತಲ್ಲ...
ಅವ್ವಾ ನನಗೇನೂ ಗೊತ್ತಾಗಾಕಿಲ್ಲ ಕಣವ್ವಾ, ನೀನೆ ಹೇಳ್‌ಬಿಡು...

ಒಗಟಿನ ರಾಣಿ : ಗೊತ್ತಾಗ್‌ಲಿಲ್ವಾ? ಹೂಂ... ಅಷ್ಟೂ ಗೊತ್ತಾಗ್‌ಲಿಲ್ವಾ?
"ರಾತ್ರಿ ಆಕಾಶ, ಚುಕ್ಕೆಗಳೇ ಹೂತೋಟ"
ಹಗಲೂ ಆಕಾಶ ಹಾಳು ತೋಟ
ರಾತ್ರೀಗೆ ಅರಳುವ ಕೋಟಿ ಕೋಟಿ ಹೂಗಳ ತೋಟ
ಕೋಟಿ ಕೋಟಿ ಚುಕ್ಕೆಗಳು ಹೂಗಳಲ್ಲವೇ?
ಹೂಗಳಲ್ಲವೇ?

ಮಾಲಿ : ಸೋತೆವು ನಾವು ಒಯ್ಯಿರಿ ಹೂವು
ಒಯ್ಯಿರಿ ಹೂವು ಹುಡಿ ಮುಡಿಯಲ್ಲಿ, ಹುಡಿ ಮಡಿಲಲ್ಲಿ
ಒಗಟಿನ ರಾಣಿ ಆಗಲಿ ಇಂದು ಹೂವಿನರಾಣಿ

ಹುಡುಗ : ಆಹಾ... ಅಕ್ಕಾ ನೀನೀಗ ಘೂಲೋಂಕಿ ರಾಣಿ,
ಸೌಂದರ್ಯ ಸ್ಪರ್ಧೆಗೂ ಹೋಗಬಹುದು.
ಹೌದ್ಹೌದು... ಅಕ್ಕಾ ಅಗೋ ಅಲ್ಲಿ ಮಡಕೆ ಮಾಡ್ತಾ ಇದ್ದಾರೆ.

ಇನ್ನೊಬ್ಬ : ಲೋ ಪೆದ್ದಾ, ಮಡಕೆ ಮಾಡ್ತಾ ಇಲ್ವೋ, ಮಜ್ಜಿಗೆ ಕಡೀತಿದ್ದಾರೆ.

ಹುಡುಗ : ಮಜ್ಜಿಗೇನಾ! ಸರಿ ಸರಿ ಅಲ್ಲಿಗ್ಹೋಗೋಣ್ವಾ? ಓ...ಓ...

ತಂಡ : ಲಲ್‌ಲಲ್‌ಲಲ್ ಲಾಲಾಲಾ ಲಲ್ ಲಾಲಾಲಾಲಾಲಲಾಲ...
"ಮಜ್ಜಿಗೆ ಕಡೆಯುವ ಅಲ್ಲಿಗೆ ನಡೆದರು
ಹಾಕಿದರೊಂದು ಒಗಟನ್ನ"

ಮಜ್ಜಿಗೆಯೋರು : ಓಹೋಹೋ... ಒಗಟಿನ ರಾಣಿ ನೀನೇನಾ?
ಎಲ್ಲಾರಿಗೂ ಒಗಟು ಹಾಕಿ ಸೋಲ್‌ಸ್ತಾ ಇದ್ದೀಯಂತೆ!

ಮಕ್ಕಳು : ಹೌದು

ಮಜ್ಜಿಗೆಯೋರು : ಹೌದಾ! ಪರವಾಗಿಲ್ವೆ, ಜೋರಾಗಿದ್ದೀಯಾ?! ನಿನ್ ಬಡಾಯಿ ನೋಡಿದ್ರೆ ಕಡಾಯಿ ಗಾತ್ರ, ಕಡಾಯಿಯಲ್ಲಿ ಒಕ್ಕಳು ರಾಗೀನು ಇಲ್ವಂತೆ. ನಿನ್ ಸಿಂಗಾರ ನೋಡ್‌ದ್ರೆ ಜೋರಾಗಿಯೇ ಇದೆ. ಎಲ್ಲಿ ಒಂದ್ ಒಗಟ್ಹಾಕು ನೋಡೋಣಾ!

ಮಕ್ಕಳು : ಅಕ್ಕಾ... ಹಾಕು... ಹಾಕು...

ಒಗಟಿನ ರಾಣಿ : ಕರೇಗುಡಿ ಬಿಳಿದ್ಯಾವ್ರು ಬೊಕ್ಕತಲೆ ಪೂಜಾರಿ
ಗುಡಿಯೊಳಕ್ಕೆ ಹೊಕ್ಕಂಡು ಸರ್‌ಬರ್ ಸರ್‌ಬರ್
ಸರ್‌ಬರ್ ಸರ್‌ಬರ್ ಮಂತ್ರ ಹೇಳ್ತಾನೆ ಪೂಜೆ ಮಾಡ್ತಾನೆ.

ಗುಂಪು : ಮಂತ್ರ ಹೇಳ್ತಾನೆ... ಪೂಜೆ ಮಾಡ್ತಾನೆ.
ಏನದು? ಯಾರವನು?
ಏನದು ಏನದು ಏನದು ಏನದು ಯಾರವನು?

ಮಜ್ಜಿಗೆಯೋರು : ಏನದು! ಏನದು ! ಛೆ... ನಮ್ ಹಗ್ಗಾನೆ ಕೊಟ್ಟು ನಮ್ ಕೈನ ನಾವೇ ಕಟ್‌ಸ್ಕೊಂಡಾಯಿತಲ್ಲಾ... ಅಯ್ಯೋ ಒರಳಲ್ಲಿ ತಲೆ ಮಡ್ಗಿ ಒನಕೇಲಿ ಇಕ್ಕುಸ್ಕೊಂಡಂಗಾಯ್ತು.

ತಂಡ : ಮಜ್ಜಿಗೆ ಕಡಿಯುವ ಕೈಗಳು ಸೋತವು
ತಿಣಿಕಿದರೂನು ತಿಳಿಯದೆ ಉತ್ತರ
ಹುಳಿಮಜ್ಜಿಗೆಯಾದವು ಮುಸುಡಿಗಳು

ಮಕ್ಕಳು : ನೋಡಿದ್ರಾ ಕ್ಯಾಭಿನ್ನೈ ಆಗೋದ್ರಿ
ಅಕ್ಕಾ ಹೋಗ್ಲಿ ನೀನೇ ಬಿಡ್ಸು... ಹೂಂ...

ಒಗಟಿನ ರಾಣಿ : ಕರ್ರನೆ ಗುಡಿಯು ಈ ಮಡಕೆ
ಬಿಳಿದ್ಯಾವ್ರೇ ಮಜ್ಜಿಗೆಯು
ಬೊಕ್ಕೆ ಬುಲ್ಡೆ ಪೂಜಾರಿ ಇವನೇ, ಇವನೇ ಈ ಕಡೆಗೋಲು
ಸರ್‌ಬರ್ ಪೂಜೆ ಕಡೆಯೋದು

ಮಕ್ಕಳು : (ಸಂತೋಷದಿಂದ) ಸೋತಿರಿ ಸೋತಿರಿ ಸೋತಿರಿ...

ಒಗಟಿನ ರಾಣಿ
ತಂಡ : ಹಾಲುಬೆಣ್ಣೆ ಮೊಸರು ಮಜ್ಜಿಗೆ
ಕುಡಿಕೆ ಕುಡಿಕೆ ಕೊಡ್ರೀಗ
ಗೆದ್ದವರೆಲ್ಲಾ ಮುಕ್ಕುವೆವು, ಗೆದ್ದವರೆಲ್ಲಾ ಮುಕ್ಕುವೆವು

ಮಕ್ಕಳು
ಒಂದು : ಏಯ್ ಸಾಕು ಸಾಕು ಮುಂದೆ ನಡೀರಿ

ಎರಡು : ಏನಪ್ಪಾ ಇದು ಘಮ ಘಮ.

ಮೂರು : ಓಹೋ... ಅಡಿಗೆ ಮಾಡ್ತಾ ಇದ್ದಾರೆ.

ನಾಲ್ಕು : ಹಪ್ಪಳಾ ಸುಡ್ತಾ ಇದ್ದಾರೆ.

ಐದು : ಅಕ್ಕಾ ಅಕ್ಕಾ ಅಲ್ಲಿಗ್ಹೋಗೋಣ. ನಡಿಯಕ್ಕಾ

ಗುಂಪು : ಭಲೋ ಭಲೋ...

ತಂಡ : ಲಲ್‌ಲಲ್‌ಲಲ್‌ಲಲ್‌ಲಾಲಾಲಾ... ಲಾಲಾಲಾ... ಲಲಾ...
ಅಡಿಗೆ ಮಾಡುವ
ಅಡಿಗೆ ಮಾಡುವ ಅಲ್ಲಿಗೆ ನಡೆಯಿತು
ಒಗಟಿನ ರಾಣಿಯ ಆ ದಂಡು.
ಹಾಕಿತು ಅಲ್ಲೂ ಅಂದದ ಚಂದದ ಒಗಟೊಂದು

ಒಗಟಿನ ರಾಣಿ : ಅಕ್ಕ ಅಕ್ಕ ಅಕ್ಕ... ಒಂದೇ ಒಂದು ಒಗಟು ಹಾಕ್ತೀನಿ ಬಿಡಿಸ್ತೀಯಾ?

ಅಡಿಗೆಯವರು : ಓಹೋ... ಆಹಾ...

ಒಗಟಿನ ರಾಣಿ : ಚಿಕ್ಕಕ್ಕ ಚಿಕ್ಕಕ್ಕ ಚಿಕಚಿಕಚಿಕಚಿಕಚಿಕ್ಕಕ್ಕ
ಚಿಕ್ಕಕ್ಕನಿಗೆ ಹೊಟ್ಟೆದಪ್ಪ ದಪ್ಪದಪ್ಪ ದಪ್ಪ ದಪ್ಪ
ಆದ್ರೆ ಪುಕ್ಕ ಮಾತ್ರ ಉದ್ದಾ

ಅಡಿಗೆಯವರು : ಹಾಂ!... ನನ್ನೊಟ್ಟೆ ದಪ್ಪಾನಾ!
ಪುಕ್ಕ ಮಾತ್ರ ಉದ್ದಾನಾ ! ತೋರ್ಸ್ತೀನಿ ತಾಳು...

ಒಗಟಿನ ರಾಣಿ ತಂಡ : ಒಗಟನು ಬಿಡಿಸದೆ ಸೋತಕ್ಕ
ಘಟ್ಟಿಸಬಂದಳು ಸಟ್ಟುಗ ಹಿಡಿದು

ಒಗಟಿನ ರಾಣಿ : ಅಯ್ಯಯ್ಯೋ ಅದು ನೀನಲ್ಲಕ್ಕ... ಒಗಟು, ಒಗಟು ಬಿಡ್ಸು

ಅಡಿಗೆಯವರು : ಓ... ಒಗಟು! ಹಂಗನ್ನು ಮತ್ತೆ... ಏಯ್ ಬಿಡಿಸ್ರೇ ಬಿಡಿಸ್ರೇ
'ಹೊಟ್ಟೆ ದಪ್ಪ ಪುಕ್ಕ ಉದ್ದಾ' ಇವಳ್ಯಾರಮ್ಮ ಮಾರಾಯಿತಿ!

ಒಗಟಿನ ರಾಣಿ ತಂಡ : ಸಟ್ಟುಗ ಹಿಡಿದ ಕೈಗಳವು
ತೇಲಿ ಮುಳುಗಿ ತಿರುವಿದರೂ
ಹೊಳೆಯದೆ ಹೋಯಿತು ಉತ್ತರವು

ಅಡಿಗೆಯವರು
ಮೊದಲನೆಯಾಕೆ : ಹೂಂ... ಹೂಂ... ಇಲ್ಲ ನಮಗೆ ಗೊತ್ತಾಗ್ತಾನೇ ಇಲ್ಲ.

ಎರಡನೆಯಾಕೆ : ಅಯ್ಯೋ ಕಣ್ ಕುರುಡಾದ್ರೆ ಬಾಯ್ ಕುರುಡಾ? ನೀನೆ ಹೇಳಕ್ಕ

ಮೂರನೆಯಾಕೆ : ಹೂಂ ಹೂಂ ನನಗೂ ಗೊತ್ತಾಗ್ತಿಲ್ಲ ಕಣವ್ವಾ, ನೀನೇ ಹೇಳಮ್ಮ, ಒಗಟಿನ ರಾಣಿ.

ಒಗಟಿನ ರಾಣಿ : ಚಿಕ್ಕ ಅಕ್ಕ ಇವಳೇನೆ
ಉದ್ದ ಪುಕ್ಕ ಇದುವೇನೆ
ದಪ್ಪ ಹೊಟ್ಟೆ ಇದು ನೋಡೆ
ಸಟ್ಟುಗ ಉತ್ತರ ಹೌದೇನೆ, ಹೌದೇನೆ.

ಅಡಿಗೆಯವರು
ಮೊದಲನೆಯಾಕೆ : ಅಯ್ಯೋ ಹೌದಲ್ರೇ, ಇಷ್ಟೂ ಗೊತ್ತಾಗ್ದೆ ಹೋಯಿತಲ್ರೆ.

ಎರಡನೆಯಾಕೆ : ಚೇಳಿನ ಮಂತ್ರ ಗೊತ್ತಾಗ್‌ದೋನು ಹಾವಿನ ಬುಟ್ಟಿಗೆ ಕೈ ಹಾಕ್ದನಂತೆ
ಹಂಗಾಯ್ತು ನಮ್ ಗತಿ

ಮೂರನೆಯಾಕೆ : ನಮ್ ಬುದ್ದಿಗಿಷ್ಟು ಒಗ್ಗರಣೆ ಹಾಕಾ.

ಒಗಟಿನ ರಾಣಿ : ಸಟ್ಟುಗ ಹಿಡಿದ ಮುಸುಡಿಗಳು
ತಂಡ : ಆದವು ಸೊಟ್ಟಂ ಸೊಟ್ಟಂ ಪಟ್ಟೆ

(ಮಕ್ಕಳು ನಗುತ್ತಾರೆ)

ಒಗಟಿನ ರಾಣಿ : ಅಗೋ ಅಲ್ಲಿ ಬಡಗಿಯವರು ಮನೆ ಕಟ್ತಾ ಇದ್ದಾರೆ, ಅಲ್ಲಿಗ್ಹೋಗೋಣಾ....
ಹೂಂ... ನಡೀರಿ ನಡೀರಿ ಹೋಗೋಣ....

ತಂಡ : ಲಲ್‌ಲಲ್‌ಲಲ್‌ಲಾಲಾಲಾ ಲಾಲಾಲಾಲಾ...
ರಾಜಕುಮಾರಿ ಒಗಟಿನ ರಾಣಿ
ಎಂದೂ ಮುಗಿಯದ ಒಗಟಿನ ಗಣಿ
ಒಗಟೊ ಒಗಟೋ ಅವಳು ನಿಂತರೆ ಒಗಟೋ
ಅವಳ್ ಕುಂತರೆ ಒಗಟೋ
ಒಗಟೇ ಒಗಟು ಒಗಟೊಗಟು ಅವಳಿದ್ದ ಕಡೆ, ಅವಳಿದ್ದ ಕಡೆ.
ಲಲ್‌ಲಲ್‌ಲಲ್‌ಲಲ್‌ಲಾಲಾಲಾ....
ಲಾಲಾಲಾ... ಲಲ್‌ಲಲ್‌ಲಲಾಲಾಲಾಲಾಲ...

ಒಗಟಿನ ರಾಣಿ : ಕಟಕಟಕಟಕಟಕಟಕಟ ಕಟಕಟಕಟಕಟಕಟಕಟ ಕಟಕಟ ಬಡಿಯುವ ಬಡಗಿಯರೇ...
ತಂಡ : ಓ ಬಡಗಿಯರೇ...
ಗರಗರಗರಗರ ಗರಗರಗರಗರ ಗರಗರಗಸ ಹಿಡಿದವರೇ
ಓ ಗರಗಸ ಹಿಡಿದವರೇ
ಒಡೆಯಿರೀ ಈ ಒಗಟ ಒಡೆಯಿರೀ... ಈ ಒಗಟ

ಬಡಗಿಯರು : ಓಹೋ ಒಗಟು! ಆನೆ ನುಂಗೋನ್ಗೆ ಊನೆ ಲೊಟ ಲೊಟ.
ಹಾಕಿ ಒಗಟು ಒಗಟು ಚೆಚ್ಚಾಕ್‌ಬಿಡ್ತೀವಿ.

ಒಗಟಿನ ರಾಣಿ : ಬಡಗಿ ಕಟ್ಟದ ಮನೆ
ಬಾಚಿ ಮುಟ್ಟದ ಮನೆ
ಅಂಕುಡೊಂಕು ಆ ಮನೆ
ಹೇಳಿರಿ ಹೇಳಿರಿ ಅದು ಯಾವ ಮನೆಯು

ಬಡಗಿಯರು

ಒಬ್ಬ : ನಾವು ಕಟ್ಟದೇ ಇರೋ ಮನೆ?! ಬಾಚಿ ಮುಟ್ಟದೇ ಇರೋ ಮನೆ?!

ಇನ್ನೊಬ್ಬ : ಅಂಕುಡೊಂಕಿನ ಮನೆ??

ಮತ್ತೊಬ್ಬ : ಇದು ಎಂಥಾ ಸುಡುಗಾಡು ಮನೆ ಅಂತೀನಿ.

ಮಗದೊಬ್ಬ : ಯವ್ವೋ... ಅದು ಯಾವ್ ಮನೆ ನಮಗೂ ಗೊತ್ತಾಯಿತಾನೆ ಇಲ್ಲ
ಹಾಂ... ನೀನೇ ಹೇಳ್ ಬಿಡು.

ಒಗಟಿನ ರಾಣಿ : ಗೊತ್ತಾಗ್‌ಲಿಲ್‌ವಾ... ಅಷ್ಟೂ ಗೊತ್ತಾಗ್‌ಲಿಲ್ಲವಾ!
ಅದು ಹಾವಿರೋ ಹುತ್ತಾ ಅಲ್ಲವಾ!
ಬಡಗಿ ಕಟ್ಟದ ಮನೆ
ಬಾಚಿ ಮುಟ್ಟದ ಮನೆ
ಅಂಕುಡೊಂಕು ಅಲ್ಲವೇನು ಆ ಮನೆಯು?

ಬಡಗಿಯರು : ಅಯ್ಯೋ ಹುತ್ತಾ! ಸೋತಿವಿ ಸೋತ್ಹೋದ್ವಿ

ಮಕ್ಕಳು : ಗರಗಸದೊಡೆಯರು ನೀವಣ್ಣ
ಒಗಟಿಗೆ ಸೋತಿರಿ ಯಾಕಣ್ಣ
ಬುಸ್‌ಬುಸ್ ಬುಸ್‌ಬುಸ್ ನಾಗಪ್ಪ!
ಅವನ್ ತಂಟೆ ಬೇಡ,
ನಡೀರಪ್ಪ ನಡೀರಿ ನಡೀರಿ.

ಮಕ್ಕಳು
ಒಂದು : ಇಲ್ಲಪ್ಪ.... ನಂಗೆ ತುಂಬಾ ಸುಸ್ತು

ಎರಡು : ಯಾಕಪ್ಪಾ?

ಮೂರು : ದಾಹ. ನೀರ್ ಬೇಕು...

ನಾಲ್ಕು : ಇವುನ್ದು ಯಾವಾಗ್ಲೂ ಇದೇ ತರ್ಲೆ.

ಐದು : ನೀರ್ ಕುಡಿಬೇಕು, ತಿಂಡಿ ತಿನ್‌ಬೇಕು. ಕರ್ಮಾಕರ್ಮ,
ಇಲ್ಲಿ ಎಲ್ಲೋ ಸಿಗತ್ತೆ ನೀರು?

ಆರು : ಅಗೋ ಅಲ್ಲಿ ಬಿಂದಿಗೆ ಎತ್ಕೊಂಡ್ ಹೋಗ್ತಾ ಇದ್ದಾರೆ, ನಾನು ಹೋಗ್ತೀನಿ.

ಗುಂಪು : ಏಯ್ ಏಯ್ ನಿಲ್ಲೋ ನಾವೂ ಬರ್ತೀವಿ.

ಒಗಟಿನ ರಾಣಿ ತಂಡ : ಲಲ್‌ಲಲ್‌ಲಲ್‌ಲಲ್ ಲಲಾಲಾ... ಲಾಲಾಲಾ...
ನೀರೀಗ್ಹೋಗೋ ನೀರೆಯರೇ ನಿಲ್ಲಿ ಎಲ್ಲ
ಎಲ್ಲರಿಗಿಂತ ಜಾಣೆಯರೇ ಬನ್ನಿರಿ ಎಲ್ಲ

ನೀರೆಯರು : ಯಾಕ್ರಪ್ಪಾ? ಏನ್ ಬೇಕು?

ಮಕ್ಕಳು
ಒಂದು : ನಂಗೆ ಕುಡಿಯೋದಕ್ಕೆ ನೀರ್ ಬೇಕು.

ಎರಡು : ಏಯ್ ಸುಮ್‌ನಿರೋ ಮೊದ್ಲು ನಮ್ ಒಗಟಿಗೆ ಉತ್ತರ ಬೇಕು.

ಒಂದು : ನೀರು ನೀರು ನೀರು...

ಎರಡು : ಒಗಟು ಒಗಟು ಒಗಟು...

ಗುಂಪು : ಮೊದಲು ಒಗಟು; ಆಮೇಲೆ ನೀರು, ಓಕೆ.

ನೀರೆಯರು : ಆಯಿತಮ್ಮ ತಂಗಿ, ನಾವ್ ಒಗಟು ಬಿಡಿಸಿದ್ರೇ ನಮ್‌ಗೇನು ಕೊಡ್ತೀಯಾ ಬಹುಮಾನ?

ಒಗಟಿನ ರಾಣಿ : ಝುಮ್ಕಿ ಕೊಡ್ತೀನಿ! ನಾಗರಬಿಲ್ಲೆ ಕೊಡ್ತೀನಿ, ಗೆಜ್ಜೆ, ಡಾಬು ಎಲ್ಲಾ ಕೊಡ್ತೀನಿ.

ನೀರೆಯರು : ಝುಮ್ಕಿ! ನಾಗರಬಿಲ್ಲೆ! ಗೆಜ್ಜೆ, ಡಾಬು! ಹಾಕು ಹಾಕು ಹಾಕು ಒಡೀತೀವಿ ಹಾಕು.

ಒಗಟಿನ ರಾಣಿ : ಬಿರಬಿರ್‍ರನೆ ಹೋಗೋಳೇ, ಬಿಲ್ಲೆ ಸರದೋಳೆ
ನಿಂತು ಮಾತಾಡು ಕಂಚುಗಾರರ ಹುಡುಗಿ
ಬಿರಬಿರ್‍ರನೆ ಹೋಗೋಳೆ ಬಿಲ್ಲೆ ಸರದೋಳೆ
ಕಂಚುಗಾರರ ಹುಡುಗಿ ಕಂಚುಗಾರರ ಹುಡುಗಿ.

ನೀರೆಯರು : ಇನ್ನೂ ಸ್ವಲ್ಪ ಬಿಡ್ಸಿ ಹೇಳ್ತೀಯಾ?

ಮಕ್ಕಳು : ಬಿಡ್ಸಿ ಹೇಳೋಕ್ಕೆ ಇದೇನ್ ಹಲ್ಸೀನ್ ತೊಳೇನ? ಹೌದ್ಹೌದು ಹಾಗೇ ಹೇಳಿ.

ಒಗಟಿನ ರಾಣಿ ತಂಡ : ಘಟ್ಟಿಸಿಕೊಂಡರು. ಘಟ್ಟಿಸಿಕೊಂಡರು ಹಣೆಹಣೆಗೆ
ಕಣಕಣ ಖಾಲಿ ಬಿಂದಿಗೆಯಾ
ಹೊಳೆಯದೆ ಹೋಯಿತು ಉತ್ತರವು

ನೀರೆಯರು ೧ : ಬಿಡ್ಸೆಯಕ್ಕಾ... ಬಿಡ್ಸೆ ತಂಗಿ

೨ : ಚಿಗವ್ವಾ ನೀನೇ ಬಿಡ್ಸೇ...

ಮಕ್ಕಳು

ಒಂದು : ಬಿಡ್ಸೋದಕ್ಕೆ ಇದೇನ್ ಅವರೇಕಾಳು ಅಲ್ಲ.

ಎರಡು : ತೊಗರಿಕಾಳುನೂ ಅಲ್ಲ. ನಮ್ಮಕ್ಕಾ ಒಗಟಿನ ಕಣಜ

ಮೂವರು : ಆ ಕಣಜದ ಬಾಗಿಲನ್ನ ಅಷ್ಟೊಂದು ಸುಲಭವಾಗಿ ತೆಗೆಯೋಕೆ ಆಗಲ್ಲ.

ನೀರೆಯರು : ಶರಣಾದ್ವಿ ಕಣವ್ವಾ ಶರಣಾದ್ವಿ... ನೀನೇ ಬಿಡ್ಸು.

ಒಗಟಿನ ರಾಣಿ : ಬಿಂದಿಗೆಯಲ್ಲವೆ ಉತ್ತರವು
ಕಂಚುಗಾರ ಕೆತ್ತಿದ್ದು ಬಿಲ್ಲೆ ಸರದವಳೂ ಇವಳಲ್ಲವೇ...!
ಹಾಂ ಬಿಲ್ಲೆ ಸರದವಳೂ ಇವಳಲ್ಲವೇ...

ಮಕ್ಕಳು : ಯಾಕ್ರವ್ವ ಬಾಯಿಗೆ ಬೀಗ ಹಾಕ್ಕೊಂಡ್ರಿ?
ಅದಕ್ಕೆ ಹೇಳಿದ್ದು ಮೊದ್ಲು ನೀರು ಕೊಡಿ ಅಂತ.

ನೀರೆಯರು : ನೀರಾ?... ತೊಗೋ..

ಮಕ್ಕಳು : ಅಯ್ಯಯ್ಯೋ... ಮೈಮೇಲೆ ಸುರುದುಬಿಟ್ರಲ್ಲಾ...

ಒಗಟಿನ ರಾಣಿ ತಂಡ : ಲಲ್‌ಲಲ್‌ಲಲ್‌ಲಲ್‌ಲಾಲಾಲಾ ಲಾಲಾಲಾ ಲಲಾ...
ಸಿಂಪಿಗರ್ಹಟ್ಟಿಗೆ ನಡೆಯಿತು, ಒಗಟಿನ ದಿಬ್ಬಣವು
ಹಬ್ಬವೋ ಹಬ್ಬ ಕಣ್‌ಗಳಿಗೆ, ನೋಡುವ ಕಣ್‌ಗಳಿಗೆ

ಮಕ್ಕಳು : ನಮಸ್ಕಾರ ಸಾಬ್.

ದರ್ಜಿ ಒಬ್ಬ : ಸಲಾಮಲೇಕುಮ್... ಏನ್ರಪ್ಪಾ ಟೀಮ್‌ಟೀಮ್‌ಗೆ ಬಂದ್ ಬಿಟ್ಟಿದ್ದೀರಿ.

ದರ್ಜಿ ಇನ್ನೊಬ್ಬ : ಅಂಗಿಗೆ ಹೊಲೀಬೇಕು?

ದರ್ಜಿ ಮತ್ತೊಬ್ಬ : ಚಡ್ಡೀಗೆ ಹೊಲೀಬೇಕು?

ದರ್ಜಿ ಮಗದೊಬ್ಬ : ಮಾರಾಜ್ರು ಟೊಪ್ಪೀಗೆ ಹೊಲ್‌ಕೊಡಬೇಕು?

ಮಕ್ಕಳು : ಇಲ್ಲಾ... ಒಗಟು ಒಗಟು.

ದರ್ಜಿ ಒಬ್ಬ : ಯಾ ಕ್ಯಾರೆ ಸಿರ್ ಕಾ ದರ್ದ್, ಒಗಟು

ದರ್ಜಿ ಇನ್ನೊಬ್ಬ : ಒಗಟು. ಒಗಟು ಬೋಲೇತೋ ಪಹೇಲಿ ಪಹೇಲಿ.

ದರ್ಜಿ ಮತ್ತೊಬ್ಬ : ಓಹೋ ಐಸಾ ಕ್ಯಾ, ಪಹೇಲಿಕಿ ಒಗಟು ಬಿಡ್ಸಬೇಕು ಈಗಾ

ದರ್ಜಿ ಗುಂಪು : ಹೂಂ... ಹಾಕಿ ಹಾಕಿ...

ಒಗಟಿನ ರಾಣಿ : ಆಯಿತು, ಆಯಿತು ಆಯಿತು...
ಚೋಟುದ್ದ ಹುಡುಗೀಗೆ
ಮಾರುದ್ದ ಜಡೆ

ದರ್ಜಿ ಒಬ್ಬ : ಚೋಟುದ್ದ ಲಡಕೀಗೆ ಮಾರುದ್ದ ಜಡೆ!

ದರ್ಜಿ ಇನ್ನೊಬ್ಬ : ಬಾಪ್‌ರೆ ಬಾಪ್ ವೈಸಾಭಿ ಲಡಕಿ ಹೈ!

ದರ್ಜಿ ಮತ್ತೊಬ್ಬ : ವೊ ಲಡಕಿ ನಹೀ ಚಾಚಾ ಸಿರ್‌ಕಾ ದರ್ದ್...

ದರ್ಜಿ ಮಗದೊಬ್ಬ : ಸೋಚೋ ಉಸ್ತಾದ್ ಸೋಚೋ...

ಒಗಟಿನ ರಾಣಿ ತಂಡ : ಕಚಕಚ ಕಚಕಚಕಚಕಚ ಕಚಕಚಕ
ಚಕಚಕ ಚಕಚಕ ಚಕಚಕ ಚಕಚಕ
ತಲೆಯಲ್ಲಿ ಕತ್ತರಿ ಆಡಿದರು
ಹೊಳೆಯದೆ ಹೋಯಿತು ಉತ್ತರವೂ

ಮಕ್ಕಳು

ಒಂದು : ಏನ್ ದರ್ಜಿ ಸಾಹೇಬ್ರೆ

ಎರಡು : ಹೊಲಿಗೆ ಹಾಕ್‌ತೀರಿ ಹೊಲಿಗೆ ಬಿಡ್‌ಸ್ತೀರಿ

ಮೂರು : ಎಂಥೆಂಥಾ ಬಟ್ಟೆ ಹೊಲಿತೀರಿ

ನಾಲ್ಕು : ಇದನ್ ಬಿಡ್ಸಾಕ್ಕಾಗಲ್ವಾ?

ಗುಂಪು : ಆಗೋಲ್ವಾ? ನಮಗೂ ಆಗಲ್ಲ, ನಮ್ಮಕ್ಕಾ ಬಿಡಿಸ್ತಾಳೆ.

ಒಗಟಿನ ರಾಣಿ : ಚೋಟುದ್ದ ಹುಡುಗಿ ಸೂಜಿ ಅಲ್ಲವೆ
ಮಾರುದ್ದ ಜಡೆಯು ದಾರ ಅಲ್ಲವೆ
ಸೋತಿರಿ ನೀವು ನಡೆಯಿರಿ ಮನೆಗೆ
ಸೋತಿರಿ ನೀವು ನಡೆಯಿರಿ

ದರ್ಜಿ ಒಬ್ಬ : ಏ ಕ್ಯಾ ಉಸ್ತಾದ್ ಈ ಚುಲ್ಪಾಪಲ್ಪಾ ಹುಡುಗುರ್ ಮುಂದೆ
ಹೊಡದ್‌ಬಿಟ್ವಲ್ಲಾ ಪಲ್ಟೀ

ದರ್ಜಿ ಇನ್ನೊಬ್ಬ : ನಮ್ಮ ಕತೆ ಇರ್ಲಿ... ಅಲ್‌ನೋಡಿ ಬರ್ತಾ ಇದ್ದಾನೆ; ಕೊಡೆ ವ್ಯಾಪಾರಿ.
ಅವನ್ ಕತೆ ನೋಡಿ ಈಗ..

ಒಗಟಿನ ರಾಣಿ ತಂಡ : ಇಳಿಯಿತು ಬೀದಿಗೆ ಮೆರವಣಿಗೆ
ಸಾಗಿತು ಒಗಟಿನ ಬರವಣಿಗೆ
ಕಂಡನು ಕೊಡೆಗಳ ವ್ಯಾಪಾರಿ
ಹೊಂಚಿದ ಆಗಲು ತಾನೆ ಪರಾರಿ
ಮುತ್ತಿತು ಒಗಟಿನ ಆ ದಂಡು
ಒಗೆಯಿತು ಹೊಸತು ಒಗಟೊಂದು.

ಒಗಟಿನ ರಾಣಿ : ಓ... ಅಣ್ಣಾ ಒಂದ್ ಒಗಟು ಹಾಕ್ತೀನಿ ಬಿಡಿಸ್ತೀಯಾ?

ಕೊಡೆ ವ್ಯಾಪಾರಿ : ಓಹೋ ಒಗಟು! ಹಾಕಿ ಒಗಟು...

ಒಗಟಿನ ರಾಣಿ : ದಿಡದಿಡ ಹೋಗುತ್ತೆ. ದಿನ್ನೆ ಏರುತ್ತೆ.
ರೆಕ್ಕೆ ಮುರಿತ್ತೈತೆ, ಪಕ್ಕೆ ಕಟ್ತೈತೆ,
ಏನದು? ಏನದು? ಏನದು? ಏನದು?
ಏನದು ಏನದು ಏನದು ಏನದು ಏನದು?

ಕೊಡೆ ವ್ಯಾಪಾರಿ : ಏಯ್... ತಮ್ಮಾ ಈ ಕೊಡೆ ಸ್ವಲ್ಪ ಹಿಡ್ಕೋ.

ಮಕ್ಕಳು : ಯಾಕಣ್ಣಾ?

ಕೊಡೆ ವ್ಯಾಪಾರಿ : ಏ... ಯೋ... ಉತ್ತರಾನೆ ಹೊಳೀತ ಇಲ್ಲ.
ಸ್ವಲ್ಪ ತಲೆನಾದ್ರು ಕೆರ್‌ಕೋತೀನಿ

ಮಕ್ಕಳು : ಕೆರ್‌ಕೋ ಕೆರ್‌ಕೊ ಚೆನ್ನಾಗಿ ಕೆರ್‌ಕೊ.

ಒಗಟಿನ ರಾಣಿ ತಂಡ : ನೆತ್ತಿಯ ಮೇಲೆ ಇದ್ದರೂ ಕೊಡೆಯು
ಬಿಸಿಬಿಸಿಯಾಯಿತು ಉತ್ತರ ಹೊಳೆಯದೆ ತಲೆಬುರುಡೆ
ತಲೆಬುರುಡೆ ಬುರುಡೆ ಬುರುಡೆ ಬುರುಡೆ ಬುರುಡೆ ತಲೆಬುರುಡೆ

ಮಕ್ಕಳು : ಯಾಕಣ್ಣಾ ಉತ್ತರ ಹೊಳೀಲಿಲ್‌ವಾ?

ಕೊಡೆ ವ್ಯಾಪಾರಿ : ಊಹುಂ....ದೇವರಾಣೆಗೂ ಗೊತ್ತಾಗ್‌ಲಿಲ್ಲ.
ತಲೆ ಕೆರೆದೂ ಕೆರೆದೂ ಕೂದ್ಲೆ ಉದುರೋಯಿತು
ಉತ್ತರ ಮಾತ್ರ ಹೊಳೀಲಿಲ್ಲ.

ಮಕ್ಕಳು : ಹೋಗ್ಲೀ ನೀನೇ ಬಿಡ್ಸಕ್ಕಾ.

ಒಗಟಿನ ರಾಣಿ : ದಿಡದಿಡ ಅಂತ ಹೋಯ್ತು... ದಿನ್ನೆ ಏರ್ತು.
ರೆಕ್ಕೆ ಮುರೀತು ಪಕ್ಕೆ ಕಟ್ತು
ಏನ್ ಗೊತ್ತಾ? ಕೊಡೆ...

ತಂಡ : ಸೋತೆ ನೀನು. ಗೆದ್ದೆವು ನಾವು!
ಹಿಡಿಹಿಡಿ ಹಿಡಿಹಿಡಿ ಕೊಡೆಯನು ತಲೆತಲೆಗೆ
ಬೀಗುತ ನಡೆಯುವೆವು ಕೊಡೆ ಹಿಡಿದು
ಕೊಡಿ ಕೊಡಿ... ಕೊಡೆ ಕೊಡೆ
ಕೊಡಿ ಕೊಡೀ–ಕೊಡೆ ಕೊಡೆ
ಕೊಡಿ ಕೊಡೀ... ಕೊಡೆ ಕೊಡೆ
ಕೊಡಿ ಕೊಡೀ... ಕೊಡೆ ಕೊಡೆ

(ಮಕ್ಕಳು ನಗುವರು)

ಒಂದು : ಒಗಟು ಹಾಕೋಣ ಎಲ್ಲಾರ್ರೂ ಸೋಲ್ಲೋಣ.

ಎರಡು : ನನ್‌ಕೈಯಲ್ಲಿ ಆಗಲ್ಲಪ್ಪಾ... ನಾನೊಬ್ಬನೇ ಎಷ್ಟು ಅಂತ ಒಗಟು ಹಾಕೋದು, ಎಷ್ಟೂ ಅಂತ ಒಗಟು ಬಿಡ್ಸೋದು...

ಮೂರು : ಓಹೋ... ನೀನೇನ್ ಮಹಾಬಿಡ್‌ಸ್ದೇ...

ನಾಲ್ಕು : ಎಲ್ಲಾ ಒಗಟೂನು ಅಕ್ಕಾನೆ ಹಾಕಿದ್ದು ಬಿಡ್ಸಿದ್ದು.

ಐದು : ನೀನೇನ್ ಬರ್ತೀಯೋ, ಬಿಟ್ ಹೋಗೋಣ್ವೋ?

ಆರು : ಆಯಿತು ನಡೀರಿ ಏನ್ ಮಾಡೋದು, ಈ ಒಗಟಿನ ರಾಣಿ ಸಹವಾಸ ಹೊಟ್ಟೆಗೆ ಉಪವಾಸ,

ಗುಂಪು : ತಲೆಗೆ ಹಬ್ಬದೂಟ

ಒಗಟಿನ ರಾಣಿ ತಂಡ : ಲಾಲಾಲಾಲಾಲಾ ಲಲಾ ಲಾಲಾಲಾಲಲಾಲಲಾಲಾ...

ಜನ ಗುಂಪು ೧ : ನಾವ್ ಸೋತಿವಿ.

೨ : ನಾವೂ ಅಷ್ಟೆ, ಶರಣವ್ವ ಶರಣು ಶರಣು ಶರಣು.

ತಂಡ : ಹಗಲಿಡಿ ಊರಲಿ ಹಾವಳಿಯು
ಒಗಟಿನ ರಾಣಿಗೆ ದೀವಳಿಗೆ
ಸಂಜೆಗೆ ಬಂದಳು ಅರಮನೆಗೆ
ಬೆಳಗುವ ದೀಪಗಳಾ ಮನೆಗೆ
ಸಖಿಯರು ದೀಪದ ಮಲ್ಲಿಯರು
ಬಂದರು ಬೆಳಗುತ ದೀಪಗಳಾ
ಒಗಟಿನ ರಾಣಿಗೆ ದಣಿವಿಲ್ಲ
ಅಲ್ಲೂ ಒಗೆದಳು ಒಗಟೊಂದ

ಒಗಟಿನ ರಾಣಿ : ದೀಪದ ಮಲ್ಲಿ ದೀಪದ ಮಲ್ಲಿ
ಒಡಿಯೇ ಈ ಒಗಟು
ಇಲ್ಲಿಗೆ ಸಾಕು ಇದೇ ನನ್ನ ಕೊನೆ ಒಗಟು
ಅಂಗೈ ಅಗಲ ಕೆರೆ
ಕೆರೇಲಿ ನೀರು
ನೀರ್ನಲ್ಲಿ ಬೇರು
ಬೇರ್ನಲ್ಲೊಂದು ಹೂವು, ಏನದು?

ದೀಪದ ಮಲ್ಲಿ : ನಾನಲ್ಲವೇ ಗೆಳತೀ, ದೀಪ, ನಾನಲ್ಲವೇ
ಬೆಳಗೋ ದೀಪ ನಾನಲ್ಲವೇ
ನಾನಲ್ಲವೇ... ಗೆಳತೀ... ನಾನಲ್ಲವೇ...

ಒಗಟಿನ ರಾಣಿ : ಹೇಳೇಬಿಟ್ಟೆಯಾ! ಇರು ಇನ್ನೊಂದು ಕೇಳ್ತೀನಿ. ಈಗ ಹೇಳು
ಏರಿಯ ಮೇಲೊಂದು ಜೀರಿಗೆ ಮರ ಹುಟ್ಟಿ
ನೀರ್ನ ಕುಡೀತದೆ ಬೇರ್ನ ತಿಂತದೆ

ದೀಪದ ಮಲ್ಲಿ : ನಾನಲ್ಲವೇ ಗೆಳತೀ ದೀಪ, ನಾನಲ್ಲವೇ
ಬೆಳಗೋ ದೀಪ ನಾನಲ್ಲವೇ
ನಾನಲ್ಲವೇ ಗೆಳತೀ ನಾನಲ್ಲವೇ...

ಒಗಟಿನ ರಾಣಿ : ಅಯ್ಯಯ್ಯೋ.... ಇದನ್ನೂ ಹೇಳ್‌ಬಿಟ್ರಾ! ಇರಿ ಮತ್ತೊಂದು ಹಾಕ್ತೀನಿ.
ಹಾಲು ಬಣ್ಣದ ಹಕ್ಕಿ
ನೀಲವರ್ಣದ ಹಕ್ಕಿ
ಬಾಯಂಜಲಾಗ್‌ತೈತಂತ
ಬಾಲ್‌ದಿಂದ ನೀರ್ ಕುಡೀತದೆ

ದೀಪದ ಮಲ್ಲಿ : ನಾನಲ್ಲವೇ ಗೆಳತೀ, ದೀಪ, ನಾನಲ್ಲವೇ
ಬೆಳಗೋ ದೀಪ ನಾನಲ್ಲವೇ
ನಾನಲ್ಲವೇ... ಗೆಳತೀ... ನಾನಲ್ಲವೇ...

ಒಗಟಿನ ರಾಣಿ : ಅಯ್ಯಯ್ಯೋ ಇದನ್ನೂ ಹೇಳಿಬಿಟ್ರಾ! ಆಯಿತು. ಈಗ ಹೇಳಿ
ಕಾಂತಾಮಣಿ ಅನ್ನೋ ಪಕ್ಷಿ
ಚಿಂತಾಮಣಿ ಅನ್ನೊ ಕೆರೆ
ಕೆರೆಯಲ್ಲಿ ನೀರಿಲ್ದೆ ಹೋದ್ರೆ ಪಕ್ಷಿಗೆ ಮರಣ.

ದೀಪದ ಮಲ್ಲಿ : ನಾನಲ್ಲವೇ ಗೆಳತೀ, ದೀಪ, ನಾನಲ್ಲವೇ
ಬೆಳಗೋ ದೀಪ ನಾನಲ್ಲವೇ
ನಾನಲ್ಲವೇ... ಗೆಳತೀ... ನಾನಲ್ಲವೇ....

ಒಗಟಿನ ರಾಣಿ : ದೀಪದ ಮಲ್ಲಿ. ದೀಪದ ಮಲ್ಲಿ ನಾನೂ ಸೋತೆ... ನಾ ಸೋತೆ...

ದೀಪದ ತಂಡ : ನಾವು ಸೋತ್ರೂ ಬೆಳಕೇ ಗೆದ್ರೂ ಬೆಳಕೇ...
ಒಗಟಂದ್ರೆ ಬೆಳಕು ಬೆಳಕಂದ್ರೆ ಒಗಟು.
ಹೂಂ ಇವತ್ತಿಂದ ನಮ್ ಹಾಗೆ ನೀನೂ ಒಂದು ದೀಪ ಆಗು.

ಸಾಲು ಸಾಲು ವನಗಳಿರಾ
ಲೀಲಾವತಿ ಗಿಳಿಗಳಿರಾ
ನಾವೂ ಬೆಳಗೋ ಹೊತ್ತಿಗೆ ನೀವು ಬನ್ನಿರೆ
ಆಹಾ... ನೀವು ಬನ್ನೀರೆ... ಓಹೋ... ನೀವು ಬನ್ನಿರೆ
ಆಹಾ... ನೀವು ಬನ್ನೀರೆ...ಓಹೊ... ನೀವು ಬನ್ನಿರೆ
ಲಲ್‌ಲಲ್ ಲಲ್ ಲಲ್ ಲಾಲಾ ಲಾಲಾ ಲಾಲಾ

# ನಾಯಿಮರಿ

ವೈದೇಹಿ

## ಪಾತ್ರಗಳು

ಸಣ್ಣಮ್ಮ
ಅಜ್ಜ
ಅಜ್ಜಿ
ಪಂಚರಂಗಿ – ಸಣ್ಣಮ್ಮನ ಸಾಕು ಗಿಳಿ
ಪಪ್ಪಿ – ಸಣ್ಣಮ್ಮನ ನಾಯಿಮರಿ
ಪಿಂಗಾಣಿ, ರಂಗಾಣಿ – ಕಳ್ಳರು
ಮಂಗಾಣಿ – ಕಳ್ಳರ ತೈನಾತಿ ಕೋತಿ
ಮುಸ್ತಫಾ – ದರ್ಜಿ

ಪಾತ್ರೆ ಅಂಗಡಿಯವ
ರಿಬ್ಬನು ಅಂಗಡಿಯವ
ಸರಪಳಿ ಅಂಗಡಿಯವ
ಬಿಸ್ಕಿಟು ಅಂಗಡಿಯವ
ಶರಬತ್ತು ಅಂಗಡಿಯವ
ಗೊಂಬೆ ಅಂಗಡಿಯವ
} ಪೇಟೆ

ಯಕ್ಷಿಣಿ
ರಾಜಕುಮಾರಿ, ಸಖಿಯರು
ಮೈನಾ ಹಕ್ಕಿ

ತೋಟ – ಬದನೆ ಗಿಡ, ಮೆಣಸಿನ ಗಿಡ
ಅಬ್ಬಲಿಗೆ ಗಿಡ, ಸೇವಂತಿಗೆ ಗಿಡ
ಪೇರಲೆ, ಮಂದಾರ, ಬಾಳೆ.

# ನಾಯಿಮರಿ ನಾಟಕ

## ಅಂಕ : ಒಂದು

### ದೃಶ್ಯ – ೧

ಪ್ರವೇಶ ಪದ್ಯ

ಒಂದಾನೊಂದು ಊರಿನಲ್ಲಿ
ಸಣ್ಣ ತೋಟದ
ಸಣ್ಣ ಮನೆಯಲ್ಲಿ
ಇದ್ದರಿಬ್ಬರು ಅಜ್ಜ ಅಜ್ಜಿ
ಮೊಮ್ಮಗಳಿದ್ದಳು
ಜೊತೆಯಲ್ಲಿ
ಆ
ತೋಟಕೆ ಕಳ್ಳರ
ಕಾಟವಂತೆ
ಕಾಯಲು ನಾಯಿ
ಬೇಕಿತ್ತಂತೆ
ಅಜ್ಜಿ ಹೊರಟಳು
ಮರಿಯನು ತರಲು
ಈಗ ನಾಯಿಮರಿ
ಬರುವುದಂತೆ!
ನಾಯಿಮರಿ, ಹೊಯ್
ನಾಯಿಮರಿ
ನಾಯಿಮರಿ, ಹಾ!
ನಾಯಿಮರಿ!
ತಕಧಿಮ್ಮಿ ಕುಂಯ್ ಕುಂಯ್
ಕುಂಯ್ ಕುಂಯ್ ತಕಧಿಮಿ
ನಾಯಿಮರಿ – ಕುಂಯ್
ನಾಯಿಮರಿ!

(ಸಣ್ಣದೊಂದು ತೊಟ. ತೋಟದಲ್ಲಿ ಪುಟ್ಟ ಮನೆ. ಮನೆಗೆ ತಾಗಿ ಅಜ್ಜ ನಾಯಿಮನೆ ಮಾಡುತ್ತಿದ್ದಾನೆ. ಮೊಮ್ಮಗಳು ಸಣ್ಣಮ್ಮ ಮತ್ತು ಪಂಚರಂಗಿ ಗಿಳಿ ಅವನಿಗೆ ಸಹಾಯ ಮಾಡುತ್ತಿದ್ದಾರೆ. ಅಜ್ಜಿ ತನ್ನ ಗೆಳತಿಯ ಮನೆಯಿಂದ ನಾಯಿಮರಿಯನ್ನು ತರಲು ಹೋಗಿದ್ದಾಳೆ.)

ಅಜ್ಜ : (ಕಳ್ಳರ ತಲೆಗೆ ಸುತ್ತಿಗೆಯಿಂದ ಮೊಳೆ ಹೊಡೆಯುತ್ತಿರುವನೋ ಎಂಬಷ್ಟು ರೋಷದಿಂದ ರೀಪಿಗೆ ಮೊಳೆ ಹೊಡೆಯುತ್ತ)

ಬರಲಿ. ಇನ್ನು ಬರಲಿ. ನೆಟ್ಟ ಗಿಡದಲ್ಲಿ ಒಂದು ಹೂವು ಬಿಡಲಿಕ್ಕಿಲ್ಲ. ತರಕಾರಿ ಬಿಡಲಿಕ್ಕಿಲ್ಲ, ಕಾಯಿ ಬಿಡಲಿಕ್ಕಿಲ್ಲ. ರಾತ್ರಿ ಬೆಳಗಾಗುವುದರೊಳಗೆ ಇಲ್ಲ ಮಾಡುವ ಆ ಘಟಿಂಗ ಕಳ್ಳರು ಇನ್ನು ಬರಲಿ! ನೋಡಿಕೊಳ್ಳುತ್ತೇನೆ.... ಸಣ್ಣಮ್ಮಾ, ಇನ್ನೂ ಆರು ಮೊಳೆ ಮೂರು ರೀಪು ಬೇಕು. ಬೇಗ ತಾ. ನಿನ್ನ ಅಜ್ಜಿ ಬರುವುದರೊಳಗೆ ನಾಯಿಮನೆ ಮುಗಿಸಿ ಕುಳಿತು ಬಿಡುವ.

ಸಣ್ಣಮ್ಮ : (ಹಾರಿ ಚಿಮ್ಮಿ ಓಡುತ್ತ) ಇದೋ, ತಂದೆ ಅಜ್ಜಾ. (ಮನೆಯೊಳಗಿಂದ ರೀಪು ಮತ್ತು ಮೊಳೆಯನ್ನು ಪಂಚರಂಗಿಯ ಹತ್ತಿರ ಒಂದೊಂದಾಗಿ ಕೊಡುತ್ತಾಳೆ. ಅದು ಓಡುತೋಡುತ್ತ ಬಂದು ಅಜ್ಜನಿಗೆ ಕೊಡುತ್ತದೆ.)
ಇನ್ನೇನಾದರೂ ಬೇಕಾ ಅಜ್ಜಾ?

ಅಜ್ಜ : ಆ ಮೂಲೆಸ್ಟಾಂಡಿನಲ್ಲಿ ಒಂದು ಚಿಲಕ ಇದೆ ನೋಡು. ಅದನ್ನು ತಾ. ಅಲ್ಲಿಗೆ ಮುಗಿಯಿತು.

ಸಣ್ಣಮ್ಮ : (ಚಿಲಕ ತಂದುಕೊಡುತ್ತ) ಏನಜ್ಜಾ, ಇನ್ನೂ ಅಜ್ಜಿ ಬಂದಿಲ್ಲ! ಎಷ್ಟು ಹೊತ್ತು!

ಅಜ್ಜ : ಬರುತ್ತಾಳೆ ಮಗೂ. ಈಗ ಬರುತ್ತಾಳೆ. ಅಲ್ಲೀವರೆಗೆ ನಡೆದುಕೊಂಡು ಹೋಗೀ, ನಾಯಿಯನ್ನು ಕೇಳೀ, ಮನೆಯವರೊಂದಿಗೆ ಪಟ್ಟಾಂಗ ಬಿಡಿಸಿಕೊಂಡೂ, ಎರಡು ಎಲೆ ಅಡಿಕೆ ಹಾಕಿ ಮತ್ತೆ ಇಲ್ಲೀವರೆಗೆ ನಡೆದುಕೊಂಡು ಬರಬೇಡವೇ ಅವಳು? ಮೊದಲೇ ನಿನ್ನ ಅಜ್ಜಿಗೆ ಮಾತು ಸ್ವಲ್ಪ ಜಾಸ್ತಿ..... ಹಂ! ಅವಳ ಹತ್ತಿರ ನಾನು ಹೀಗಂದೆನಂತ ಹೇಳಿಬಿಡಬೇಡ ಮತ್ತೆ! (ನಗುವನು)

(ನಾಯಿಮನೆಯಿಂದ ದೂರ ನಿಂತು)

ಈಗ ಹೇಳು, ಹೇಗಾಯಿತು?

ಸಣ್ಣಮ್ಮ : ಅಹಾ! ನನ್ನ ಕಥೆ ಪುಸ್ತಕದಲ್ಲಿ ಇದ್ದ ಹಾಗಿನದೇ ಮನೆ. ಅರಗಿಣೀ, ನೀನೂ ಅದರಲ್ಲಿ ಇರಬಹುದು. ನಾನೂ ಇರಬಹುದು. ನಾಯಿಮರಿಯೂ. ಮಳೆಗಾಲದಲ್ಲಿ ಚನ್ನೆಮಣೆ ಆಡಿಕೊಂಡು.... ಇಷ್ಟಾದರೂ ಅಜ್ಜಿ ಬಂದಿಲ್ಲ! ಅಜ್ಜಾ, ಅಜ್ಜಿ ನಿಜಕ್ಕೂ ಬರುತ್ತಾಳಾ? ನಾಯಿ ತರುತ್ತಾಳಾ?

ಅಜ್ಜ : ಹೌದು ಮರೀ.... ಅದೋ, ಇನ್ನೇನು ಎರಡೇ ನಿಮಿಷ, ಅಜ್ಜಿ ಪಾಪ ಹೆಜ್ಜೆ

ನಿಧಾನ. ನಾಯಿಮರಿಯನ್ನೂ ಕರೆದುಕೊಂಡು ಬರಬೇಡವೇ?.... ಇರಲಿ. ನಾಯಿಮರಿಗೆ ಏನು ಹೆಸರಿಡುತ್ತೀ?

ಸಣ್ಣಮ್ಮ : ಯಾಕೆ? ಅದರ ಅಮ್ಮ ಅದಕ್ಕೆ ಹೆಸರಿಟ್ಟಿಲ್ಲವೆ?

ಪಂಚರಂಗಿ : ಅಮ್ಮ ಇಟ್ಟಿಲ್ಲವಾದರೆ, ಅಪ್ಪನಾದರೂ ಇಟ್ಟಿರಲೇಬೇಕು.

ಸಣ್ಣಮ್ಮ : .....ಒಂದು ವೇಳೆ ಇಟ್ಟಿಲ್ಲವಾದರೆ ನಾವೇ ಇಡೋಣ.

ಪಂಚರಂಗಿ : ಆದರೆ ನಾಯಿಯನ್ನು ನೋಡದೆ ಹೆಸರಿಡುವುದು ಹೇಗೆ?

ಅಜ್ಜ : ಅದೂ ಸರಿಯೆನ್ನು. (ನಾಯಿಮನೆಯನ್ನು ಇನ್ನೂ ನೇರ್ಪುಗೊಳಿಸುತ್ತಿದ್ದಾನೆ.)

ಸಣ್ಣಮ್ಮ : ಅಜ್ಜಾ, ನಾಯಿ ಬಂದರೆ ಕಳ್ಳರು ಬರುವುದಿಲ್ಲವಾ?

(ಪೊದೆಯ ಹಿಂದಿನಿಂದ ಕಳ್ಳರು, ರಂಗಾಣಿ, ಪಿಂಗಾಣಿ, ಮಂಗಾಣಿ ಇಣುಕುತ್ತಿದ್ದಾರೆ.)

ಅಜ್ಜ : ಇಲ್ಲ, ಕಳ್ಳರು ಬಂದರೆ ನಾಯಿ ಕೂಗುತ್ತದೆ. ನಾಯಿ ಕೂಗಿದರೆ ನಾನು ಕೋಲು ಹಿಡಿದುಕೊಂಡು ಹೊರಗೆ ಬರುತ್ತೇನೆ. ಕಳ್ಳರು ನನ್ನನ್ನು ಕಂಡದ್ದೇ ಪದರಿ ಓಡಿ ಹೋಗುತ್ತಾರೆ.

(ಸಣ್ಣಮ್ಮ, ಪಂಚರಂಗಿ ಖುಶಿ ಕುಣಿದು ನಗುತ್ತಾರೆ.)

ಪಿಂಗಾಣಿ : ಎಲಾ! ಇದೊಳ್ಳೆ ಘಾಟಿ ಅಜ್ಜ. ನಾಯಿ ಕಟ್ಟುತ್ತಾನಂತೆ! ನಮ್ಮನ್ನು ಓಡಿಸುತ್ತಾನಂತೆ! ಅಲ್ಲವೋ ರಂಗಾಣಿ, ಅಂದ ಹಾಗೆ ನಾಯಿ ಬಂತೂ ಅಂತ ಇಟ್ಟುಕೋ. ನಾವು ಕಾಯಿ ಕದಿಯುವುದು ಹೇಗೆ?

ರಂಗಾಣಿ : ಅದಕ್ಕೇನು ಬಿಡು, ಕದಿಯದಿದ್ದರಾಯಿತು.

ಪಿಂಗಾಣಿ : ಅದನ್ನು ಹೇಳಲು ನೀನೇ ಆಗಬೇಕೆ?

ರಂಗಾಣಿ : ಎಂಥಾ ಪುಕ್ಕನಯ್ಯ ನೀನು. ಇನ್ನೂ ಆ ನಾಯಿ ಬಂದೂ, ನಾವು ಕದ್ದೂ, ಅದು ಕೂಗಿ.... ಅಯ್ಯೊ ಅಯ್ಯೊ ಅಯ್ಯೊ..... ಬಹ....ಳ ಉದ್ದದ ಮಾತು ಬಿಡು. (ಆಕಳಿಸುತ್ತಾನೆ.)

ಪಿಂಗಾಣಿ : ಹಾಗಲ್ಲವೋ ರಂಗಾಣಿ, ನಾಯಿ ಬಂದೇ ಬರುತ್ತದೆ. ನಾಯಿಮನೆ ಮುಂದೆ ಆ ಮೂವರೂ ಹೇಗೆ ಕಾಯುತ್ತಿದ್ದಾರೆ ನೋಡು.

ರಂಗಾಣಿ : ನಿನಗೆ ಹೆದರಲೇಬೇಕಂತ ಅಷ್ಟು ಆಸೆ ಇದ್ದರೆ ಹೆದರು ಮಾರಾಯ. ಆದರೆ ಸತ್ಯಕ್ಕೆ ಹೇಳಲಾ? ನಮ್ಮ ಮಂಗಾಣಿ ಇರುವುದು ಯಾತಕ್ಕೆ ಮತ್ತೆ? ಅವನ ಬಾಲಕ್ಕೆ ಸಣ್ಣಗೆ ಚಿವುಟಿದರೂ ಸಾಕು. ಛಂಗಂತ ಹಾರಿ ಛಂಗಂತ ಇಳಿದು, ಅತ್ತ ಇತ್ತ ನೋಡುವುದರೊಳಗೆ ಕಾಯಿ ಹಣ್ಣು, ಛಂಗಂತ ಕಿತ್ತು ನಿನ್ನ ಅಂಗೈ ಮೇಲೆ ಇಟ್ಟು ಕಾಲುಬುಡದಲ್ಲಿ.....

ಮಂಗಾಣಿ : ಕೈ ಮುಗಿದು ಕುಳಿತುಕೊಳ್ಳುತ್ತೇನೆ - ಸೈಯಲ್ಲ?

ಪಿಂಗಾಣಿ : ಇಲ್ಲಿಲ್ಲ. ಇನ್ನೆಲ್ಲ ಅಷ್ಟು ಸಲೀಸು ಆಗುವುದಿಲ್ಲ. ಇನ್ನು ನಮ್ಮ ನೆರಳು ಕಂಡರೆ ಸಾಕು. ನಾಯಿ ಕೂಗುತ್ತದೆ. ಅಜ್ಜ ಹೊರಗೆ ಓಡಿ ಬರುತ್ತಾನೆ.

(ನಿಂತಲ್ಲಿ ನಿಲ್ಲಲಾರದ ಚಪಲಚಿತ್ತ ಮಂಗಾಣಿ ಮೈಕೈ ತುರಿಸಿಕೊಳ್ಳುತ್ತ ಏನೂ ಕೆಲಸವಿಲ್ಲದೆ ಚಡಪಡಿಸುತ್ತಿದೆ. ಅಜ್ಜಿ ನಾಯಿಮರಿಯನ್ನು ಕರೆದುಕೊಂಡು ಬರುತ್ತಿದ್ದಾಳೆ. ಮೂವರೂ ನೋಡುತ್ತಾರೆ)

ಮಂಗಾಣಿ : ಹಾರಲೇ? ನಾನು ಹಾರಲೇ? ನಾಯಿ ಮೇಲೆ? ಈಗಲೇ?

ಪಿಂಗಾಣಿ : ಮಂಗಾಣಿ, ಇದು ಚೇಷ್ಟೆ ಮಾಡುವ ಕಾಲ ಅಲ್ಲ. ಕಾದು, ಸಮಯ ನೋಡಿ, ನಾಯಿ ಮರಿಯನ್ನು ಹಾರಿಸೋಣ. ಈಗ ಸುಮ್ಮನಿರು. (ಅಜ್ಜಿಯನ್ನು ನೋಡಿ ಸಣ್ಣಮ್ಮ ಓಡಿ ಹೋಗಿ ನಾಯಿಮರಿಯನ್ನು ಅಪ್ಪಿ ಹಿಡಿದು)

ಸಣ್ಣಮ್ಮ : ಅಯ್ಯೊ! ಎಷ್ಟು ಚಂದ ಮರೀ! ಚಿನ್ನಾರಿ ಮರಿ! ಪಿಳಿಪಿಳಿ ಕಣ್ಣು ನೋಡು! ಗುಜ್ಜು ಗುಜ್ಜುಕಾಲು, ಎಂಥ ನಯಾ ಮೈ, ಅಜ್ಜಾ - ಮುಟ್ಟಿ ನೋಡು.

(ನಾಯಿಮರಿ ಕುಂಯ್‌ಕುಂಯ್ ಅನ್ನುತ್ತಿದೆ.)

ಅಜ್ಜಿ : (ಸೆರಗಿನಿಂದ ಗಾಳಿ ಬೀಸಿಕೊಳ್ಳುತ್ತಾ) ಅಬ್ಬ! ಇಷ್ಟು ಹೊತ್ತಾಯಿತು. ಹಾಗೆ ಹೋಗಿ ಹೀಗೆ ಬರಲು ಆಗುತ್ತದಾ? (ಸಂಚಿ ಬಿಚ್ಚುತ್ತಾಳೆ) ಹೋದ ಮೇಲೆ ಹೀಗೆಯೇ. ಕುಳಿತುಕೋ ಎಂದರೂ, ಕುಳಿತುಕೊಂಡೇ. ಬಾಯಾರಿಕೆ ಕುಡೀ ಎಂದರೂ, ಬಾಯಾರಿಕೆ ಕುಡಿದೇ. ಎಲೆ ಅಡಿಕೆ ಹಾಕೂ ಅಂತ ಕೊಟ್ಟರು. ಹೂಂ, ಇನ್ನು ಎಲೆ ಅಡಿಕೆ ಹಾಕುತ್ತ ಕುಳಿತರೆ ಹೊತ್ತಾಗುತ್ತದೆಂದು ಸಂಚಿಯೊಳಗೆ ಕಟ್ಟಿಕೊಂಡೆ. ಮೊದಲು ನಾಯಿಮರಿ ಕೊಡೀ, ನನ್ನ ಮೊಮ್ಮಗಳು ಕಾಯುತ್ತಿದ್ದಾಳೇ, ಅಂದೆ. ಛೇ! ಹಾಗೆ ಅನ್ನುವುದರೊಳಗೆ ಈ ನಾಯಿಮರಿಗೆ ನಾನೇ ಅಜ್ಜಿ ಅಂತ ಹೇಗೆ ತಿಳಿಯಿತೋ! ಬಾಲ ಬೀಸುತ್ತ ಹೇಗೆ ಓಡಿ ಬಂತೂ ಅಂತ! ಮನೆಯವರಿಗೆಲ್ಲ ನಗುವೋ ನಗು... ಹಾಗೆ, ನಾಯಿಮರಿಯನ್ನು ಕೊಟ್ಟ ಕೂಡಲೇ ಹೋಗುತ್ತೇನೆ ಎಂದು ಬೆನ್ನು ತಿರುಗಿಸಿ ಬರಲಿಕ್ಕಾಗುತ್ತದೆಯಾ? ಎರಡೇ ಎರಡು ಮಾತು. ಅದೂ ಇದೂ. ಆಡುವುದೇ ಆಯಿತಲ್ಲ. ಅಷ್ಟಕ್ಕೇ, ಇಷ್ಟು ಹೊತ್ತು ಆಗಿಬಿಟ್ಟಿತು!

(ಸಿದ್ಧಮಾಡುತ್ತಿದ್ದ ಎಲೆ ಅಡಿಕೆಯನ್ನು ಬಾಯಿಗಿಟ್ಟುಕೊಳ್ಳುತ್ತಾಳೆ.)

ಅಜ್ಜ : ನನಗೂ ಒಂಚೂರು ಕೊಡೇ..... (ಅಜ್ಜಿ ಎಲೆ ಅಡಿಕೆ ಮಡಚಿ ಕೊಡುತ್ತಾಳೆ.)

(ಜಗಿಯುತ್ತ) ಅಂತೂ ನಾಯಿ ಬಂತು.

ಅಜ್ಜಿ : ಕಳ್ಳರ ಹೆದರಿಕೆ ಹೋಯ್ತು.

(ಅಜ್ಜ ಮತ್ತು ಅಜ್ಜಿ ಮಾತಾಡಿಕೊಳ್ಳುತ್ತ ಮನೆಯೊಳಗೆ ಹೋಗುತ್ತಾರೆ)

ಸಣ್ಣಮ್ಮ : (ನಾಯಿಮರಿಯನ್ನು ಅದರ ಮನೆಯತ್ತ ಕರೆದುಕೊಂಡು ಹೋಗಿ) ನಾಯಿಮರೀ. ನಿನ್ನ ಮನೆ ಹೇಗಿದೆ, ನೋಡು!

ನಾಯಿಮರಿ : (ಬಾಲ ಅಲ್ಲಾಡಿಸುತ್ತದೆ) ಕುಂಯ್ ಕುಂಯ್.

ಪಂಚರಂಗಿ : ಬಾಲ ಅಲ್ಲಾಡಿಸಿತು ಅಂದರೆ ಅದಕ್ಕೆ ಖುಶಿಯಾಗಿದೆ ಅಂತ ಅರ್ಥ.

ಸಣ್ಣಮ್ಮ : ನಾಯಿಮರೀ, ನಿನಗೆ ತಿಂಡಿ ಬೇಕೇ?

ಪಂಚರಂಗಿ : ಅದೋ ಬಾಲ ಅಲ್ಲಾಡಿಸುತ್ತಿದೆ. ತಿಂಡಿ ಬೇಕು ಅಂಥ ಅರ್ಥ.

ಸಣ್ಣಮ್ಮ : ನಾಯಿಮರೀ, ನಿನಗೆ ಕುಡಿಯಲು ಬೇಕೇ?

ಪಂಚರಂಗಿ : ಅಯ್ಯೋ ಪಾಪ, ಹೌದಂತೆ! ಮೊದಲು ಅದಕ್ಕೆ ಕುಡಿಯಲು ಕೊಡೇ.

ನಾಯಿಮರಿ : (ಎಳೆಯ ಕೀಚಲು ಮೃದು ದನಿಯಲ್ಲಿ) ಒಡತೀ, ನನಗೆ ತಿಂಡಿ ಬೇಕು, ತೀರ್ಥ ಬೇಕು. ಎಲ್ಲ ಬೇಕು.

ಸಣ್ಣಮ್ಮ : ನೋಡು ನೋಡು ಅಜ್ಜಿ! ನಾಯಿಮರಿಗೆ ತಿಂಡಿ ಬೇಕಂತೆ! ತೀರ್ಥ ಬೇಕಂತೆ! ಬೇಗ ತಾ.

**ಹಾಡು**

ಸಣ್ಣಮ್ಮ : ನಾಯಿಮರೀ ನಾಯಿಮರೀ
ತಿಂಡೀ ಬೇಕೇ?

ನಾಯಿಮರಿ : ತಿಂಡಿ ಬೇಕು ತೀರ್ಥ ಬೇಕು
ಎಲ್ಲ ಬೇಕು.

ಪಂಚರಂಗಿ : ನಾಯಿ ಮರೀ ನಿನಗೆ ತಿಂಡಿ
ಏಕೆ ಬೇಕೂ?

ನಾಯಿಮರಿ : ತಿಂದು ಗಟ್ಟಿಯಾಗಿ ಮನೆಯ
ಕಾಯಬೇಕು.

ಪಂಚರಂಗಿ : ನಾಯಿಮರೀ, ಕಳ್ಳಬಂದರೇನು
ಮಾಡುವೆ?

ನಾಯಿಮರಿ : ಬಕ್ ಬೌ ಬೌ ಎಂದು
ಕೂಗಿಯಾಡುವೆ.

ಸಣ್ಣಮ್ಮ : ನಾಯಿಮರಿ ತಾಳು ನಿನಗೆ
ತಿಂಡಿ ತರುವೆನು.

ನಾಯಿಮರಿ : ತಾ, ನಿನ್ನ ಮನೆಯ ನಾನು
ಕಾಯುತಿರುವೆನು.

(ಈ ಮೂವರ ಹೆಜ್ಜೆಗೆ ಸರಿಯಾಗಿ ಪೊದೆಯ ಹಿಂದಿರುವ ರಂಗಾಣಿ ಮತ್ತು ಮಂಗಾಣಿಯರೂ ಮೈಮರೆತು ನಿಂತಲ್ಲೇ ಕುಣಿಯತೊಡಗಿದಾಗ ಪಿಂಗಾಣಿ ಗದರಿಸಿ ನಿಲ್ಲಿಸುತ್ತಾನೆ.)

ಸಣ್ಣಮ್ಮ : ಅಜ್ಜೀ, ಇನ್ನೂ ಆಗಿಲ್ಲವೇ? ಬೇಗ ತಾ.

ಅಜ್ಜಿ : (ಒಳಗಿನಿಂದಲೇ) ಮಗೂ, ಕೈ ಬಿಡುವಿಲ್ಲ. ಇಕಾ. ತಿಂಡಿ ತೀರ್ಥ ಬಾಗಿಲ ಬಳಿ ಇಟ್ಟಿದ್ದೇನೆ. ಕೊಂಡುಹೋಗು.

(ಸಣ್ಣಮ್ಮ ಬಾಗಿಲಿನ ಹೊರಗಿಟ್ಟ ತಿಂಡಿ ಮತ್ತು ಹಾಲನ್ನು ತರುತ್ತಾಳೆ. ನಾಯಿಯ ಮುಂದೆ ಇರಿಸುತ್ತಾಳೆ. ಅದನ್ನು ನೇವರಿಸುತ್ತ)

ಸಣ್ಣಮ್ಮ : ಕುಡಿ.... ತಿಂಡಿ ಇದೆ.... ತೀರ್ಥ ಇದೆ....ತಿನ್ನು... ಕುಡಿ.

ಪಂಚರಂಗಿ : (ಅವಳು ಹೇಳಿದ್ದನ್ನೇ ಹೇಳುತ್ತದೆ) ಕುಡಿ.... ತಿಂಡಿ ಇದೆ.... ತೀರ್ಥ ಇದೆ... ತಿನ್ನು.... ಕುಡಿ....

## ದೃಶ್ಯ – ೨

(ನಾಯಿಮರಿಯನ್ನು ನಾಯಿ ಮನೆಯ ಕಂಬಿಗೆ ಹೊರಗೆ ಕಟ್ಟಿದ್ದಾರೆ. ಪಂಚರಂಗಿ ಮನೆಯ ಜಗಲಿಯ ಮೇಲಿನ ಪಂಜರದಲ್ಲಿದೆ. ಅಲ್ಲಿಂದಲೇ ಸಂಭಾಷಿಸುತ್ತಿದೆ.)

ಪಂಚರಂಗಿ : ನೀನು ಬಂದದ್ದು ನನಗೊಂದು ಜತೆ ಆಯಿತು. ಅಬ್ಬ! ಇದುವರೆಗೂ ಎಷ್ಟು ಬೇಸರವಾಗುತ್ತಿತ್ತು ಗೊತ್ತಾ? ಸಣ್ಣಮ್ಮ ಶಾಲೆಗೆ ಹೋದರೆ, ಅಜ್ಜ ಪೇಟೆಗೆ ಹೋದರೆ, ಅಜ್ಜಿ ಅಡಿಗೆ ಮನೆಯಲ್ಲಿದ್ದರೆ ನಾನೊಬ್ಬಳೇ, ಮತ್ತು ಆ ಕಳ್ಳರು?

ನಾಯಿಮರಿ : ಕುಂಯ್ ಕುಂಯ್.... ಕಳ್ಳರು?

ಬದನೆ ಗಿಡ : ಹೂಂ ಕಳ್ಳರು, ಎಂತಹ ಕೆಟ್ಟ ಕಳ್ಳರೆನ್ನುತ್ತಿ, ಅಜ್ಜಿ ಬೆನ್ನು ಬಗ್ಗಿಸಿ ನೀರು ಎತ್ತಿ, ಅಜ್ಜ ಬೆನ್ನು ಬಗ್ಗಿಸಿ ನೀರು ಎರೆದು ನಮ್ಮನ್ನು ಬೆಳೆಸಿದರೆ ನಮ್ಮನ್ನು ಕದಿಯುವವರೆಲ್ಲ ಈ ಕಳ್ಳರು.

ಮೆಣಸಿನ ಗಿಡ: ಹ್ಞಾಂ, ನಾನಂತೂ ಖಾರ. ತಿನ್ನಲಂತೂ ಅಲ್ಲ, ಕೊಯ್ಯುವುದು, ಬಿಸಾಡುವುದು, ಬುದ್ಧಿಗೇಡಿಗಳು.

ಅಬ್ಬಲಿಗೆ ಹೂ: ನಾನು ಎಷ್ಟು ಚೆನ್ನಾಗಿ ಅರಳಿ, ಇವತ್ತು ಬರುತ್ತಾಳೆ, ಕೊಯ್ಯುತ್ತಾಳೆ, ಅಜ್ಜಿ ಪೋಣಿಸಿ ಸಣ್ಣಮ್ಮನಿಗೆ ಮುಡಿಸುತ್ತಾಳೆ ಅಂತೆಲ್ಲ ಆಸೆಯಿಂದ ಇದ್ದರೆ –

ಸೇವಂತಿಗೆ : ಕಳ್ಳರು ಬಂದಾಯಿತು. ಪರಪರ ಹರಿದಾಯಿತು. ಕಟ್ಟಿ ಸಂತೆಗೆ ಹೋಗಿ ಮಾರಿಯಾಯಿತು.

ಬಾಳೆಗಿಡ : ದುಷ್ಟರಪ್ಪಾ, ಇಂಥಾ ದುಷ್ಟರು ಬೇರೆ ಇಲ್ಲ. ಆ ಮಂಗಾಣಿ ಉಂಟಲ್ಲ. ಅಬ್ಬಾ, ಒಂದು ಗೊನೆ ಬಿಡಲಿಕ್ಕಿಲ್ಲ. ಬಾಯಲ್ಲಿ ನೀರು ಬಿಡುತ್ತದೆ. ಬರೀ ಆಸೆಬುರಕ.

ಪೇರಲೆ : ಕೊಯ್ಯುವಾಗಲಾದರೂ ನೋವಾಗದಂತೆ ಕೊಯ್ಯಬಾರದೆ? ಕಳ್ಳರು ಬಂದರೆಂದರೆ ಅವರು ಓ ಅಷ್ಟು ದೂರ ಇರುವಾಗಲೇ

ಮಂದಾರ : ದೂರ ಇರುವಾಗಲೇ ಮೈ ನಡುಗುತ್ತದೆ! ಇನ್ನು ನೀನು ಬಂದೆ.

ಪೇರಲೆ : ನಾವೆಲ್ಲ ಬಚಾವು.

ನಾಯಿಮರಿ : ಅಯ್ಯೊ..... ನನಗೆ ಹೆದರಿಕೆಯಾಗುತ್ತದೆ. ಕುಂಯ್ ಕುಂಯ್.

ಪಂಚರಂಗಿ : ಎಳೆಮರಿ ನೀನು. ಪಾಪ, ಹೆದರಿಬಿಟ್ಟೆಯ? ನಾಯಿಯಾಗಿ ಹೆದರುವುದೇ? (ನಕ್ಕು) ತಿಂದು ಗಟ್ಟಿಯಾಗಿ ಮನೆಯ ಕಾಯುತ್ತೇನೆ ಎಂದೆ ಮತ್ತೆ?

ನಾಯಿಮರಿ : .....ಕಳ್ಳರು ಅಂದರೆ ಯಾರು? ಹೇಗಿರುತ್ತಾರೆ?

ಪಂಚರಂಗಿ : ಬಿಡು. ಒಂದೇ ಸಲಕ್ಕೆ ಎಲ್ಲ ಹೇಳಿ ನಿನ್ನನ್ನು ಹೆದರಿಸುವುದೇಕೆ? ಕಡೆಗೆ ಹೇಳುತ್ತೇನೆ.

ನಾಯಿಮರಿ : ಸಣ್ಣಮ್ಮ ಶಾಲೆಗೆ ಹೋಗುತ್ತಾಳಾ?

ಪಂಚರಂಗಿ : ಹೂ ಮತ್ತೆ. ಅಜ್ಜ ಪೇಟೆಗೆ ಹೋಗುತ್ತಾನೇ ಎಂದೆನಲ್ಲ. ಅಜ್ಜಿಗೆ ಒಳಗೆ ಕೆಲಸ. ನಾನು ಕಾಯಬೇಕಂತೆ ತೋಟವನ್ನು! ಕಳ್ಳರು ಪಂಜರದೊಳಗಿನ ನನ್ನ ಮಾತಿಗೆ ಬೆಲೆ ಕೊಡುತ್ತಾರಾ? ಕೂಗಿದರೆ ಅಣಕಿಸುತ್ತಾರೆ. ನನ್ನ ಸ್ವರವೇ ಸಣ್ಣದು. ಅಜ್ಜಿಯ ಕಿವಿ ಮಂದ. ನಾನು ನಾಲ್ಕು ಸಲ ಅಜ್ಜಿಯನ್ನು ಕರೆದರೆ, ಒಂದು ಸಲ ಅವಳಿಗೆ ಕೇಳೀತು. ಅದೇ ಧೈರ್ಯ ಅವರಿಗೆ. ಅದಕ್ಕೇ ಅಜ್ಜ ನಿನ್ನನ್ನು ಕರೆದುಕೊಂಡು ಬಂದದ್ದು. ಕಾಯಬೇಕು ತೋಟ. ತಿಳಿಯಿತೇ? ನಿನಗೇ ತಿಳುವಳಿಕೆ ಬರುವವರೆಗೆ ಧೈರ್ಯಕ್ಕೆ ನಾನು ಜೊತೆಗಿದ್ದೇನೆ.

(ಸಣ್ಣಮ್ಮ ಹಾಲು ತರುತ್ತಿದ್ದಾಳೆ.)

ಪಂಚರಂಗಿ : ಅದೋ, ಸಣ್ಣಮ್ಮ ಬಂದಳು ನೋಡು. ನಿನಗೆ ಕುಡಿಯಲು ತಂದಳು.

ಸಣ್ಣಮ್ಮ : (ನಾಯಿಮರಿಯ ಹತ್ತಿರ ಬಂದು ಮುದ್ದು ನೇವರಿಸಿ, ಹಾಲನ್ನು ಎದುರಲ್ಲಿಟ್ಟು) ಕುಡಿ.... ಇನ್ನೂ ಬೇಕಾದರೆ ಹೇಳು. ಕೊಡುತ್ತೇನೆ. ನಾಯಿಮರೀ, ನಿನ್ನ ಹೆಸರೇನು?

ನಾಯಿಮರಿ : (ಹಾಲು ಕುಡಿಯುತ್ತಿದ್ದದ್ದು ಮುಖವೆತ್ತಿ) ಕುಂಯ್ ಕುಂಯ್

ಸಣ್ಣಮ್ಮ : ನಿನ್ನ ತಾಯಿ ನಿನ್ನನ್ನು ಏನಂತ ಕರೆಯುತ್ತಾಳೇ ಅಂತ ಕೇಳಿದೆ.

ನಾಯಿಮರಿ : ಕುಂಯ್ ಕುಂಯ್, ಕುಂಯ್ ಕುಂಯ್.

ಸಣ್ಣಮ್ಮ : (ಜೋರಾಗಿ ನಗುತ್ತ) ಕುಂಯ್ ಕುಂಯ್ ಅಂತೆ! ಇದೇನು ಹೆಸರು? ನಾವೇ ಒಂದು ಹೆಸರಿಡೋಣವೇ ಪಂಚರಂಗೀ? ಏನು ಹೆಸರು ಇಡುವ ಹೇಳು.

ಪಂಚರಂಗಿ : ಏನು ಹೆಸರು ಇಡುವ ಹೇಳು.

ಸಣ್ಣಮ್ಮ : ನೀನೆಂದಂತೆ ಮರಿಯನ್ನು ಸರಿಯಾಗಿ ನೋಡಬೇಕಲ್ಲ. (ಇಬ್ಬರೂ ಮರಿಯ ಹತ್ತಿರ ಬಂದು ಪರೀಕ್ಷಿಸಿ ನೋಡುತ್ತ) ಕಪ್ಪು ಬಿಳೀ ಬಣ್ಣವಿದೆ.

ಪಂಚರಂಗಿ : ಪಿಳೀ ಪಿಳೀ ಕಣ್ಣು ಇದೆ.

ಸಣ್ಣಮ್ಮ : ಗೊಂಚಲಂಥ ಬಾಲವಿದೆ

ಪಂಚರಂಗಿ : ಗುಜ್ಜು ಗುಜ್ಜು ಕಾಲು ಇದೆ

ಸಣ್ಣಮ್ಮ : ಕಪ್ಪಣ್ಣ ಎನ್ನಲೇ?

ಪಂಚರಂಗಿ : ಕಪ್ಪಣ್ಣ ಅಲ್ಲ,

ಸಣ್ಣಮ್ಮ : ಬಿಳಿಯಣ್ಣ ಎನ್ನಲೇ?

ಪಂಚರಂಗಿ : ಬಿಳಿಯಣ್ಣ ಅಲ್ಲ.

ಸಣ್ಣಮ್ಮ : ಕಪ್ಪಣ್ಣ ಅಲ್ಲ,
ಬಿಳಿಯಣ್ಣ ಅಲ್ಲ

ಪಂಚರಂಗಿ : ಹೊಂಬಣ್ಣ ಇಲ್ಲ!

ಸಣ್ಣಮ್ಮ : ಫಜೀತಿ ಆಯಿತಲ್ಲ.

ಪಂಚರಂಗಿ : ...ಇಷ್ಟಕ್ಕೂ ಗೆಳತೀ. ಇದು ಹೆಣ್ಣೊ, ಗಂಡೋ?

ಸಣ್ಣಮ್ಮ : ಹೌದಲ್ಲ. ತಿಳಿದರೆ ಹೆಸರು ಇಡುವುದು ಸುಲಭವಾಗುತ್ತದೆ. ಅದರ ಹತ್ತಿರವೇ ಕೇಳುತ್ತೇನೆ. ನಾಯಿಮರೀ ಕುಂಯ್ ಕುಂಯ್, ನೀನು ಹೆಣ್ಣೋ ಗಂಡೋ.

ನಾಯಿಮರಿ : ಕುಂಂಂಯ್...

ಪಂಚರಂಗಿ : ನಾಚಿಗೆಯಾಗಿ ಬಿಟ್ಟಿತು. ಬಿಡು, ನಾಯಿಮರೀ, ಯಾಕೆ ನಾಚಿಕೊಳ್ಳುತ್ತೀ? ನಮ್ಮ ಸಣ್ಣಮ್ಮನಂಥವರು ಲೋಕದಲ್ಲೇ ಇಲ್ಲ. ಅಂತಹ ಒಳ್ಳೆಯವಳು ಗೊತ್ತೇ?

ನಾಯಿಮರಿ : (ಮೌನ)

ಸಣ್ಣಮ್ಮ : ಮಾತೇ ಆಡುವುದಿಲ್ಲವಪ್ಪ, ಹೆಸರಿಡುವುದಾದರೂ ಹೇಗೆ ಈಗ?

(ಅಜ್ಜ ಒಳಗಿಂದ ಹೊರಗೆ ಬರುತ್ತಿದ್ದಾನೆ)

ಪಂಚರಂಗಿ : ಏನು ಕೇಳಿದರು ಮಾತಾಡುವುದಿಲ್ಲ.... ಹಾಗಾದರೆ ಇದು ಹೆಣ್ಣು ಇರಬಹುದು.

ಸಣ್ಣಮ್ಮ : ಹಾಗೋ?

ಪಂಚರಂಗಿ : ಅಥವಾ.... (ಹೇಳುವ ರೀತಿ ಬದಲಿಸಿ) ಏನು ಕೇಳಿದರೂ ಮಾತೇ ಆಡುವುದಿಲ್ಲವಾದ್ದರಿಂದ.... ಗಂಡೂ ಇರಬಹುದು.

ಸಣ್ಣಮ್ಮ : (ಗಲಿಬಿಲಿಗೊಂಡು) ಹಾಗೂ ಇದೆಯೋ?

ಪಂಚರಂಗಿ : ಕೆಲವರು ಹಾಗೆನ್ನುತ್ತಾರೆ. ಕೆಲವರು ಹೀಗೆನ್ನುತ್ತಾರೆ. ನಿಜ ಹೇಗೆ, ನನಗೆ ತಿಳಿಯದು.

(ಅಜ್ಜ ಆಲಿಸಿ ಗಹಗಹಿಸಿ ನಗುತ್ತಾ ಬರುತ್ತಾನೆ.)

ಅಜ್ಜ : ಎಲಾ ಪೋಕರಿ ಪಂಚರಂಗೀ! ನೀನು ಸಣ್ಣಮ್ಮನಿಗೆ ಸರಿಯಾದ ತಂಗಿ. ಮಗೂ ಸಣ್ಣಮ್ಮ ಇದನ್ನು ಪಪ್ಪಿ ಎಂದು ಕರೆಯೋಣ. ಪಪ್ಪಿ ಎಂದರೆ ನಾಯಿಮರಿ ಅಂತ. ಹೇಗಿದೆ.

ಸಣ್ಣಮ್ಮ : ಹಾಂ, ಪಪ್ಪಿ.... ಪಪ್ಪಿ.... ಚೆನ್ನಾಗಿದೆ. ಪಪ್ಪಿ ಎಂತಲೇ ಹೆಸರಿಡೋಣ.

ಅಜ್ಜ : ಅದಕ್ಕೀಗ ಹಾಲು ಕುಡಿಸಿಯಾಯಿತೇ?

ಸಣ್ಣಮ್ಮ : ಓಹೋ ಪೂರ ಕುಡಿದುಬಿಟ್ಟಿದೆ ನೋಡು.

ಅಜ್ಜ : ಅದನ್ನು ಕರೆದುಕೊಂಡು ನೀನೂ ಪಂಚರಂಗಿಯೂ ಪೇಟೆಗೆ ಹೋಗಿ, ಒಂದು ಜೊತೆ ಕೋಟು ತನ್ನಿ. ತಲೆಗೆ ಒಂದು ಹ್ಯಾಟು ತನ್ನಿ. ನೀರು ಕೊಡಲು, ಊಟ ಕೊಡಲು ಬೇರೆ ಬೇರೆ ತಟ್ಟೆ ತನ್ನಿ. ನಡು ಮಧ್ಯೆಯ ಹಸಿವಿಗೆಂದು ಒಂದು ಪ್ಯಾಕೆಟು ಬಿಸ್ಕಿಟು ತನ್ನಿ. ದುಡ್ಡು ಗಿಡ್ಡು ಕೇಳಿದರೆ ಅಜ್ಜ ಕೊಡುತ್ತಾನೆ ಎನ್ನಿ.

ಸಣ್ಣಮ್ಮ : ಆಯಿತಜ್ಜ. (ಸಂಭ್ರಮ)

ಅಜ್ಜ : (ಪಂಚರಂಗಿಯತ್ತ ತಿರುಗಿ) ಮತ್ತೆ ಬಿಸ್ಕಿಟು ನೀನು ತಿಂದೀಯೆ.

ಪಂಚರಂಗಿ : ನನಗೇಕೆ ಧಣಿಗಳೇ. ನನಗೆ ಮೂರು ಚೂರು ಮೆಣಸು ಸಾಕು.

ಅಜ್ಜ : ಹಾಂ. ನನಗೆ ಕೆಲಸವುಂಟು. ನಾನು ಹೋಗುತ್ತೇನೆ. ನೀವೂ ಬೇಗ ಹೋಗಿ ಬನ್ನಿ.

ಸಣ್ಣಮ್ಮ : ಅಜ್ಜೀ, ನಾವು ಪೇಟೆಗೆ ಹೋಗಿ ಬರುತ್ತೇವೆ....

(ದಾರಿಯಲ್ಲಿ)

ಸಣ್ಣಮ್ಮ : ಕೇಳಿದೆಯಾ ಪಪ್ಪೀ? ಪಪ್ಪಿ ಎಂದರೆ ನಿನ್ನ ಹೆಸರು. ನಿನಗೊಂದು ಕೋಟು ಮತ್ತು ಹ್ಯಾಟು. ನಿನಗೆ ನೀರು ಕುಡಿಯಲು ತಟ್ಟೆ, ಉಣ್ಣಲೊಂದು ತಟ್ಟೆ.... ಬಿಸ್ಕಿಟು ಮಾತ್ರ ನನ್ನ ಬಳಿಯೇ ಇರಲಿ. ಕಡೆಗೆ ನೀನು ಆಸೆಯಿಂದ ಎಲ್ಲವನ್ನೂ ಒಂದೇ ಸಲಕ್ಕೆ ತಿಂದು....

ಪಂಚರಂಗಿ : ಭೇದಿ ಹತ್ತೀ.... ಊರೆಲ್ಲಾ....

ಸಣ್ಣಮ್ಮ : (ಮೂಗು ಒತ್ತಿ ಹಿಡಿದುಕೊಂಡು) ವ್ಹಾಂ....

(ಮೂವರು ಕುಪ್ಪಳಿಸಿ ಹಾರುತ್ತ ನಗುತ್ತ ಮುಂದುವರೆಯುವರು.)

ಸಣ್ಣಮ್ಮ : ಪಪ್ಪೀ.... ಇವಳು ಯಾರು ಗೊತ್ತಾಯಿತಾ ನಿನಗೆ? ಇವಳ ಹೆಸರು ಪಂಚರಂಗಿ. ನನ್ನ ಗೆಳತಿ. (ನಕ್ಕು) ಅಲ್ಲ ಗಿಳಿತಿ. ಕಾಡಿನಿಂದ ಬಂದಿದ್ದಳು. ಗಾಯವಾಗಿತ್ತು. ಪಾಪ.... ಯಾರೋ ತುಂಟರು ಚಿಟ್ಟುಬಿಲ್ಲು ಹೊಡೆದು....

ಪಂಚರಂಗಿ : (ಪಿಸಿಯಾಗಿ) ಮೆಲ್ಲ ಮಹಾರಾಯಿತಿ. ಇಲ್ಲೇ ಎಲ್ಲಾದರೂ ಇದ್ದಾರು.... ಅದೇ ಪಪ್ಪೀ, ನಾನು ಆಗಲೇ ಹೇಳಿದೆನಲ್ಲ ಆ ವಿಚಾರ.... ರಂಗಾಣಿ ಪಿಂಗಾಣಿ ಅಂತ... ಅವರಿಗೊಂದು ತೈನಾತಿ ಕೋತಿ. ಮಂಗಾಣಿ ಅಂತ. ಅವರ ಬಗ್ಗೆ ಜಾಗ್ರತೆಯಿಂದಿರು. ನಿನ್ನನ್ನೂ ಹಿಡಿಯಲು ಬಂದಾರು. ಆಗ ಜೋರಾಗಿ ಕಿರುಚಬೇಕು.

ನಾಯಿಮರಿ : (ಹೆದರಿ) ಕುಂಯ್ ಕುಂಯ್... ಅಮ್ಮಾ.... ನಂಗೆ ಅಮ್ಮ ಬೇಕು.... ನಾನು ಹೋಗುತ್ತೇನೆ.

ಸಣ್ಣಮ್ಮ : (ಮೆತ್ತಗೆ ಹೊಡೆದು) ಹ್ಹೆ! ಹಾಗೆಲ್ಲ ಅಳಬಾರದು. ಧೈರ್ಯ ಎಂದರೆ ಎಂತಹ ಧೈರ್ಯ ಇರಬೇಕು ನಿನಗೆ – ಗೊತ್ತೇ? ನೋಡೋಣ. ಕಳ್ಳರು ಬಂದೇಬಿಟ್ಟರು ಅಂತಿಟ್ಟುಕೋ.... ಜೋರಾಗಿ ಕಿರುಚಬೇಕು. ಹೇಗೆ? ಕಿರುಚು.

ನಾಯಿಮರಿ : (ಗಟ್ಟಿಯಾಗಿ) ಕುಂಯ್.... ಕುಂಯ್....

(ಅಡ್ಡದಿಂದ ಪಿಂಗಾಣಿ ರಂಗಾಣಿ ಮುಂಗಾಣಿಯರು ಇವರನ್ನು ನೋಡುತ್ತಾರೆ.)

ಪಿಂಗಾಣಿ : ನೋಡಿದೆಯ? ಟ್ರೈನಿಂಗ್, ಟ್ರೈನಿಂಗ್ ಇವಳದ್ದು! ಹ್ಞಂ ಹ್ಞಂ ಹ್ಞಂ! ಭೊಟು ಮೆಣಸಿನ ಕಾಯಿ.

ಮಂಗಾಣಿ : ಈಗಲಾದರೂ... ನಾನು ಹಾರಲೆ? ಹಾರಲೇ? ನಾಯ ಮೇಲೆ?

ಪಿಂಗಾಣಿ : ಶ್.... ಬೇಡ. ಸಮಯ ಸಾಧಿಸಿ ಹಾರು. ಈಗಲ್ಲ. ಅವರ ಹಿಂದೆಯೇ ಹೋಗೋಣ ಬಾ.

(ಸಣ್ಣಮ್ಮ ಪಂಚರಂಗಿ ಪಪ್ಪಿ ಮೂವರೂ ಕೈ ಕೈ ಹಿಡಿದುಕೊಂಡು ಸಂಭ್ರಮದಲ್ಲಿ ಹೆಜ್ಜೆ ಹಾಕುತ್ತ ಪೇಟೆಗೆ ಹೋಗುತ್ತಿದ್ದಾರೆ.)

(ಹಾಡು) ವ್ಹಾ ವ್ಹಾರೆ ವ್ಹಾ ।
ಏನು ಗಮ್ಮತೂ
ಊರ ಪೇಟೆ
ಓಡಿ ಬಂತು
ಭಾಳ ಗಮ್ಮತು!
ರಥದ ಬೀದಿಲೀ
ಲೈಟು ಝುಗಝುಗ
ಪುಗ್ಗೆ ಪಿಂಪಿರೀ
ಬೊಂಬೆಯಂಗಡಿ!
ವ್ಹಾ ವ್ಹಾರೆ ವ್ಹಾ!
ಏನು ಗಮ್ಮತೂ
ಊರ ಪೇಟೆ
ಓಡಿ ಬಂತು
ಭಾಳ ಗಮ್ಮತೂ

## ದೃಶ್ಯ – ೩

(ಪೇಟೆ. ದರ್ಜಿಯಂಗಡಿ. ರಿಬ್ಬನ್ನಿನ ಅಂಗಡಿ. ಪಾತ್ರೆಯಂಗಡಿ. ಚೈನಿನ ಅಂಗಡಿ. ಹೀಗೆ ಸಣ್ಣಮ್ಮ, ನಾಯಿಮರಿ ಮತ್ತು ಪಂಚರಂಗಿ ಬರುತ್ತಿದ್ದಾರೆ. ಕಳ್ಳರು ಹಿಂಬಾಲಿಸಿ ಹೊಂಚು ಹಾಕುತ್ತಿದ್ದಾರೆ. ಮುಸ್ತಫಾ ದರ್ಜಿ ಹೊಲಿಯುವುದರಲ್ಲಿಯೇ ಮಗ್ನವಾಗಿದ್ದಾನೆ. ಎದುರು ನಿಂತಿರುವವರ ಗೋಚರವೇ ಇಲ್ಲದಂತೆ)

ಸಣ್ಣಮ್ಮ : ನಮಸ್ಕಾರ ಮುಸ್ತಫಾ ದರ್ಜಿಯವರಿಗೆ.

ಮುಸ್ತಫಾ : ಓಹೋ ಹೋ ಹೋ! ನಮ್ಮ ಸಣ್ಣಮ್ಮ ! ಏನೂ? ಏನಾಗಬೇಕೂ?

ಸಣ್ಣಮ್ಮ : ಇವರು ನಮ್ಮ ದೋಸ್ತಿಗಳು. ನೋಡಿ. ಇವಳು ಪಂಚರಂಗಿ ಗಿಳಿ. ಅವಳಿಗೆ ಆಗಲೇ ಒಂದು ಪಂಚರಂಗಿನ ಅಂಗಿ ಹೊಲಿದುಕೊಟ್ಟಿದ್ದೀರಲ್ಲ. ನೆನಪಾಯಿತೇ?

ಮುಸ್ತಫಾ : (ತನ್ನ ಉದ್ದ ಟೊಪ್ಪಿಗೆ ತೆಗೆದು ಕೆಳಗಿರಿಸಿ ನುಣ್ಣಗಿನ ತಲೆಯನ್ನು ತಟ್ಟಿಕೊಳ್ಳುತ್ತಾ ತಡವಿಕೊಳ್ಳುತ್ತಾ – ಅವನ ತಲೆಯನ್ನು ನೋಡಿ ಸಣ್ಣಮ್ಮ ಮತ್ತು ಪಂಚರಂಗಿ ಕಿಟಕಿಟಿ ನಗುತ್ತಿರುವಾಗಲೇ–)

ಹಾಂ!.... ಈಗ ನೆನಪಾಯಿತು.... ತಲೆಯ ಈ ಕಡೆ, ಇಲ್ಲಿ, ನೆನಪಾಯಿತು ! (ಗಿಣಿಯ ಅಂಗಿ ಸರಿಯಾಯಿತೇ ಪರೀಕ್ಷಿಸುತ್ತಾನೆ.) ಹ್ಹೋ! ಎಷ್ಟು ಚೆನ್ನಾಗಿ ಅಳತೆಗೆ

ಸರಿಯಾಗಿ ಕುಳಿತಿದೆ ನೋಡು, ಅಂಗಿ. ಈ ಮುಸ್ತಫಾ ದರ್ಜಿ ಎಂದರೆ ಏನಂತ ಮಾಡಿದಿ!

ಸಣ್ಣಮ್ಮ : ಅದಕ್ಕೇ ಮತ್ತೆ ಬಂದೆವು. ಈಗ ನಮ್ಮ ಪಪ್ಪಿಗೊಂದು ಟೊಪ್ಪಿ, ಒಂದು ಕೋಟು ಆಗಬೇಕಲ್ಲ. ಕೋಟು ಒಂದಲ್ಲ, ಎರಡು.

ಪಂಚರಂಗಿ : ಒಂದು ಒಗೆದು ಹಾಕಿದರೆ ಇನ್ನೊಂದು!

ಮುಸ್ತಫಾ : ಸರಿ. (ಪಪ್ಪಿಯ ಕಿವಿ ಹಿಡಿದು ಹತ್ತಿರಕ್ಕೆ ಎಳೆದುಕೊಳ್ಳುತ್ತಾನೆ.)

ನಾಯಿಮರಿ : ಕುಂಯ್....

ಸಣ್ಣಮ್ಮ : ಹಾಗೆ ಎಳೆಯಬೇಡಿ. ಬಾ ಎನ್ನಿ. ಅದೇ ಬರುತ್ತದೆ. ಬಹಳ ಜಾಣ ಪಪ್ಪಿ.... ಪಪ್ಪಿ! ಸುಮ್ಮನೆ ನಿಲ್ಲು.

(ಪಪ್ಪಿ ಸುಮ್ಮನೆ ನಿಲ್ಲಲಾರದೆ ಕಿವಿ ಅಲ್ಲಾಡಿಸುತ್ತದೆ. ಬಾಲ ಅಲ್ಲಾಡಿಸುತ್ತದೆ. ಕುಂಯ್ ಕುಂಯ್ ರಾಗವನ್ನಂತೂ ಬಿಟ್ಟೇ ಇಲ್ಲ.)

ಸಣ್ಣಮ್ಮ : ಶ್!.... ಅಲ್ಲಾಡಬೇಡ ಅಂದೆನಲ್ಲ. ಅಳತೆ ಹೆಚ್ಚು ಕಮ್ಮಿ ಆದೀತು.

ಪಂಚರಂಗಿ : ಕೊನೆಗೆ ನಿನ್ನ ಕೋಟು ವಾರೆ ನಿಲ್ಲುತ್ತದೆ.

ಸಣ್ಣಮ್ಮ : ಫ್ರೆಂಡ್ಸ್ ಎಲ್ಲ ನಗುತ್ತಾರೆ.

(ಮುಸ್ತಫಾ ಅಳತೆ ತೆಗದುಕೊಂಡು ಬರೆದುಕೊಳ್ಳುತ್ತಾನೆ.)

ಸಣ್ಣಮ್ಮ : ಯಾವಾಗ ಕೊಡುತ್ತೀರಿ? ಕೋಟು, ಒಂದಂತೂ ಅರ್ಜೆಂಟ್. ಈಗಲೇ ಅದಕ್ಕೆ ತೊಡಿಸಬೇಕು. ನಾವು ಬೇರೆ ಅಂಗಡಿಗಳಿಗೆ ಹೋಗಿ ಬರುತ್ತೇವೆ. ಆಗ ಕೊಡಿ.

ಪಂಚರಂಗಿ : ಇನ್ನೊಂದನ್ನು ನಾಳೆ ಕೊಟ್ಟರೆ ಸಾಕು.

ಮುಸ್ತಫಾ : ಅಯ್ಯಮ್ಮ! ಅಷ್ಟು ಅರ್ಜೆಂಟ್! ನೋಡುವ. (ಹೊಲಿಯುವುದರಲ್ಲಿ ಮಗ್ನ. ಮೂವರೂ ಮುಂದೆ ನಡೆಯುತ್ತಾರೆ.)

ಪಿಂಗಾಣಿ : ಲೋ ಮಂಗಾಣಿ. ದರ್ಜಿಯ ಅಂಗಡಿಯಿಂದ ಅವನ ಕೋಟು ಟೊಪ್ಪಿ ಹಾರಿಸಿಕೊಂಡು ಬಾ. ಬೇಗ!

ರಂಗಾಣಿ : ಯಾಕಪ್ಪಾ?

ಪಿಂಗಾಣಿ : ನೀ ಸುಮ್ಮನಿರೊ. ಮಂಗಾಣಿ, ತಾ ಎಂದರೆ ತರಬೇಕು.... ಹೂಂ! (ಮಂಗಾಣಿ ಹಾರಿ ಮುಸ್ತಫಾ ಗೂಟದಲ್ಲಿ ತೂಗಿಸಿದ ಕೋಟು ಮತ್ತು ಟೊಪ್ಪಿಯನ್ನು ಹಾರಿಸುತ್ತದೆ.)

ಮುಸ್ತಫಾ : ಅಯ್ಯೋ.... ನನ್ನ ಕೋಟು... ಟೋಪಿ... ಮಂಗ ಮಂಗ! (ಮೂವರು ಕಳ್ಳರೂ ಪರಾರಿಯಾಗಿದ್ದಾರೆ. ಇತ್ತ ಸಣ್ಣಮ್ಮ ಪಾರ್ಟಿ ಪೇಟೆ ಸುತ್ತುತ್ತ ಇದೆ.)

ಸಣ್ಣಮ್ಮ : (ರಿಬ್ಬನು ಅಂಗಡಿಯ ಎದುರು ನಿಂತು) ಪಂಚರಂಗೀ, ಪಪ್ಪಿಗೊಂದು ರಿಬ್ಬನು ಕೊಳ್ಳೋಣ ತಾಳು.... ಸ್ವಾಮೀ, ಈ ರಿಬ್ಬನಿಗೆ ಏನು ಕ್ರಯ?

ಅಂಗಡಿಯವ : ಒಂದು ರೂಪಾಯಿ.

ಸಣ್ಣಮ್ಮ : ಎಂಟಾಣೆಗೆ ಬರುತ್ತದೋ?

ಅಂಗಡಿಯವ : ಚೋಟುದ್ದದ ಹುಡುಗಿ! ಚೌಕಾಸಿ ಮಾಡುತ್ತೀಯ? ಅದೇನು ಕಡಲೆಪುರಿ ಅಂತ ಮಾಡಿದೆಯ ಎಂಟಾಣೆಗೆ ಕೊಡಲಿಕ್ಕೆ?

ಪಂಚರಂಗಿ : ಅಯ್ಯಾ, ಅಂಗಡಿಯವರೆ, ಇವಳನ್ನು ಯಾರೆಂತ ತಿಳಿದಿರಿ! ನಮ್ಮ ಸಣ್ಣಮ್ಮ. ಅವಳು ರಿಬ್ಬನು ಕೊಳ್ಳುತ್ತಿರುವುದು ಅವಳಿಗಲ್ಲ, ಪಪ್ಪಿಗೆ. ಪ್ರಾಣಿ ಪಕ್ಷಿಗಳೆಂದರೆ ಪ್ರೀತಿ ಮಾಡುವ ನಮ್ಮ ಸಣ್ಣಮ್ಮನ ಹೆಸರೇ ಕೇಳಿಲ್ಲವೇ ನೀವು?

ಅಂಗಡಿಯವ : ಓಹೋ! ಇವಳೇಯೇನು ಸಣ್ಣಮ್ಮ ಅಂದರೆ? ಹೆಸರು ಕೇಳಿದ್ದೆ. ನೋಡಿರಲಿಲ್ಲ. ಎಷ್ಟು ಚಿಕ್ಕವಳು! ಆದರೂ ಎಷ್ಟು ದೊಡ್ಡ ಕೀರ್ತಿ! ಸಣ್ಣಮ್ಮಾ, ರಿಬ್ಬನು ತೆಗೆದುಕೋ. ಎಂಟೇ ಆಣೆಗೆ.

ಸಣ್ಣಮ್ಮ : ಯಾವ ಬಣ್ಣದ್ದು ಬೇಕು ಪಪ್ಪೀ? ನಿನಗೇನು ತಿಳಿಯುತ್ತಿದೆ?.... ನಾನೇ ಹೇಳುತ್ತೇನೆ. ಹೂಂ.... ಕೆಂಪು ಬಣ್ಣದ್ದು ಕೊಡಿ. ದುಡ್ಡು ಅಜ್ಜ ಕೊಡುತ್ತಾರೆ.

ಅಂಗಡಿಯವ : ಅದು ಅಡ್ಡಿಲ್ಲವಪ್ಪಾ.....

(ಅವರು ಮುಂದೆ ಸಾಗುತ್ತಾರೆ.)

ಪಾತ್ರೆಯಂಗಡಿಯಾತ : ಏನು ಬೇಕೂ ಸಣ್ಣಮ್ಮನವರಿಗೇ? ಬನ್ನಿ ಬನ್ನಿ.

ಸಣ್ಣಮ್ಮ : ನೀರಿಗೊಂದು ತಟ್ಟೆ, ಊಟಕ್ಕೊಂದು ತಟ್ಟೆ ಬೇಕಿತ್ತು. ನನಗಲ್ಲ. ಪಪ್ಪಿಗೆ ಕೊಡುವಿರಾ?

ಅಂಗಡಿಯವ : ಓಹೋ. ತೆಗೆದುಕೊಳ್ಳಿ. ಯಾವುದು ಬೇಕೋ ಅದು.

ಸಣ್ಣಮ್ಮ : ಎಷ್ಟು ಈ ತಟ್ಟೆಗೆ?

ಅಂಗಡಿಯವ : ಅದನ್ನು ನಾನೂ ನಿನ್ನ ಅಜ್ಜನೂ ನೋಡಿಕೊಳ್ಳುತ್ತೇವೆ. ನೀನು ತಟ್ಟೆ ಆರಿಸಿಕೊಂಡು ಹೋಗು.

(ಸಣ್ಣಮ್ಮನ ಪಾರ್ಟಿ ಸರಪಳಿಯ ಅಂಗಡಿಯ ಮುಂದೆ)

ಸಣ್ಣಮ್ಮ : ಪಂಚರಂಗೀ, ಪಪ್ಪಿಗೆ ಸರಪಳಿಯೇ ಇಲ್ಲ. ಅಜ್ಜನಿಗೆ ನೆನಪೂ ಆಗಿಲ್ಲ. ಒಂದು ಕೊಳ್ಳೋಣವೇ?

ಪಂಚರಂಗಿ : ಅಜ್ಜ ಜೋರು ಮಾಡಿದರೆ?

ಸಣ್ಣಮ್ಮ : ಅಜ್ಜ ಜೋರು ಮಾಡುವುದಿಲ್ಲ. ಅಜ್ಜಿ ಗದರಿದರೆ ಅಜ್ಜನ ಬಳಿ ಓಡಿದರಾಯಿತು.

ಪಂಚರಂಗಿ : ಕೊಳ್ಳು ಮತ್ತೆ.

ಸಣ್ಣಮ್ಮ : ಸರಪಳಿಯವರೇ ಈ ಸರಪಳಿಗೆ ಎಷ್ಟು?

ಸರಪಳಿಯವ : ಎರಡು ರೂಪಾಯಿ.

ಸಣ್ಣಮ್ಮ : ಅಜ್ಜ ಹೇಳದೆಯೇ ಕೊಳ್ಳುತ್ತಿದ್ದೇವೆ. ಸ್ವಲ್ಪ ಕಡಿಮೆ ಮಾಡಿ. ಒಂದು ರೂಪಾಯಿಗೆ ಬರದೇ?

ಸರಪಳಿಯವ : ಇದೇನು ನಿನ್ನ ಅಜ್ಜನ ಅಂಗಡಿಯೇ? ಒಂದು ರೂಪಾಯಿಗೆ ಸರಪಳಿಯಂತೆ! ಒಂದು ರೂಪಾಯಿಗೆ ಗಿರಪಳಿಯೂ ಬರಲಿಕ್ಕಿಲ್ಲ. ಸುಖದುಃಖ ಹೇಳುತ್ತಾಳೆ ಬೇರೆ. ಹೋಗು ಮುಂದೆ ಹೋಗು.

ಪಂಚರಂಗಿ : ವ್ಯಾಪಾರಕ್ಕೆ ಕುಳಿತವರು ಇಷ್ಟು ಸಿಟ್ಟು ಮಾಡಿದರೆ ಹೇಗೆ? ಏನಾದರೂ ಒಂಚೂರು ಚರ್ಚೆ ಮಾಡದೆ ಕೊಳ್ಳಲು ಆದೀತೆ? ಹೋಗಲಿ. ಒಂದೂ ಬೇಡ. ಎರಡೂ ಬೇಡ, ಒಂದೂವರೆಗೆ ಕೊಡಿ. ಇದು ಅವಳಿಗಲ್ಲ. ಅವಳ ಪಪ್ಪಿಗೆ.

ಸರಪಳಿಯವ : ಯಾರಿಗಾದರೆ ನನಗೇನು? ಎರಡು ರೂಪಾಯಿ ಎಂದರೆ ಎರಡೇ ರೂಪಾಯಿ. ದಮಡಿ ಕಡಿಮೆ ಇಲ್ಲ.

(ಸಣ್ಣಮ್ಮ ಮುಂದೆ ಹೋದಂತೆ ಮಾಡುತ್ತಾಳೆ. ಕರೆಯುವನೇನೋ ಅಂತ ಹಿಂದೆ ನೋಡುತ್ತಾಳೆ. ಅವನು ಅವಳ ಕಡೆಗೆ ನೋಡುತ್ತಿಲ್ಲ. ಮತ್ತೆ ಬರುತ್ತಾಳೆ.)

ಸಣ್ಣಮ್ಮ : ಇರಲಿ. ಕೊಡಿ. ದುಡ್ಡು ಮಾತ್ರ... ನನ್ನ ಅಜ್ಜ.... ಕೊಡುತ್ತಾರೆ.

ಸರಪಳಿಯವ : ಹೂಂ. ಹಾಗೆ ಬಾ ದಾರಿಗೆ. ದುಡ್ಡನ್ನು ಸಂಜೆಯೊಳಗೆ ಕೊಡಬೇಕು.

ಪಂಚರಂಗಿ : ಎಲ್ಲ ಆಯಿತು ಬಿಸ್ಕಿಟು?

ಬಿಸ್ಕಿಟಿನ ಅಂಗಿಡಯವ : ಬನ್ನಿ ಸಣ್ಣಮ್ಮಾ. ನಿಮಗಾಗಿಯೇ ಇವತ್ತಷ್ಟೇ ಗರಿಗರಿ ಬಿಸ್ಕಿಟು ತಂದು ಇಟ್ಟುಕೊಂಡಿದ್ದೇನೆ.

ಸಣ್ಣಮ್ಮ : ನನಗೆ ಬೇಡ – ಪಪ್ಪಿಗೆ.

ಬಿಸ್ಕಿಟಿನ ಅಂಗಡಿಯವ : ಪಪ್ಪಿಗೆ?.... (ನಾಯಿ ಬಿಸ್ಕಿಟಿನ ಪ್ಯಾಕೆಟು ಮುಟ್ಟಿ ಮುಟ್ಟಿ ಮೆತ್ತಗಿರುವದನ್ನು ದಾಟಿಸಿ) ಒಂದೂವರೆ.

ಸಣ್ಣಮ್ಮ : ಅದನ್ನು ಅಜ್ಜ ಕೊಡುತ್ತಾರೆ.

ಅಂಗಡಿಯವ : ಸರಿ. ಸಣ್ಣಮ್ಮನ ಮನೆಗೆ ನಾಯಿ ಬಂತು. ಇನ್ನು ಮೇಲೆ ಬಿಸ್ಕಿಟು ಪ್ಯಾಕೆಟು ಜಾಸ್ತಿ ತರಿಸಬೇಕಾಯಿತು.

(ಎಲ್ಲವನ್ನೂ ಹಿಡಿದು ಮೂವರೂ ಇನ್ನೇನು ಮೂಲೆಯಲ್ಲಿ ತಿರುಗಬೇಕು.)

ಮಂಗಾಣಿ : (ಮುಸ್ತಫಾನ ಕೋಟು, ಟೊಪಿ ಧರಿಸಿ ದಬಕ್ಕನೆ ಹಾರಿ ಎದುರು ನಿಲ್ಲುತ್ತಾನೆ) ಓಯ್, ಸಣ್ಣಮ್ಮನವರೇ, ಗುರುತು ಸಿಗಲಿಲ್ಲವೇ? ನಾನು ದರ್ಜಿ, ಮುಸ್ತಫಾ ದರ್ಜಿ. ನೀವು ಆಚೆ ಹೋದಿರಿ! ಈಚೆ ಕೋಟು ರೆಡಿ ಆಗಿಯಾಯಿತು. ನಾನೇ ತಂದೆ. ಸರಿಯಾಗುತ್ತದಾ ನೋಡುವ. (ಸಣ್ಣಮ್ಮ ಪಪ್ಪಿಯನ್ನು ಅವನತ್ತ ಕಳಿಸುತ್ತಾಳೆ. ಮಂಗಾಣಿ ಪಪ್ಪಿಯನ್ನು ದೊಡ್ಡ ಕೋಟಿನೊಳಗೆ ಅಡಗಿಸಿಕೊಂಡು ಓಡತೊಡಗುತ್ತಾನೆ.)

ಪಂಚರಂಗಿ : ಅಯ್ಯೋ! ಮೋಸ ಮೋಸ, ನಡುಪೇಟೆಯಲ್ಲಿ ಹಾಡುಹಗಲಲ್ಲಿ ಮೋಸ!

ಸಣ್ಣಮ್ಮ : ನನ್ನ ಪಪ್ಪಿಯನ್ನು ಕಳ್ಳ ಕದ್ದಿದ್ದಾನೆ!.... ಕಳ್ಳ ಕಳ್ಳ! (ಎಲ್ಲರೂ ಸೇರಿ ಪೆಟ್ಟು ಹಾಕುತ್ತಾರೆ. ಮಂಗಾಣಿ ಮೊದಮೊದಲು ಗುರ್ರ್ ಟರ್ರ್ ಎಂದು ಹೆದರಿಸಿ ಸೋತು, ನಾಯಿಮರಿಯನ್ನು ಬಿಟ್ಟು, ಇದ್ದೆನೋ ಸತ್ತೆನೋ ಎಂದು ಓಡಿಹೋಗುತ್ತದೆ.)

ಅಂಗಡಿಯವ : ಹೀಗೆಲ್ಲ ಈ ಮರಿಯನ್ನು ಕರೆದುಕೊಂಡು ಪೇಟೆಗೆ ಬರಬೇಡಿ. ಇನ್ನು ಅಲ್ಲಿ ಇಲ್ಲಿ ತಿರಗದೆ ಸೀದಾ ಮನೆಗೆ ಹೊರಡಿ.

(ಬರುತ್ತ ಬಣ್ಣ ಬಣ್ಣದ ಶರಬತ್ತಿನ ಅಂಗಡಿಯೆದುರು)

ಪಂಚರಂಗಿ : ಸಣ್ಣಮ್ಮ, ಬಾಯಾರಿಕೆ,

ನಾಯಿಮರಿ : (ಎಳೆ ಕೀಚಲು ದನಿಯಲ್ಲಿ) ನನಗೂ ಬಾಯಾರಿಕೆ.

ಸಣ್ಣಮ್ಮ : (ದಣಿದು) ನನಗೂ ಬಾಯಾರಿಕೆ. ಅಂಗಡಿಯವರೇ, ಸಂಜೆ ಅಜ್ಜ ಬಂದು ದುಡ್ಡು ಕೊಡುತ್ತಾರೆ. ಮೂರು ಶರಬತ್ತು ಕೊಡಿ. (ಕುಡಿಯುತ್ತಾರೆ. ನೆತ್ತಿಗೇರಿದಂತಾಗಿ ಕೆಮ್ಮು ಬರುತ್ತದೆ. ನೆತ್ತು ತಟ್ಟಿಕೊಳ್ಳುವರು. ಎದುರಿಗೆ ಬೊಂಬೆಯಂಗಡಿ ಕಾಣಿಸುವುದು.)

ಸಣ್ಣಮ್ಮ : ಅಗೋ! ಅಲ್ಲಿ ಸೈನಿಕ ಬೊಂಬೆಗಳಿವೆ!

ಬೊಂಬೆಯವ : ನೋಡಿ, ಇವು ಹೋರಾಡುತ್ತವೆ. (ಕೀ ಕೊಡುತ್ತಾನೆ, ಗೊಂಬೆಗಳು ಹೋರಾಡುತ್ತವೆ.)

ಸಣ್ಣಮ್ಮ : ಚೆನ್ನಾಗಿದೆ. ನಮ್ಮ ನಾಯಿಮರಿಯನ್ನು ನೋಡಿಕೊಳ್ಳಲು ಬೇಕು... ಎರಡು ಕೊಡಿ. ದುಡ್ಡು ನಮ್ಮಜ್ಜ ಕೊಡುತ್ತಾನೆ.

(ಮತ್ತೆ ಮುಸ್ತಫಾನ ಅಂಗಡಿ ಮುಂದೆ)

ಸಣ್ಣಮ್ಮ : ಕೋಟು ಹೊಲಿದಾಯಿತೇ?

ಮುಸ್ತಫಾ : ತಕೋ ಮಗೂ. ಟೊಪ್ಪಿಯೂ ತಕೋ.

ಸಣ್ಣಮ್ಮ : ಮುಸ್ತಫಾ ದರ್ಜಿಯವರೆ, ನಿಮ್ಮ ವೇಷದಲ್ಲಿ ಆ ಮಂಗಾಣಿ ಬಂದು ಮೋಸ ಮಾಡಿ ನಮ್ಮ ಪಪ್ಪಿಯನ್ನು ಹಿಡಿದುಬಿಟ್ಟದ್ದಲ್ಲವೆ! ಅಬ್ಬಾ! ಹೆದರಿಕೆಯಿಂದ ನಮ್ಮ ಗಂಟಲೆಲ್ಲ ಒಣಗಿ ಹೋಯಿತು. ಜನರೆಲ್ಲ ಸೇರಿ ಮರಿಯನ್ನು ಬಿಡಿಸಿಕೊಟ್ಟರು. ನೋಡಿ – ಅದಕ್ಕೆಂದೇ ಈ ಸೈನಿಕ ಗೊಂಬೆಗಳನ್ನು ತೆಗೆದುಕೊಂಡುಬಿಟ್ಟೆ.

ಮುಸ್ತಫಾ : ಅದಾ? ಆ ಮಂಗಾಣಿ. ಒಂದು ದಿನ ನಾನದನ್ನು ಚಚ್ಚಿ ಹಾಕಲಿಕ್ಕುಂಟು. ನೀವು ಜಾಗ್ರತೆಯಾಗಿ ಮನೆಗೆ ಹೋಗಿ.

(ಮೂವರೂ ಮನೆಗೆ ಮರಳುವರು)

(ಹಾಡು)

ನಾಯಿಯೂ ಗಿಣಿಯೂ
ಹುಡುಗಿಯೂ ಪಾರ್ಟಿ
ಪೇಟೇ ಬೀದಿ
ಎಲ್ಲಾ ಸುತ್ತಿ
ಬಿಸಿಲಿಗೆ ಬಳಲಿ
ಶರಬತು ಕುಡಿದರೆ
ನೆತ್ತಿಗೆ ಏರಿ
ಕೆಮ್ಮು ಹತ್ತಿ
ಧಬ ಧಬ ಧಂ ಧಂ
ನೆತ್ತಿಗೆ ಬಡಿದು
ಅಮ್ಮಮ್ಮಾ
ಎಂಥಾ ಕೆಮ್ಮು!
ಮನೆಗೋಡಿದರು
ಕಾಲೆತ್ತಿ!

(ಕಾಲೆತ್ತಿ ಎನ್ನುವಾಗ ಪಪ್ಪಿ ತನ್ನ ಮನೆಯ ಬಳಿಯೇ ಮೂತ್ರಕ್ಕೆಂದು ಕಾಲೆತ್ತಿ ನಿಂತಿರುತ್ತದೆ.)

ಸಣ್ಣಮ್ಮ : ಥೂ. ನಾಚಿಗೆ ಇಲ್ಲ? ಹಾಗೆಲ್ಲ ಸಿಕ್ಕ ಸಿಕ್ಕಲ್ಲಿ ಗಲೀಜು ಮಾಡಬಾರದು. ಬಾ...ದೂರ ಹೋಗುವ.

# ಅಂಕ : ಎರಡು

## ದೃಶ್ಯ – ೧

(ಪಿಂಗಾಣಿ, ರಂಗಾಣಿ ಮತ್ತು ಮಂಗಾಣಿ ಪೊದೆಯ ಹಿಂದೆ ಅವಿತಿದ್ದಾರೆ. ನಾಯಿಮರಿ, ಕಟ್ಟಿದಲ್ಲಿಯೇ ಕೋಟು ಟೊಪ್ಪಿ ರಿಬ್ಬನು ಧರಿಸಿ ಆಟವಾಡುತ್ತಿದೆ. ಹಾಲಿನ ತಟ್ಟೆಯನ್ನು ಹಿಡಿದು ಸಣ್ಣಮ್ಮ ಬರುತ್ತಾಳೆ.)

ಸಣ್ಣಮ್ಮ : (ನಾಯಿಯ ಮುಂದೆ ಹಾಲಿನ ತಟ್ಟೆ ಇಡುತ್ತಾ) ಪಂಚರಂಗೀ, ನಿಂಗೇನಾದರೂ ಬೇಕೆ?

ಪಂಚರಂಗಿ : ನನ್ನದೆಲ್ಲ ಆಗಲೇ ಮುಗಿಯಿತು ಸಣ್ಣಮ್ಮಾ.

ಸಣ್ಣಮ್ಮ : ಬೇಗ ಕುಡಿ ಪಪ್ಪೀ, ಶಾಲೆಗೆ ಹೊತ್ತಾಯಿತು.

(ಹಾಲು ಕುಡಿದ ಪಪ್ಪಿಯನ್ನು ಒಂದು ಗಳಿಗೆ ಬಿಚ್ಚಿ ಅದರೊಡನೆ ಆಟವಾಡುತ್ತಾಳೆ.)

(ಹಾಡು)

ಕಪ್ಪು ಬಿಳಿಯ
ಪಪ್ಪಿ
ಅದಕ್ಕೆ ಒಂದು
ಟೊಪ್ಪಿ
ಕೋಟು ಟೇಪು
ತೊಟ್ಟುಕೊಂಡು
ಠಾಕು ಠೀಕು
ಠೀಕು ಠಾಕು
ಟಿಪ್ಪಿ ಟಿಪ್ಪಿ ಟಿಪ್ಪಿ!

(ಪಂಚರಂಗಿ ತಲೆದೂಗುತ್ತಾ ತಾಳ ಹಾಕುತ್ತದೆ. ಗಿಡ ಮರಗಳೂ ಹೆಜ್ಜೆ ಹಾಕುತ್ತವೆ.)

ಸಣ್ಣಮ್ಮ : (ನಾಯಿಯನ್ನು ಕಟ್ಟುತ್ತ) ಹಾಂ. ನಿನ್ನೊಡನೆ ಆಟವಾಡುತ್ತಿದ್ದರೆ ಶಾಲೆ ಗಂಟೆ ಹೊಡೆಯುತ್ತದೆ.... ಪಪ್ಪೀ, ಬರುತ್ತೀಯಾ ನನ್ನ ಶಾಲೆಗೆ?.... ಬರಬಹುದು ನೀನೂ. ನೋಡೂ, ಮೇರೀ ಅಂತ ಇದ್ದಳಂತೆ. ಅವಳ ಜೊತೆ ಅವಳ ಕುರಿಮರಿ ಶಾಲೆಗೆ ಬಂದಿತ್ತಂತೆ.... ಗೊತ್ತಾ? ನಿಂಗೆ ಆ ಪದ್ಯ ಗೊತ್ತಾ? (ಗುಣುಗುಣಿಸುತ್ತಾಳೆ)

ಮೇರೀ ಹ್ಯಾಡ್ ಎ ಲಿಟ್ಲ್ ಲ್ಯಾಂಬ್,

ಲಿಟ್ಲ್ ಲ್ಯಾಂಬ್

ಲಿಟ್ಲ್ ಲ್ಯಾಂಬ್....

(ಸಣ್ಣಮ್ಮ ಒಳಗೋಡುತ್ತಾಳೆ. ಈ ಶಿಶುಗೀತೆಯನ್ನು ಹಿನ್ನೆಲೆಯಲ್ಲಿ ಮೆಲುವಾಗಿ ನುಡಿಸುತ್ತಿದ್ದಂತೆ, ಮುಂದಿನ ದೃಶ್ಯ)

ಸಣ್ಣಮ್ಮ : ಅಜ್ಜೀ ಬೇಗ ತಿಂಡಿ ಕೊಡು.... ಸಾಕು. ಇನ್ನು ಬೇಡ ಅಜ್ಜೀ.... ಹಾಕಬೇಡ. ತಿನ್ನಲು ಟೈಮಿಲ್ಲ.

ಅಜ್ಜ : (ಪೇಟೆಗೆ ಹೊರಡುವವ) ಚಾ ಪುಡಿ, ಸಕ್ಕರೆ.... ಹಾಂ! ಮತ್ತೇನು ಬೇಕು ಹೇಳು. ಬೆಲ್ಲವೂ ಇಲ್ಲವೋ? ಸರಿ. ಬೇಗ ಬೇಗ ಹೇಳಬೇಕು. ಹೋಗುವಾಗ ಮರೆಯುವುದು. ಬಂದ ಮೇಲೆ ಹೇಳುವುದು! ನಿನ್ನ ಅಭ್ಯಾಸವೇ ಹೀಗೆ ಆಗಿಬಿಟ್ಟಿತಲ್ಲ!

ಸಣ್ಣಮ್ಮ : ನನ್ನ ಬಳಪ ಎಲ್ಲಜ್ಜೀ.... ನಿನ್ನೆ ಇಲ್ಲಿಯೇ ಇಟ್ಟಿದ್ದೇ.

ಅಜ್ಜಿ : ದೇವರೆ! ನನಗಿರುವುದು ಎರಡೇ ಕೈ. ಏನೆಲ್ಲ ಮಾಡಿಯೇನು?

ಸಣ್ಣಮ್ಮ : ಬೇಗ ಟಿಫಿನ್ ಬಾಕ್ಸ್ ಕೊಡು.

(ಹೊರಗೆ)

ಪಿಂಗಾಣಿ : ನಾಯಿಮರಿಯನ್ನು ಆದಷ್ಟು ಬೇಗ ಮುಗಿಸಲೇಬೇಕು. ಹೇಗೆ?

ರಂಗಾಣಿ : ಹೇಗೆ ಆಗುತ್ತದೋ ಹಾಗೆ.

ಪಿಂಗಾಣಿ : ನೋಡು ನೋಡು. ಇದೇ ರೀತಿ ಮಾತಾಡಿದರೆ ನಿನ್ನ ಕತ್ತು ಹಿಡಿದು....

ರಂಗಾಣಿ : ಯಾಕೆ ಆ ನಾಯಿಮರಿಯ ಬಗ್ಗೆ ಇಷ್ಟು ಚಿಂತಿಸುತ್ತೀಯ? ಇದ್ದುಕೊಳ್ಳಿ ಬಿಡು. ಮರಿ ಇನ್ನೂ. ಎಷ್ಟು ಚೆನ್ನಾಗಿ ಆಟವಾಡುತ್ತಿದೆ ನೋಡು.

ಪಿಂಗಾಣಿ : ಹಾಗೆಲ್ಲ ಬಿಡುವ ಹಾಗಿಲ್ಲಪ್ಪಾ. ಅದನ್ನು ದೊಡ್ಡದಾಗಲು ಬಿಟ್ಟರೆ ನಾವು ಮುಂದೆ ಈ ತೋಟದೊಳಗೆ ಕಾಲೇ ಇಡುವ ಹಾಗಿಲ್ಲ.

ರಂಗಾಣಿ : ನನಗೊಂದು ಉಪಾಯ ಹೊಳೆಯಿತು. ಅದಕ್ಕೆ ನೀರೇ ಸಿಗದಂತೆ ಮಾಡಿದರೆ?

ಪಿಂಗಾಣಿ : ಹೇಗೆ? ಅದು ನೀರು ಕುಡಿಯುವವರೆಗೂ ಅವಳು ಅಲ್ಲಿಯೇ ನಿಂತಿರುತ್ತಾಳೆ.

ಮಂಗಾಣಿ : ಅನ್ನವೇ ಸಿಗದಂತೆ ಮಾಡಿದರೆ?

ಪಿಂಗಾಣಿ : ಹೇಗೆ ಮಾಡಲಿ? ಅದು ಪೂರ್ತಿ ಉಣ್ಣುವವರೆಗೂ ಅವಳು ಅಲ್ಲಿಯೇ ನಿಂತಿರುತ್ತಾಳೆ.

ರಂಗಾಣಿ : ಅದು ಒಂದು ಎರಡಕ್ಕೆಂದು ಹೋಗುತ್ತದಲ್ಲ – ಆಗ?

ಪಿಂಗಾಣಿ : ಆಗಲೂ ಅವಳು ಅದರ ಸರಪಳಿ ಹಿಡಿದುಕೊಂಡು ಜೊತೆಗೇ ಇರುತ್ತಾಳೆ.

ರಂಗಾಣಿ : ಹಾ... ನನ್ನ ಉಪಾಯಗಳೆಲ್ಲ ಖರ್ಚಾದವು. ತಲೆ ಖಾಲಿ! ನೋಡಿಲ್ಲಿ ಬೇಕಾದರೆ!

ಮಂಗಾಣಿ : (ಪಿಸುವಾಗಿ) ತಡೆಯಿರಿ ತಡೆಯಿರೀ... ಅದೋ... ಸಣ್ಣಮ್ಮ ಶಾಲೆಗೆ ಹೊರಟಳು. ಅಜ್ಜ ಪೇಟೆಗೆ ಹೊರಟರು.... ಸಂದರ್ಭ ಒದಗಿ ಬರುತ್ತಿದೆ.

(ಅಜ್ಜನೊಂದಿಗೆ ಸಣ್ಣಮ್ಮ ಶಾಲೆಗೆ ಹೊರಡುತ್ತಾಳೆ.)

ಸಣ್ಣಮ್ಮ : ಅಜ್ಜೀ. ನಾನು ಶಾಲೆಗೆ ಹೋಗುತ್ತೇನೆ. ನಾಯಿಮರಿ ಜೋಪಾನ.

ಅಜ್ಜಿ : ಆಯಿತು ಮಗೂ.

ಸಣ್ಣಮ್ಮ : ಪಂಚರಂಗೀ..... ನಾನು ಶಾಲೆಗೆ ಹೋಗುತ್ತೇನೆ. ಪಪ್ಪಿ ಜೋಪಾನ.

ಪಂಚರಂಗಿ : (ನಡುಗು ಸ್ವರದಲ್ಲಿ) ಆಯಿತು ಸಣ್ಣಮ್ಮಾ.

ಅಜ್ಜ : ಮಗೂ, ಬೇಗ ನಡೆ, ಶಾಲೆಗೆ ಹೊತ್ತಾಯಿತು. ಮನೆಯಲ್ಲಿದ್ದವರು ಪಪ್ಪಿಯನ್ನು ನೋಡಿಕೊಳ್ಳದೆ ಇರುತ್ತಾರೆಯೇ?

ಸಣ್ಣಮ್ಮ ; ಆದರೆ ಆ ಕಳ್ಳರು ಅಜ್ಜಾ... ಕೆಟ್ಟವರು. ಪಪ್ಪಿಯನ್ನು ಹಿಡಿಯಲು ಕಾಯುತ್ತಿದ್ದಾರೆ. ನನಗೆ ಅವರದೇ ಭಯ. ಪಪ್ಪೀ, ಟಾ ಟಾ, ಜಾಗ್ರತೇ...

ಅಜ್ಜ : ಹಾಗೆ ಅಜ್ಜಿ ಇದ್ದಾಳಲ್ಲ. ಹೆದರಬೇಡ. ಯೇ ಇವಳೇ, ಮಧ್ಯಾಹ್ನ ಪಪ್ಪಿಗೆ ಊಟ ಕೊಡಲು ಮರೆಯಬೇಡ. ಅದರ ಊಟ ಮುಗಿಯುವವರೆಗೂ ಅತ್ತಿತ್ತ ಹೋಗಬೇಡ.

ಸಣ್ಣಮ್ಮ : (ಅರ್ಧ ದಾರಿಗೆ ಹೋದವಳು) ತಡಿ ಅಜ್ಜಾ, ಈಗ ಬಂದೆ. (ಒಳಗೆ ಓಡಿಹೋಗಿ ಸೈನಿಕ ಗೊಂಬೆಗಳನ್ನು ತರುತ್ತಾಳೆ. ಅವನ್ನು ನಾಯಿಮನೆಯ ಆಚೆ ಈಚೆ ನಿಲ್ಲಿಸಿ) ಪಪ್ಪಿಗೆ ಏನೂ ಆಗದಂತೆ ನೋಡಿಕೊಳ್ಳಿ ಗೊಂಬೆಗಳೇ. ಅಜ್ಜಿಗೆ ಕಿವಿ ಕೇಳಿಸುವುದಿಲ್ಲ. ಪಂಚರಂಗಿಯೋ, ಪಂಜರದೊಳಗೆ. ಹೊರಗೆ ಬಿಟ್ಟರೆ ಅದರ ಪ್ರಾಣಕ್ಕೂ ಅಪಾಯ. ಕಳ್ಳರು ಪಪ್ಪಿಯನ್ನು ಕದಿಯಲು ಬಂದರೆ ಪ್ರಾಣ ಭಯ ಬಿಟ್ಟು ಉಸಿರು ಇರುವವರೆಗೂ ಹೋರಾಡಬೇಕೂ?.... ತಡೆಯಿರಿ. ನಿಮಗೆ ಕೀ ಕೊಟ್ಟೇ ಹೊರಡುತ್ತೇನೆ. (ಕೀ ಕೊಡುತ್ತಾಳೆ. ತಕ್ಷಣ ಗೊಂಬೆಗಳು ಮಿಲಿಟರಿ ಗತ್ತಿನಲ್ಲಿ – ಒನ್ ಟೂ ಎಂದು ಬಲಗೈಯನ್ನು ಒರೆಯ ಮೇಲಿಟ್ಟು ಖಡ್ಗವನ್ನು ಅರ್ಧ ಸೆಳೆದು ಒಳಬಿಡುತ್ತವೆ.)

ಅಜ್ಜ : ಸಣ್ಣಮ್ಮ, ಇವತ್ತು ಶಾಲೆಯಲ್ಲಿ ಪೆಟ್ಟು ತಿನ್ನುತ್ತಿ ನೋಡು ಹೊತ್ತಾದದ್ದಕ್ಕೆ.

ಸಣ್ಣಮ್ಮ : ಬದನೇ ಭಾವಯ್ಯ, ಮೆಣಸಿನ ಮಾವಯ್ಯ, ಅಬ್ಬಲಿಗೆ ಚಿಕ್ಕಮ್ಮಾ, ನಮ್ಮ ಪಪ್ಪಿಗೆ ಏನೂ ಅಪಾಯ ಆಗದಂತೆ ನೋಡಿಕೊಳ್ಳಿ... ಸೇವಂತಿಗೆ ಅಕ್ಕಾ, ಪೇರಲೆ ಚಿಕ್ಕಪ್ಪಾ.... (ಹೋಗುತ್ತಾ ದನಿ ಕ್ಷೀಣಿಸುತ್ತದೆ)

(ಕಳ್ಳರು ಅವಿತುಕೊಂಡ ಪೊದೆ ಟಿಸಿಲು ಮುಂದೆ ನೀಡುತ್ತದೆ, ಕರೆಯುವಂತೆ. ಸಣ್ಣಮ್ಮ ಗಮನಿಸದೆ ಹೊರಟು ಹೋಗುತ್ತಾಳೆ.)

ಮಂಗಾಣಿ : ಚಾಡಿ ಹೇಳುತ್ತೀಯಾ? ತಡೆ. ನಮ್ಮ ಕೆಲಸ ಮುಗಿಯಲಿ. ನಿನ್ನ ಕೈಕಾಲು ಎಲ್ಲ ಸವರಿ ಬಿಡುತ್ತೇನೆ. ನೋಡು.

(ಪೊದೆ ಗಡಗಡನೆ ನಡುಗುತ್ತದೆ. ಸಣ್ಣಮ್ಮ ಮತ್ತು ಅಜ್ಜ ಅತ್ತ ಹೋದದ್ದೇ ಕಳ್ಳರು ಹೊರಗೆ ಬರುತ್ತಾರೆ.)

(ಕಳ್ಳರ ಹಾಡು)

ನಾವು ಕಳ್ಳರು
ಕಾಯಿ ಕಳ್ಳರು
ನಾಯಿ ಕಳ್ಳರು
ಬಂದೆವು.
ನಮ್ಮ ರಾಜ್ಯಕೆ
ನಾವೇ ರಾಜರು
ದಿಗ್ವಿಜಯಕೆ
ಬಂದೆವು.
ಯಾರೇ ಬರಲಿ
ಎದುರು ಯುದ್ಧಕೆ
ಸೋಲು ಅವರಿಗೆ
ಖಂಡಿತ.
ನಮ್ಮನರಿಯದೆ
ಕತ್ತಿ ಹಿರಿದರೆ
ಸಾವು ಅವರಿಗೆ
ನಿಶ್ಚಿತ.

(ಗಿಡ ಮರ ಪೊದೆಗಳೆಲ್ಲ ನಡುಗಿ ತುಯ್ಯುತ್ತವೆ. ಪಂಚರಂಗಿಗೆ ಅಪಾಯದ ಅರಿವಾಗಿ)

ಪಂಚರಂಗಿ : ಅಜ್ಜೀ ಅಜ್ಜೀ.... ಅಜ್ಜೀ.... ಈ ಅಜ್ಜಿಗೆ ಕೇಳಿಸುವುದೇ ಇಲ್ಲ. ಏನು ಮಾಡಲಿ? (ಜೋರಾಗಿ) ಅಜ್ಜೀ....

ಅಜ್ಜಿ : ಸುಮ್ಮನಿರೇ, ನನಗಿನ್ನೂ ಕೆಲಸ ಆಗಿಲ್ಲ.

ನಾಯಿ : ಕುಂಯ್ಯೋ.... ಕುಂಯ್ಯೋ.... (ತನ್ನ ಮನೆಯಲ್ಲೇ ಅತ್ತ ಇತ್ತ ಓಡಾಡುವುದು)

ಪಂಚರಂಗಿ : ಅಜ್ಜೀ.... ಅಜ್ಜೀ....

ನಾಯಿಮರಿ : ಕುಂಯ್ ಕುಂಯ್....

ಅಜ್ಜಿ : (ಒಳಗಿನಿಂದಲೇ) ಈ ನಾಯಿಯೊಂದು ನನಗೆ. ಇಷ್ಟೆಲ್ಲ ಕೆಲಸ ಸಾಲದು ಅಂತ.

ನಾನು ಒಬ್ಬಳೇ ಏನೆಲ್ಲ ಮಾಡಿಕೊಂಡೇನು. ಮುಚ್ಚೇ ಬಾಯಿ ಪಪ್ಪೀ. ಈಗ ಹೋದದ್ದಷ್ಟೇ ಅವಳು. ಕೂಗಲು ಸುರುವಾಗಿ ಆಯಿತು!

(ಕಳ್ಳ ಹೆಜ್ಜೆಯಲ್ಲಿ ಒಳಬಂದ ಕಳ್ಳರು ನಾಯಿಮನೆಗೆ ಮುತ್ತಿಗೆ ಹಾಕುತ್ತಾರೆ)

ಗೊಂಬೆಗಳು : ಆಹಾ! ನಾವು ಬಿಟ್ಟೇವೇ ನಿಮ್ಮನ್ನೂ? ನಿಮ್ಮೊಡನೆ ಯುದ್ಧ ಮಾಡುತ್ತೇವೇ.... ತಕಾ! ಪೆಟ್ಟು! (ಟಣ್...) ಇಕಾ ಪೆಟ್ಟು! (ಟಣ್)

ರಂಗಾಣಿ : (ಹೆದರಿ) ಇವು ಜೀವ ಇಡುವುದಿಲ್ಲವೋ ಪಿಂಗಾಣಿ. ಒಂದೇ ಸಮ ಕತ್ತಿ ಬೀಸುತ್ತಿವೆ. ಬಾ. ,ಓಡೋಣ. (ಕುಮ್ಮಟ್ಟು ಹಾರಿ ಪೊದೆಯ ಹಿಂದೆ ಅಡಗುತ್ತಾನೆ)

ಪಿಂಗಾಣಿ : ಓಹೋ! ಕತ್ತಿ ಹಿರಿಯುತ್ತೀರೋ? ಮಂಗಾಣೀ.

(ಕಣ್‌ಸನ್ನೆ ಮಾಡುತ್ತಾನೆ. ಮಂಗಾಣಿ ಹಿಂದಿನಿಂದ ಹಾರಿ ಸೈನಿಕರ ಕತ್ತಿ ಕಸಿಯುತ್ತಾನೆ)

ಗೊಂಬೆಗಳು : ನಾವು ಬರಿಗೈಯಲ್ಲಿ ಹೋರಾಡುತ್ತೇವೆ ಹೂಂ... ಪಪ್ಪಿಯನ್ನು ಮುಟ್ಟಲು ಬಿಡುವುದಿಲ್ಲಾ,

ಮಂಗಾಣಿ, ಪಿಂಗಾಣಿ : ಕಬಡಿ ಕಬಡಿ ಕಬಡಿ ಕಬಡಿ

ಪಿಂಗಾಣಿ : ಇಗೋ ಕೈ ಮುರಿದೆ.

ಮಂಗಾಣಿ : ನಾನು ನೋಡಿಲ್ಲಿ ಕತ್ತು ಉಳುಕಿಸಿದೆ.

(ಸೈನಿಕ ಗೊಂಬೆಗಳು ಕೈಕಾಲು ಚೆಲ್ಲಿಕೊಂಡು ಬೀಳುತ್ತವೆ.)

ಪಂಚರಂಗಿ : ಅಜ್ಜೀ ಅಜ್ಜೀ.... ಅಯ್ಯೋ, ಅಜ್ಜಿಗೆ ಕೇಳಿಸುತ್ತಲೇ ಇಲ್ಲವಲ್ಲಪ್ಪಾ! (ಕೈ ಕಾಲಿಗೆ ಅಡ್ಡ ಬಂದು ತಡೆಯತೊಡಗಿದ ಗಿಡಗಳ ಗೆಲ್ಲುಗಳನ್ನು ಸವರಿಸವರಿ ಹಾಕಿ ಕಳ್ಳರು ನಾಯಿಮರಿಯನ್ನೆತ್ತಿಕೊಂಡು ಹಾರುತ್ತಾರೆ.)

ಅಜ್ಜಿ : ಏನದು ಗಲಾಟೆ? (ಹೊರಗೆ ಬರುತ್ತಾಳೆ)

ಪಂಚರಂಗಿ : (ಪಂಜರದ ಸರಪಳಿಗೆ ತಲೆಬಡಿದು ಅಳುತ್ತಿದೆ)
ಅಯ್ಯೋ ಅಜ್ಜೀ, ಅಷ್ಟು ಕೂಗಿದರೂ ನೀನು ಬರಲಿಲ್ಲ. ಈಗ ಬಂದು ಬಿಟ್ಟೆಯಾ? ಪಪ್ಪಿಯನ್ನು ಕಳ್ಳರು ಎತ್ತಿಕೊಂಡು ಹೋದರು!...... ಸಣ್ಣಮ್ಮನಿಗೆ ನಾನು ಏನು ಹೇಳಲೀ...?

ಅಜ್ಜಿ : ಹಾಂ! ಪಪ್ಪಿಯನ್ನು ಎತ್ತಿಕೊಂಡು ಹೋದರೇ?

ಪಂಚರಂಗಿ : ಹೌದಜ್ಜೀ. ಸೈನಿಕ ಗೊಂಬೆಗಳು ಕಾದಾಡಿ ಸತ್ತವು. ಪೊದೆ ಗಿಡಗಳು ಅಡ್ಡಬಂದದ್ದಕ್ಕೆ ಲಾಚಾರವೆದ್ದವು.... ನೋಡಿಲ್ಲಿ ತೋಟದ ಅವಸ್ಥೆ.

(ಅಜ್ಜಿ ತಲೆಯ ಮೇಲೆ ಕೈಯಿಟ್ಟುಕೊಂಡು ಕುಸಿಯುತ್ತಾಳೆ.)

ಪಂಚರಂಗಿ : ಅಜ್ಜೀ.... ಪಂಜರದ ಬಾಗಿಲು ತೆರೆ. ನಾನವರ ಬೆನ್ನಟ್ಟುತ್ತೇನೆ.

## ದೃಶ್ಯ – ೨

(ಕಾಡು ರಸ್ತೆ, ಹಣ್ಣುಗಾಯಿ ನೀರುಗಾಯಿ ಆದ ನಾಯಿಮರಿಯನ್ನು ಇಳಿಸಿಕೊಂಡು ಮೂವರೂ ಕಳ್ಳರೂ ಕುಳಿತಿದ್ದಾರೆ. ಪಂಚರಂಗಿ ಬೆನ್ನಟ್ಟಿ ಬಂದು ದೂರದಲ್ಲಿ ಗುಟ್ಟಲ್ಲಿ ಕುಳಿತು ದುಃಖಿಸುತ್ತಿದೆ.)

ಪಿಂಗಾಣಿ : ಆಚೆ ಕಾಡಿನಲ್ಲಿ ಇದನ್ನು ಎಸೆದು ಬಿಡುವ.

ರಂಗಾಣಿ : ಇನ್ನು ಈಚೆಗೆ ಮುಖ ಹಾಕಬಾರದು ಅದು.

ಮಂಗಾಣಿ : ಸಾಯಲಿಕ್ಕೆ ಹೊರಟಿದೆ! ಮುಖಹಾಕುವ ಮಾತೆಲ್ಲಿ ಇನ್ನು.

ಪಪ್ಪಿ : (ಕ್ಷೀಣವಾಗಿ) ಕುಂಯ್ಯೋಂ..... ಮುಂಯ್ಯೋಂ

ಪಿಂಗಾಣಿ : ಆಂ! ಮತ್ತೆ! ಮತ್ತೆ ಸೌಂಡ್ ಹೊರಡಿಸುತ್ತೀಯ! ಇನ್ನೊಂದು ಕೊಟ್ಟೆನೆಂದರೆ ಸೀದ ಮೇಲೆ ಹೋಗಬೇಕು. ಹಾಗೆ.

ರಂಗಾಣಿ : ಯೇಯ್, ಬಿಡೋ ಪಾಪ. ಸಾಯುವವರೆಗೂ ಪೆಟ್ಟು ತಿನ್ನುವ ಹಣೆಬರಹ ಬೇಡ ಅದಕ್ಕೆ.

ಪಂಚರಂಗಿ : ಹಂಯ್ಯೋ.... ಎಂತಹಾ ದುಃಖ ಪ್ರಾಪ್ತವಾಗಿಬಿಟ್ಟಿತೂ....

(ಆ ದಾರಿಯಾಗಿ ಮುಸ್ತಫಾ ಬರುತ್ತಿದ್ದಾನೆ. ಪಂಚರಂಗಿ ನೋಡುತ್ತದೆ. ಓಡಿ ಹತ್ತಿರ ಹೋಗುತ್ತದೆ.)

ಪಂಚರಂಗಿ : (ಪಿಸುವಾಗಿ) ಮುಸ್ತಫಾ ದರ್ಜಿಯವರೆ, ಮುಸ್ತಫಾ ದರ್ಜಿಯವರೇ.

ಮುಸ್ತಫಾ : ಯಾರದು?

ಪಂಚರಂಗಿ : ನಾನು ಪಂಚರಂಗಿ. ಕಾಣದೇ? ಮೆಲ್ಲ ಮಾತಾಡಿ, ಆಚೆಗೆ ಕೇಳಿಸೀತು.

ಮುಸ್ತಫಾ : ಅರೇ ಪಂಚರಂಗಿ! ಈಗಲೂ ಅದೇ ಅಂಗಿ'

ಪಂಚರಂಗಿ : ಅಂಗಿ ಕತೆ ಸಾಯಲಿ. ದರ್ಜಿಯವರೇ, ಏನು ಹೇಳಲಿ? ಬಹಳ ಕಷ್ಟದಲ್ಲಿದ್ದೇವೆ.

ಮುಸ್ತಫಾ : ಏನು ಕಷ್ಟ? ಎಲ್ಲಿ, ಹೇಗೆ, ಯಾಕೆ, ಯಾರಿಂದ?

ಪಂಚರಂಗಿ : ವಿವರ ಆಮೇಲೆ ದರ್ಜಿಯವರೇ. ಮೊದಲು ನಮ್ಮ ಪಪ್ಪಿಯನ್ನು ಆ ಕಿಡಿಗೇಡಿಗಳಿಂದ ರಕ್ಷಿಸಿ. (ತೋರಿಸುವುದು)

ಪಿಂಗಾಣಿ : ಸರಿ, ಆಯಾಸ ಪರಿಹಾರವಾದದ್ದು ಸಾಕು. ಏಳಿ ಎಲ್ಲ. ಮಂಗಾಣೀ....

ಮಂಗಾಣಿ : ಜೀ?

ಪಿಂಗಾಣಿ : ಪಪ್ಪಿಯನ್ನು ಅನಾಮತ್ತಾಗಿ ಎತ್ತು.

ಮಂಗಾಣಿ : ಎತ್ತಿದೆ.

ರಂಗಾಣಿ : ಹಾಗೇ ಬೀಸಿ ಕಾಡಿಗೆ ಬಿಸಾಕಿ ಬಿಡು.

ಪಿಂಗಾಣಿ : ತಡೆ ತಡೆ ತಡೆ.... ರಂಗಾಣಿ ಹೇಳಿದ ಹಾಗೆ ಕೇಳಬೇಡ. ರಂಗಾಣಿ, ನಿನ್ನ ತಲೆ ಬುರುಡೆಯೊಳಗೆ ಏನು ತುಂಬಿಕೊಂಡಿದ್ದೀಯೋ? ಇಲ್ಲಿಂದ ಬಿಸಾಡಿದರೆ ಬೀಳುವುದು ಕಾಡಿಗಲ್ಲ. ನಾವು–ಜೈಲಿಗೆ.... ಇನ್ನೂ ಸ್ವಲ್ಪ ಮುಂದೆ ನಡೆದು ಇನ್ನೂ ಹತ್ತಿರ ಹೋಗಿ ಸರಿಯಾದ ಜಾಗ ನೋಡಿ ಬಿಸಾಡೋಣ. ಹೂಂ.... ಮರಣಗೀತೆ ಮೊಳಗಲೀ....

(ನಾಯಿಯನ್ನೆತ್ತಿಕೊಂಡು ಮೂವರೂ ಅಂತಿಮ ಯಾತ್ರೆಯೆಂಬಂತೆ ಸಾಗುತ್ತಿದ್ದಾರೆ.)

(ಮರಣ ಗೀತೆ)

ಢಮರ ಢಮರ ಢಮರ ಢಂ
ಢಿಮರ ಢಿಮರ ಢಿಮರ ಢಿಂ
ಹೊರಟು ಹೋಯ್ತು ನಾಯಿ ದಮ್
ನಮಗಿನ್ನಿಲ್ಲ ಯಾರ ಲಗಂ
ನಾಯಿಮರಿ ಆಯ್ತು ಖತಂ
ಅಮರ ಅಮರ ಅಮರ ಹಂ
ಢಮರ ಢಮರ ಢಮರ ಢಂ
ಢಿಮರ ಢಿಮರ ಢಿಮರ ಢಿಂ

(ಪದ್ಯ ಮುಗಿಯುತ್ತಿದ್ದಂತೆ ಮುಸ್ತಫಾ ಎದುರಾಗುತ್ತಾನೆ.)

ಮುಸ್ತಫಾ : ನಿಲ್ಲಿ, ಎಲ್ಲಿಗೆ ಹೊರಟಿದ್ದಿರಿ? (ಮೂವರೂ ತಬ್ಬಿಬ್ಬಾಗುತ್ತಾರೆ.) ಇದೇಯೋ ಬೇಡು ಪರದೇಶಿ, ನನ್ನ ಕೋಟು ಟೊಪ್ಪಿ ಹಾರಿಸಿದ ಮಂಗಾಣಿ? ತಡಿ ಸೊಂಟ ಮುರಿಯುತ್ತೇನೆ ಈಗ. (ಮಂಗಾಣಿ ಹೆದರಿ ಥಕ್ಕ ಥೈ ಕುಣಿಯುತ್ತದೆ.)

ಪಿಂಗಾಣಿ : ಅಯ್ಯಾ ದರ್ಜಿಯವರೇ. ನೀವು ಯಾರಿಗೆ ಹೇಳುವುದು? ನಮಗೊ? ಛ್ಛಿಂ ಛ್ಛಿಂ, ನಾವು ಅಂಥವರಲ್ಲ. ಬಹಳ ಸಭ್ಯರು. ಹೀಗೆ ದಾರಿಯಲ್ಲಿ ಕಾಲಾಡಿಕೊಂಡು ಬರುತ್ತಿದ್ದೆವು.

ರಂಗಾಣಿ : ದಾರಿಯಲ್ಲಿ ಈ ನಾಯಿಮರಿ....

ಮುಸ್ತಫಾ : (ಗರ್ಜಿಸಿ) ಯಾರದು ಈ ನಾಯಮರಿ?

ರಂಗಾಣಿ : ಅದು.... ಅದು.... ಅದೇ ಹೇಳಲು ಹೊರಟೆ. ಈ ನಾ ನಾನಾ ನಾಯಿ ಮರಿ ನ ನ ನ ನಮ್ಮದೇ.... ಯಾರದು.... ನನನಮ್ಮದೇ ಅಲ್ಲವ ಪಿಂಗಾಣಿ?.... ಹೌದು ಹೌದೇ ಹೌದು.... ಕಳೆದ ಏಳೇಳು ಜನ್ಮದಿಂದಲೂ ಇದು ನಮ್ಮದೇ ನಾಯಿಮರಿ.

ಪಿಂಗಾಣಿ : (ಗಲಿಬಿಲಿಯಿಂದ).... ಹೌದು.... ಅಲ್ಲಿ ಚರಂಡಿಯಲ್ಲಿ ಬಿದ್ದು.... ಸಾಯುತ್ತಿತ್ತು.

ರಂಗಾಣಿ : (ಕಾಲರು ಎತ್ತಿಕೊಂಡು) ನಮಗೆ ತುತುತುಂಬ ಪ್ರಾಣಿದಯೆ...

ಪಿಂಗಾಣಿ : ಬದುಕಿಸುವ ಅಂತ ಡಾಕ್ಟರ ಹತ್ತಿರ ಒಯ್ಯುತ್ತಿದ್ದೇವೆ.

ಮಂಗಾಣಿ ; ಇದು ಸತ್ಯ. ನಿಮ್ಮ ಸೂಜಿಯಾಣೆಗೂ. ಕತ್ರಿಯಾಣೆಗೂ. ನಾನು ಕದ್ದ ಕೋಟು ಟೊಪ್ಪಿಯಾಣೆಗೂ. (ತನ್ನ ಬಾಲ ಎತ್ತಿ ಹಿಡಿದುಕೊಂಡು) ನನ್ನ ಬಾಲದಾಣೆಗೂ.

ಪಂಚರಂಗಿ : (ಹಿಂದೆಯೇ ಹಾರಿಬಂದು) ಸುಳ್ಳು. ಹಸೀ ಹಸೀ ಸುಳ್ಳು.

ಮಂಗಾಣಿ : ಹ್ಯೇ.... ಮತ್ತೆ ಒಣಾ ಒಣ ಸುಳ್ಳು ಅಂತ ಬೇರೆ ಇದೆಯ? ಬಂದುಬಿಟ್ಟಳು ಇಲ್ಲಿ, ದೊಡ್ಡ ಜಡ್ಜಳಂತೆ.

ಮುಸ್ತಫಾ : ನಿಮ್ಮ ಬುದ್ಧಿವಂತಿಕೆ ಮಾತೆಲ್ಲ ನನ್ನ ಹತ್ತಿರ ಬೇಡ. (ಕತ್ರಿ ಹೊರಗೆ ತೆಗೆಯುತ್ತಾನೆ. ಒಂದೊಂದೇ ಹೆಜ್ಜೆಯಿಟ್ಟು ಕಣ್ಣು ಗರಗರ ತಿರುಗಿಸುತ್ತಾ ಮುಂದೆ ಬರುತ್ತಾನೆ.) ನಾಲಗೆ ಸರಕ್ಕಂತ ಹೊರಗೆ ಎಳೆದು, ಕಚಕ್ಕನೆ ಕತ್ತರಿಸಿ ಮೆಶಿನು ಹೊಡೆದು ತುಟಿ ಪಟ ಪಟ ಪಟ ಪಟ ಹೊಲಿದು ಬಿಟ್ಟೇನು ಹುಷಾರ್, (ನಾಯಿಮರಿಯನ್ನು ಅವರಿಂದ ಕಸಿದು, ಮೃದುವಾಗಿ ಹಿಡಿದು) ಇದು ನಮ್ಮ ಸಣ್ಣಮ್ಮನ ನಾಯಿಮರಿ. ನಮಗೆ ತಿಳಿಯದೇ? (ಇದ್ದಕ್ಕಿದ್ದಂತೆ ಜೋರಾಗಿ) ಅದರ ಕೋಟು ಸಮೇತ ಕದ್ದು ತಂದಿದ್ದೀರಲ್ಲ ಕಿಡಿಗೇಡಿಗಳೇ.... ತೊಲಗಿ ಇಲ್ಲಿಂದ. ಇಲ್ಲದಿದ್ದರೆ ನಿಮ್ಮನ್ನೀಗ....

(ಮೂವರು ಕಳ್ಳರೂ ನಾಗಾಲೋಟದಿಂದ ಓಡುವರು. ಗಿಣಿ, ಮುಸ್ತಫಾ ಮತ್ತು ನಾಯಿಮರಿ ಮನೆಯ ದಾರಿಗೆ.)

## ದೃಶ್ಯ – ೩

(ಮನೆಯ ಹೊರಗೆ ಜಗಲಿಯ ಮೇಲೆ ಅಜ್ಜಿ ದುಃಖಿತಳಾಗಿ ಕುಳಿತಿದ್ದಾಳೆ.)

ಮುಸ್ತಫಾ : ಅಜ್ಜೀ ಅಜ್ಜೀ, ದಿನೇ ದಿನೇ ನಿನ್ನ ಕಿವಿ ಮಂದವಾಗುತ್ತಿದೆ. ಮನೆಗೆ ಕಳ್ಳರು ಬಂದರೂ ಗೊತ್ತಿಲ್ಲ. ಬೊಬ್ಬೆ ಹೊಡೆದರೂ ಗೊತ್ತಿಲ್ಲ. ನಾವೀಗ ಬಂದದ್ದಾದರೂ ತಿಳಿದಿದೆಯೋ ಹೇಗೆ?

ಅಜ್ಜಿ : ಏನು ಹೇಳಲಿ ಮುಸ್ತಫಾ ದರ್ಜಿಯವರೇ, ನಮ್ಮ ಪಪ್ಪಿ....

ಮುಸ್ತಫಾ : ಆಗಿ ಹೋಗುತ್ತಿತ್ತಲ್ಲ ನಿನ್ನ ಪಪ್ಪಿಯ ಸಮಾಚಾರ. ಏನೋ, ಅಲ್ಲಾನ ದಯೆ. ನಾನು ಬಂದೆ. ಉಳಿಯಿತು. ಇನ್ನಾದರೂ ಜಾಗ್ರತೆ ಮಾಡಿಕೊ.... ಸದ್ಯ ಗಾಯಕ್ಕೆ ಎರಡು ಹೊಲಿಗೆ ನಾನೇ ಹಾಕುತ್ತೇನೆ. ಅಜ್ಜ ಬಂದ ಕೂಡಲೇ ಡಾಕ್ಟರನ್ನು ಕರೆಸು. (ನಾಯಿಯ ಗಾಯಗಳನ್ನು ಹೊಲಿಯುತ್ತಾನೆ.)

ನಾಯಿ : ಕುಂಯ್ಯೋ ಮಂಯ್ಯೋ....

ಮುಸ್ತಫಾ : ಆಯಿತು ಆಗಿ ಹೋಯಿತು. ಇನ್ನೇನು ಒಂದೇ ನಿಮಿಷ. ನಿನಗೆ ನೋವಾಗುತ್ತದೆಯೆಂದು ನನಗು ತಿಳಿದಿದೆ ಪಪ್ಪೀ. ಆದರೆ ಏನು ಮಾಡಲಿ? ಗಾಯದಿಂದ ರಕ್ತ ಈ ನಮೂನೆ ಸುರಿಯುತ್ತಿದೆಯಲ್ಲ. (ಹೀಗೆಲ್ಲ ಸಂತೈಸುತ್ತ ಹೊಲಿದು ಮುಗಿಸಿ) ಅಗಾ, ಈಗ ಭಾರಿ ಶೋಕಾಯಿತು.... ಅಜ್ಜೀ, ನಾನು ಹೊರಟೆ. ಡಾಕ್ಟರನ್ನು ಕರೆಯಲು ಮರೆಯಬೇಡ. ಪಂಚರಂಗೀ, ನಾನು ಹೋಗಲೇ?

ಪಂಚರಂಗಿ : ಥ್ಯಾಂಕೂ, ದರ್ಜಿಯವರೇ.

ಮುಸ್ತಫಾ : ಓಹೋ, ಇದು ಬೇರೆ ಬರುತ್ತದಾ ನಿನಗೆ? ನಾನೂ ಥ್ಯಾಂಕೂ.

(ಮುಸ್ತಫಾ ಹೊರಟುಹೋಗುತ್ತಾನೆ.)

ಪಂಚರಂಗಿ : (ಪಂಜರದೊಳಗೆ ಹೊಕ್ಕು ಕುಳಿತು) ಅಜ್ಜೀ, ಚಿಲಕ ಹಾಕು. ನನಗೆ ಹೆದರಿಕೆ. ಮತ್ತೆ ನನ್ನನ್ನೂ ಒಯ್ದಾರು. (ಅಜ್ಜಿ ಚಿಲಕ ಹಾಕಿ, ಒಳಗಿಂದ ಏನೋ ಎಣ್ಣೆ ತಂದು ನಾಯಿಯ ಮೈಗೆ ಸವರುತ್ತ ಕುಳಿತುಕೊಳ್ಳುತ್ತಾಳೆ.)

ಅಜ್ಜಿ : ಒಟ್ಟಾರೆ ನಾನು ಪಪ್ಪಿಯನ್ನು ತರುವುದೇ ಬೇಡವಿತ್ತು. ಈ ಗಲಾಟೆ, ಈ ದೊಂಬಿ. ಮೊನ್ನೆ ಮೊನ್ನೆ ಪೇಟೆಯಿಂದ ತಂದ ಗೊಂಬೆಗಳು ಕೈಕಾಲು ಮುರಿದು ಬಿದ್ದಾಯಿತು. ತೋಟ ಕಂಡರೆ ಈ ಪರಿ. ಇನ್ನೂ ಏನೆಲ್ಲ ಆಗಲಿಕ್ಕುಂಟೋ....

ಪಂಚರಂಗಿ : ಸಣ್ಣಮ್ಮ ಬರುವ ಹೊತ್ತು. ಏನು ಮಾಡಲೀ? ಸಣ್ಣಮ್ಮನಿಗೆ ಹೇಗೆ ಮುಖ ತೋರಿಸಲಿ?

## ದೃಶ್ಯ – ೪

(ಸಣ್ಣಮ್ಮ ಶಾಲೆಯಿಂದ ಬರುವಾಗಲೇ ನಾಯಿಮನೆಯ ಕಡೆಗೇ ಸೀದಾ ಓಡಿ ಬರುತ್ತಾಳೆ.)

ಸಣ್ಣಮ್ಮ : ಪಪ್ಪೀ.... ನಾನು ಬಂದುಬಿಟ್ಟೆ.... ಅರೆ! ನಾಯಿಮನೆ ಮುರಿದು ಬಿದ್ದಿದೆ! (ಸುತ್ತ ನೋಡುತ್ತ) ಗಿಡಮರ ಪೊದೆ ಬಳ್ಳಿಗಳೇ, ಏನಾಯಿತು ನಿಮಗೆಲ್ಲ! ಹೀಗೇಕಿದ್ದೀರಿ? ಅಯ್ಯೋ.... ನನ್ನ ಸೈನಿಕ ಗೊಂಬೆಗಳು ಹೀಗೆ!.... ಪಪ್ಪೀ... ಎಲ್ಲಿದ್ದೀ? ಎಲ್ಲಿದ್ದಿ ಪಪ್ಪೀ? ಪಪ್ಪಿ....

ನಾಯಿಮರಿ : ಕುಂಯ್ಯೋ ಕುಂಯ್ಯೋ.... (ಕ್ಷೀಣ ದನಿ)

ಸಣ್ಣಮ್ಮ : (ಶಾಲೆಯ ಚೀಲ ಬಿಸುಟು ಅಜ್ಜಿ ಕಡೆ ಓಡುತ್ತಾಳೆ. ಅವಳ ತೊಡೆಯ ಮೇಲೆ ನಾಯಿಮರಿಯನ್ನು ನೋಡಿ)

ಅಯ್ಯೋ.... ನನ್ನ ಪಪ್ಪೀ.... ಏನಾಯ್ತು ನಿನಗೆ?

ಪಂಚರಂಗಿ : (ಬುಳು ಬುಳು ಅಳುತ್ತ) ಸಣ್ಣಮ್ಮ, ಹಂ.... ಹ ಂ.... ಹಂ.... ಸಣ್ಣಮ್ಮ

ಸಣ್ಣಮ್ಮ : ಏನು ಪಂಚರಂಗೀ, ಏನಾಯಿತೂ? ಯಾಕೆ ಹೆದರಿದ್ದೀ?

ಪಂಚರಂಗಿ : ಆ ಕಳ್ಳರು.... ಕಾಯಿ ಕಳ್ಳರು.... ಹಣ್ಣು ಕಳ್ಳರು.... ಹೂವು ಕಳ್ಳರು.... (ಬಿಕ್ಕುತ್ತದೆ. ಹೆದರಿಕೆಯಿಂದ ಉಸಿರುಗಟ್ಟಿದೆ)

ಸಣ್ಣಮ್ಮ : ಅಯ್ಯೋ, ಬೇಗ ಹೇಳಬಾರದೆ?

ಅಜ್ಜಿ : ಹೇಳುವುದೆಂತದು? ನೋಡಿಲ್ಲಿ ಕರ್ಮ. ನೀನಿನ್ನೂ ಆಚೆಗೆ ಪೂರ್ತಿ ಹೋಗಿರಲಿಕ್ಕಿಲ್ಲ. ಹೋದ ಬೆನ್ನಿಗೇ ಇಷ್ಟೆಲ್ಲ. ಒಂದು ನಿಮಿಷ, ಒಂದೇ ಒಂದು ನಿಮಿಷ, ನಾನು ಒಳಗಿದ್ದೆ. ಅಷ್ಟರೊಳಗೆ! ಮುಸ್ತಫಾ ದರ್ಜಿಯೊಬ್ಬ ಇಲ್ಲದಿದ್ದರೆ ಇದು ಈಗ ಕಣ್ಣಲ್ಲಿ ನೋಡಲಿಕ್ಕೂ ಸಿಗುತ್ತಿರಲಿಲ್ಲ.

(ಸಣ್ಣಮ್ಮ ರೋದಿಸುತ್ತಿದ್ದಂತೆ ಅಜ್ಜ ಬರುತ್ತಾನೆ.)

ಅಜ್ಜ ; ಏನಾಯಿತು ಸಣ್ಣಮ್ಮ.... ಯಾಕೆ ಅಳುತ್ತೀ.... ಇದೇನು ತೋಟ ಹೀಗಿದೆ?

ಸಣ್ಣಮ್ಮ : (ಪಪ್ಪಿಯನ್ನು ಅವುಚಿ ಹಿಡಿದುಕೊಂಡು) ಅಜ್ಜಾ, ಪಪ್ಪಿ ಸಾಯುತ್ತಿದೆ. ನೋಡಜ್ಜಾ ಆ ದುಷ್ಟರು ಕಡೆಗೂ ಅದನ್ನು ಬಿಡಲಿಲ್ಲ.

ಅಜ್ಜ : ಛೆ, ಏನಿದು ಅವಸ್ಥೆ. ಈ ಪುಟ್ಟಮರಿ ಅವರಿಗೆ ಏನು ಮಾಡಿತು ಅಂತ ಹೀಗೆ ಹೊಡೆದಿದ್ದಾರೆ?.... ಮಾತಾಡಲು ವೇಳೆಯಿಲ್ಲ. ಮೊದಲು ಡಾಕ್ಟರನ್ನು ಕರೆದುಕೊಂಡು ಬರಬೇಕು. (ಹೋಗುವನು)

ನಾಯಿಮರಿ : ಕುಂಯ್ಯೋಂ ಕುಂಯ್ಯೋಂ.....

(ಡಾಕ್ಟರು ಬರುತ್ತಾರೆ. ಹಿಂದೆಯೇ ಅವರ ಪೆಟ್ಟಿಗೆ ಹಿಡಿದು ಅಜ್ಜನೂ)

ಅಜ್ಜ : ನೋಡಿ. ಇದೇ ನಾಯಿಮರಿ. ಕಿಡಿಗೇಡಿಗಳು ಬರಿದೇ ಹೊಡೆದಿದ್ದಾರೆ. ದಯವಿಟ್ಟು ಏನಾದರೂ ಮಾಡಿ ಮುಂಚಿನಂತೆಯೇ ಹುಶಾರು ಮಾಡಿಕೊಡಿ.

ಡಾಕ್ಟರು : (ದೀರ್ಘ ಪರೀಕ್ಷೆ ಮಾಡಿ ಮುಗಿಸಿ) ಹೇಗೆ ಹೇಳಲಿ?.... ಈ ನಾಯಿಮರಿ ಬದುಕುವ ಆಸೆಯಿಲ್ಲ. ಗಾಯ ಬಹಳವಾಗಿದೆ. ಪೆಟ್ಟು ಜೋರಾಗಿ ಬಿದ್ದಿದೆ. ನನ್ನಿಂದಂತೂ ಬದುಕಿಸಲು ಸಾಧ್ಯವಿಲ್ಲ. ಕ್ಷಮಿಸಿ (ಹೋಗುವರು.)

ಸಣ್ಣಮ್ಮ : ನನ್ನ ಮುದ್ದು ಪಪ್ಪೀ.....

ಅಜ್ಜಿ : ಅಳಬೇಡ ಸಣ್ಣಮ್ಮಾ. ಅಳಬೇಡ. (ತಾನೇ ಕಣ್ಣೊರಸಿಕೊಳ್ಳುವಳು)

ಅಜ್ಜ : ಎಷ್ಟು ಕುಣಿದುಕೊಂಡಿತ್ತು. ಕೋಟು ಹ್ಯಾಟು ರಿಬ್ಬನು ತೊಟ್ಟು. ಎಷ್ಟು ಮುದ್ದಾಗಿ ಕಾಣುತ್ತಿತ್ತು. ಆ ಕಿಡಿಗೇಡಿಗಳು ಹೀಗೂ ಅನ್ಯಾಯ ಮಾಡುವುದೇ! (ಕಣ್ಣೊರಸಿಕೊಳ್ಳುವನು)

ಪಂಚರಂಗಿ : ಸಣ್ಣಮ್ಮಾ, ಪಂಜರದ ಬಾಗಿಲು ತೆರೆ. ನಾನು ಪಪ್ಪಿಯ ಪಕ್ಕ ಕುಳಿತುಕೊಳ್ಳುತ್ತೇನೆ.

ಸಣ್ಣಮ್ಮ : ಬೇಡ ಬೇಡ. ಕಡೆಗೆ ನಿನ್ನನ್ನೂ ಅವರು ಕೊಂದುಬಿಟ್ಟಾರು.

(ಶೋಕತಪ್ತ ವಾತಾವರಣ. ಶೋಕ ಸೂಚಕ ವಾದ್ಯ ಸಂಗೀತ. ಸಂಜೆ ಕತ್ತಲೆಗೆ ಹೊರಳುತ್ತಿದೆ.)

ಅಜ್ಜಿ : ಮಗೂ, ಶಾಲೆಯಿಂದ ಬಂದವಳು – ಏನನ್ನೂ ತಿನ್ನದೆ ಕುಡಿಯದೆ ಕುಳಿತಿದ್ದೀ. ಬಾ. ಏನಾದರೂ....

ಸಣ್ಣಮ್ಮ : (ಸಿಡುಕಿ) ನನಗೆ ಏನೂ ಬೇಡ.

ಅಜ್ಜಿ : ನೀನು ತಿನ್ನದಿದ್ದರೆ ನಾಯಿ ಬದುಕುತ್ತದೆಯೇ?

ಸಣ್ಣಮ್ಮ : (ಅಳುತ್ತಾ) ನನಗೆ ಏನೂ ಬೇಡಾ....

ಅಜ್ಜ : ಹಾಗೆಲ್ಲ ಹಠ ಮಾಡಬಾರದು ಪುಟ್ಟಾ ನೋಡು, ನೀನು ತಿನ್ನದಿದ್ದರೆ ನಾಯಿಮರಿಗೆ ಇನ್ನಷ್ಟು ನೋವಾಗುತ್ತದೆ....!

ಸಣ್ಣಮ್ಮ : ಅಜ್ಜಾ, ನನ್ನ ಪಪ್ಪಿಯನ್ನು ಬದುಕಿಸಿಕೊಡಿ. ಹೇಗಾದರೂ.... ಏನಾದರೂ ಮಾಡಿ ಅಜ್ಜಾ.... ನನಗೆ ಊಟ ಬೇಡ, ತಿಂಡಿ ಬೇಡ.... ಪಪ್ಪಿ ಬೇಕೂ....

(ಕಳ್ಳರು ಬಂದು ಎಲ್ಲವನ್ನೂ ಗಮನಿಸುತ್ತಿದ್ದಾರೆ)

ಪಿಂಗಾಣಿ : ಹೋ, ಇದು ಭಾರೀ ಒಂದು ಪ್ರೀತಿ ಆಯಿತಲ್ಲ. ಜಗತ್ತಿನಲ್ಲೇ ಇಲ್ಲದ್ದು.

ರಂಗಾಣಿ : ಪ್ರೀತಿ ಅಂದರೆ ಏನಂತ ನಿನಗೇನು ಗೊತ್ತು ಮರುಳೇ?

ಪಿಂಗಾಣಿ : (ಅವನ ತಲೆಗೆ ಕುಟ್ಟಿ) ನೀನು ಆ ನಾಯಿಯಾಗಿ ಹುಟ್ಟಲಿಕ್ಕೆ ಲಾಯಕ್ಕು.... ಅದಿರಲೀ, ಏನಾದರೂ ಮಾಡಿ ಅದನ್ನು ಅಲ್ಲಿಂದ ಹಾರಿಸಬೇಕು.

ರಂಗಾಣಿ : ಯಾಕೆ? ಅದರ ಜೀವ ಅಲ್ಲೇ ಹೋದರೆ ನಮಗೇನೂ?

ಪಿಂಗಾಣಿ : ಜೀವ ಹೋಗುವುದೇ! ಸಣ್ಣಮ್ಮ ಹಲುಬುವುದು ಕಂಡರೆ ತಿಳಿಯುವುದಿಲ್ಲವೇ? ಏನಾದರೂ ಮಾಡಿ ಅವಳು ಅದನ್ನು ಉಳಿಸುತ್ತಾಳೆ.

ರಂಗಾಣಿ : ಬೆಟ್?

ಪಿಂಗಾಣಿ : ಬೆಟ್

ರಂಗಾಣಿ : ಏನು ಬೆಟ್?

ಮಂಗಾಣಿ : ಕೈ ಬೆಟ್, ಕಾಲ್ ಬೆಟ್.

ರಂಗಾಣಿ : ತಲೆಚಿಟ್, ಮುಚ್ಕೋ. (ಪಿಂಗಾಣಿಗೆ) ಸತ್ತವರನ್ನು ಬದುಕಿಸಲು ಅದೇನು ಸಿನೆಮಾ ಏನೋ?

ಪಿಂಗಾಣಿ : ರಂಗಾಣಿ, ನಿನ್ನ ತಲೆಗೆ ಕೆಲವು ವಿಷಯ ಹೋಗುವುದಿಲ್ಲವಾದರೆ ಸುಮ್ಮನಿರು. ಈಗ ಏನಾದರೂ ಮಾಡಿ ನಾಯಿಯನ್ನು ಮತ್ತೆ ಕದಿಯಬೇಕು.... ಈ ಕುರಿತು ತುರ್ತು ಯೋಚಿಸು.

(ರಂಗಾಣಿ ಮಂಗಾಣಿ ಇಬ್ಬರೂ ತುರ್ತು ಎಂಬಂತೆ ಗಡಿಬಿಡಿಯಲ್ಲಿ ಶತಪಥ ತಿರುಗುತ್ತಾ ಯೋಚಿಸುತ್ತಾರೆ)

ಮಂಗಾಣಿ : ಹೂಂ.... ಹಾರಲೇ? ನಾನು ಹಾರಲೇ? ಈಗಲೇ? ಅದರ ಮೇಲೆ ಹಾರಿ ಕಿವುಚಿ ಕೊಂದುಬಿಡಲೇ?

ಪಿಂಗಾಣಿ : ಲೇ ಲೇ ಲೇ. ನಿನ್ನನ್ನು ಹುರಿದು ಕರಕರ ಜಗಿದು ತಿಂದುಬಿಡಲೇ?

(ಹಲ್ಲು ಕಡಿಯುತ್ತಾನೆ.)

ಮಂಗಾಣಿ : (ಸಪ್ಪಗಾಗಿ) ಕೊಲ್ಲಬೇಕು ಎನ್ನುತ್ತೀರಿ. ಕೊಲ್ಲಲೇ ಎಂದರೆ ಹಲ್ಲು ಕಡಿಯುತ್ತೀರಿ. ಈ ನರಮಾನವರ ವಿಚಾರವೇ ನನಗರ್ಥವಾಗುವುದಿಲ್ಲವಲ್ಲಾ.

ಪಿಂಗಾಣಿ : ಅಲ್ಲಿ ಅವರೆಲ್ಲ ಇದ್ದಾರೆ. ಹಾರುತ್ತದೆಯಂತೆ ಕಮಂಗಿ. ಇಲ್ಲೇ ಮರೆಸಿ ಕೊಂಡಿರೋಣ. ರಾತ್ರಿಯಾಗಲಿ. ಅವರು ನಿದ್ರಿಸಲು ಒಳಗೆ ಹೋಗುತ್ತಾರೆ. ಆಗ....

ರಂಗಾಣಿ : ಐಶ್ಶರೆ! ಪ್ಲಾನಂದರೆ ಪ್ಲಾನು. ನೀನು ವಿಶ್ವೇಶ್ವರಯ್ಯ ಆಗಿ ಹುಟ್ಟಬೇಕಿತ್ತು ಕಣೋ.... ಎಂಥಾ ಅನ್ಯಾಯವಾಯಿತು.... ಮುಂದಿನ ಕತೆ ಹೀಗೆ.

ಮೆಲ್ಲಗೆ, ಮತ್ತೂ, ಮೆಲ್ಲಗೆ ಹೆಜ್ಜೆಯಿಟ್ಟು.... ಪಂಜರ ತೆರೆದು.... ನಿದ್ದೆಯಲ್ಲಿರುವ ಗಿಣಿಯ ಕತ್ತು ಹಿಸುಕಿ.... ನಾಯಿಮರಿಯನ್ನು ಎತ್ತಿಕೊಂಡು.... (ಹೀಗೆ ಹೇಳುತ್ತ ಅಭಿನಯಿಸುತ್ತ ತಿಳಿಯದೆ ಹೆಜ್ಜೆ ಮುಂದಿಟ್ಟ ರಂಗಾಣಿಯನ್ನು ಪಿಂಗಾಣಿ ಹಿಂದಕ್ಕೆ ಎಳೆಯುತ್ತಾನೆ.)

ಪಿಂಗಾಣಿ : (ಪಿಸುವಾಗಿ).... ಅದೇ ಸರಿ.

ಮಂಗಾಣಿ : (ತಲೆ ಅಲ್ಲಾಡಿಸುತ್ತ) ಅದೇ ಸರಿಯಾದರೆ? ಅದೇ ಸರಿ.

## ಅಂಕ : ಮೂರು

### ದೃಶ್ಯ – ೧

(ರಾತ್ರಿಯಾಗಿದೆ. ಸಣ್ಣಮ್ಮ ನಾಯಿಮರಿಯೊಂದಿಗೆ ಜಗಲಿಯ ಮೇಲೆ ಕುಳಿತೇ ಇದ್ದಾಳೆ. ನಾಯಿಮರಿ ಮೇಲಿಂದ ಮೇಲೆ ಉಸಿರು ಬಿಡುತ್ತಿದೆ. ಗಿಣಿ ದುಃಖಿಸುತ್ತಿದೆ. ಮನೆಯ ಬಾಗಿಲಲ್ಲಿ ಅಜ್ಜ ಕೋಲು ಹಿಡಿದುಕೊಂಡು ಎಚ್ಚರದಿಂದ ಕುಳಿತಿದ್ದಾನೆ. ಅಜ್ಜಿ ಗೋಡೆಗೊರಗಿ ತೂಕಡಿಸುತ್ತಿದ್ದಾಳೆ.)

ಅಜ್ಜ : (ಫಕ್ಕನೆದ್ದು) ಓ ಇನ್ನೂ ಹಾಗೇ ಕುಳಿತುಕೊಂಡಿದ್ದೀರಾ ಎಲ್ಲ? ಎಷ್ಟು ಹೊತ್ತು! ನನಗಂತೂ ನಿದ್ದೆ ತಡೆಯುತ್ತಿಲ್ಲ. ಬಾ, ಒಳಗೆ ಬಾ ಸಣ್ಣಮ್ಮ ಮಲಗೋಣ.

ಸಣ್ಣಮ್ಮ : ನಂಗೆ ನಿದ್ದೆ ಬರುವುದಿಲ್ಲ.

ಅಜ್ಜಿ : ನಿದ್ದೆ ಬರುವುದಿಲ್ಲವೆಂದರೇನು? ಕಣ್ಣು ಮುಚ್ಚಿದರೆ ಸೈ ಬಂದುಬಿಡುತ್ತದಪ್ಪ.

ಸಣ್ಣಮ್ಮ : ನಾನು ಕಣ್ಣುಮುಚ್ಚುವುದೇ ಇಲ್ಲ, ಮುಚ್ಚಿದರೆ ನಾಯಿಮರಿಯನ್ನು ಅವರು ಮತ್ತೆ ಎತ್ತಿಕೊಂಡು ಹೋಗುತ್ತಾರೆ.

ಅಜ್ಜ : ಅವಳು ಹೇಳುವುದು ನಿಜವೇ, ಹಾಗಾದರೆ ಏನು ಮಾಡೋಣ?

ಅಜ್ಜಿ : ಹಾಗಾದರೆ ಸಣ್ಣಮ್ಮಾ, ಪಪ್ಪಿಯನ್ನು ಕರೆದುಕೊಂಡೇ ಒಳಗೆ ಬನ್ನಿ. ಅದು ನಮ್ಮೊಟ್ಟಿಗೇ ಮಲಗಲಿ ಆಯಿತಾ?

ಸಣ್ಣಮ್ಮ : ಆಯಿತಜ್ಜ.

(ಅಜ್ಜ ನಾಯಿಮರಿಯನ್ನು ಹೂವಿನಂತೆ ಎತ್ತಿಕೊಂಡು ಒಳಗೆ ಹೋಗುತ್ತಾನೆ. ಆತನಿಗಾನಿಸಿ ಕೊಂಡೇ ಸಣ್ಣಮ್ಮನೂ ಒಳಗೆ ಹೊರಡುತ್ತಾಳೆ.)

ಸಣ್ಣಮ್ಮ : ಅಜ್ಜೀ, ಪಂಜರ ಒಳಗೆ ತರಲು ಮರೆಯಬೇಡಾ.

ಅಜ್ಜಿ : ಇಲ್ಲಿಲ್ಲ.. ಇದೋ ತಂದುಬಿಟ್ಟೆ (ಗಿಣಿ ಪಂಜರವನ್ನು ಒಳಗೆಳೆದುಕೊಂಡು ಹೋಗಿ ಅಜ್ಜಿ ಬಾಗಿಲು ಹಾಕುತ್ತಾಳೆ.)

ಸಣ್ಣಮ್ಮ : ಅಜ್ಜೀ, ದೀಪ ಆರಿಸಬೇಡ. ನನಗೆ ಹೆದರಿಕೆ.

ಅಜ್ಜಿ : ಆರಿಸುವುದಿಲ್ಲ. ಸಣ್ಣ ಮಾಡುತ್ತೇನೆ.

(ಕಿಟಕಿಯೊಳಗಿನ ದೀಪ ಮಂಕಾಗುತ್ತದೆ.)

(ಕಳ್ಳರು ಪೊದೆಯಿಂದ ಹೊರಗೆ ಬರುತ್ತಾರೆ.)

ಪಿಂಗಾಣಿ : ಹೋ ಇದೀಗ ನಮ್ಮ ಯೋಜನೆಗಳೆಲ್ಲ ತಲೆ ಕೆಳಗೆ, ಕಾಲು ಮೇಲೆ ಆದುವಲ್ಲಾ.

ರಂಗಾಣಿ : (ನಾಟಕೀಯವಾಗಿ) ಹೌದೇ. ಹಾಗಾದರೆ ಅವುಗಳನ್ನು ಪುನಃ ತಲೆ ಮೇಲೆ, ಕಾಲು ಕೆಳಗೆ ಮಾಡುವ ಬಗೆ ಹೇಗೆ?

ಮಂಗಾಣಿ : ಹೇಗೆಂದರೆ ಅದು ಬರೀ ಸುಲಭ. ನೋಡಿ. ಹೀಗೆ. (ನಾಲ್ಕು ಲಾಗ ಹಾಕುತ್ತದೆ)

ಪಿಂಗಾಣಿ : ಥತ್, ಇದರಿಂದ ಸುಖವಿಲ್ಲಪ್ಪಾ. ನೋಡು, ಲೆಕ್ಕದ ಪ್ರಕಾರ ನಾಯಿಮರಿ ಇಷ್ಟರೊಳಗೆ ಸಾಯಬೇಕಿತ್ತು. ಇನ್ನೂ ಸತ್ತಿಲ್ಲ. ಎಂದರೆ ಅದರ ಆಯುಷ್ಯ ಗಟ್ಟಿ ಇದೆ, ಎಂದರೆ ನಮಗೆ ಅಪಾಯ ಇನ್ನೂ ಇದೆ. ನಾವು ಈಗಿಂದೀಗಲೇ ಅದನ್ನು ಕದ್ದು ಕಾಡಿಗೆ ಬಿಸುಟು ಬಂದೆವೋ–ಬಚಾವು.

(ಅವರು ಕುಳಿತ ಪೊದೆ ನಡುಗುತ್ತದೆ.)

ಪಿಂಗಾಣಿ : (ಪೊದರಿಗೆ) ಸಪಾಯಿ ಮಾಡಿಬಿಟ್ಟೇನು, ಹುಷಾರ್.

ರಂಗಾಣಿ : (ಕಿವಿಗೆ ಕೈ ಮರೆಯಿಟ್ಟು ಆಲಿಸುತ್ತ) ತಡೀ.... ಮಗನೇ ತಡೀ.... ನಿಶ್ಶಬ್ದ... ನೀರವ.... ಸದ್ದಿಲ್ಲ.... ಗದ್ದಲವಿಲ್ಲ.... ಎಲ್ಲರೂ.... ನಿದ್ದೆಯಲ್ಲಿ....

ಮಂಗಾಣಿ : ಲಂಕೆಗೆ ಹನುಮಂತ ಹೊಕ್ಕಾಗ ಹಾಗೇ....

ರಂಗಾಣಿ : (ಅದರ ಬಾಲ ಚಿವುಟಿ.... ಅದೇ ಧಾಟಿಯಲ್ಲಿ ರೆಪ್ಪೆ ಹೊಡೆಯದೆ) ಬಾಯಿ ಮುಚ್ಚಿಕೋ.... ಎಲೆ ವಾನರನೇ.... ಎಲ್ಲರೂ.... ನಿದ್ದೆಯಲ್ಲಿ ಬಾಗಿಲು ಹಾಕಿದೆ.... ಬನ್ನಿ.... ಹೀಗೆ.... ಹೀಗೆ ಕಿಟಕಿಯೊಳಗಿಂದ ನೋಡುವ.... ಬನ್ನಿ.

(ಮೂವರೂ ಈತ ಹೇಳಿದ ಧಾಟಿಯಲ್ಲೇ ನಡೆಯುತ್ತ ಕಿಟಕಿಯ ಬಳಿಯಿದ್ದಾರೆ.)

ಪಿಂಗಾಣಿ : (ಪಿಸುವಾಗಿ) ಹುಡುಗೀ ಇನ್ನೂ ಕುಳಿತೇ ಇದ್ದಾಳೆ.

ಮಂಗಾಣಿ : ನಾನು ಇಳಿಯಲೇ? ಮಾಡಿನಿಂದ ಇಳಿಯಲೇ? ಇಳಿದು ಮನೆಯ ಒಳಗೆ ಹಾರಿ ಅಜ್ಜಿಯನ್ನು ಅಜ್ಜನನ್ನು ಹೊಡೆದು ಅಜ್ಜಿಬಜ್ಜಿ ಮಾಡಿ, ಗಿಳಿಮರಿಯನ್ನು ಗುಳುಮ ಮಾಡಿ ಸಣ್ಣಮ್ಮನನ್ನು ಕುಣಿಸಿ ದಣಿಸಿ, ನಾಯಿಮರಿಯ ಎತ್ತಿಕೊಂಡು....

ಪಿಂಗಾಣಿ : ಸಾಕಪ್ಪಾ, ನಿಲ್ಲಿಸು, ನಿನ್ನ ದಾಂಧಲೆ ನನಗೆ ಗೊತ್ತಿದೆ. ಈಗ ಸದ್ದು ಮಿಸುಕಾಡದೆ ಬಾಲ ಮಡಚಿ ಒಂದು ಕ್ಷಣ ನಿಂತುಕೋ.

ರಂಗಾಣಿ : (ಕಿವಿ ಎಳೆದುಕೊಂಡು ಆಲೈಸುತ್ತಾ).... ಅಗೋ ಒಳಗಿಂದ ಮಾತು ಕೇಳಿಸುತ್ತಿದೆ.

(ಮೂವರೂ ಆಲಿಸುವರು.)

ಅಜ್ಜ : ಮಲಕೋ ಮಗಾ. ಇನ್ನೂ ಕುಳಿತೇ ಇದ್ದೀಯಲ್ಲ.

ಸಣ್ಣಮ್ಮ : ಮಲಗುವುದಿಲ್ಲ. ನಿದ್ದೆ ಬಂದಾಗ ನನ್ನ ಪಪ್ಪಿ ಸತ್ತುಹೋದರೆ?

ಅಜ್ಜಿ : (ಗದರಿಸಿ) ಮಲಕೋ ಅಂದರೆ? ಹೈತ್. ಹೇಳಿದ್ದೇ ಹಠ. ಎಲ್ಲ ನೀವು ಕಲಿಸಿ ಇಟ್ಟದ್ದು. ಸತ್ತರೆ ಸಾಯಲಿ ಅದು. ಅದರೊಟ್ಟಿಗೆ ನಾವೂ ಸಾಯಲಿಕ್ಕಾಗುತ್ತದಾ?

ಸಣ್ಣಮ್ಮ : ಹೋ.... (ಅಳುವಳು) ನೀನು ಕೆಟ್ಟ ಅಜ್ಜಿ. ನನಗೆ ಬೇಡ. ಹೋಗು.... ನನ್ನ ಪಪ್ಪಿ ಸಾಯುವುದಿಲ್ಲಾ....

ಪಂಚರಂಗಿ : ಅಜ್ಜೀ, ಅಜ್ಜಾ, ಸುಮ್ಮನೆ ಯಾಕೆ ಅವಳಿಗೆ ಕಿರಿಕಿರಿ ಮಾಡುತ್ತೀರಿ? ಅವಳಿಗೆ ದುಃಖವಾಗಿದೆ. ಒಳ್ಳೆಯದೊಂದು ಕಥೆ ಹೇಳಿ. ಸ್ವಲ್ಪ ಖುಶಿಯಾಗಲಿ.

ಅಜ್ಜ : ಯಾವ ಕಥೆ ಹೇಳಲಪ್ಪಾ....

ಸಣ್ಣಮ್ಮ : ಯಾವ ಕಥೆಯೂ ಬೇಡಾ.... ನಂಗೆ ಏನೂ ಬೇಡ.

ಅಜ್ಜಿ : ಇದೆಯಲ್ಲ. ಅದೊಂದು ಕತೆ. ರಾಜಕುಮಾರಿ, ಬೇಟೆ, ಮೈನಾಹಕ್ಕಿ, ಮಾಣಿಕ್ಯ ಮಣಿ.... ಪೊಟರೆ, ಯಕ್ಷಿಣಿ, ಏನೇನೋ ಉದ್ದಕ್ಕೂ, ಅದು ಪೂರೈಸುವುದರೊಳಗೆ ಸಣ್ಣಮ್ಮನಿಗೆ ನಿದ್ದೆ ಬಾರದಿದ್ದೀತೇ?

ಸಣ್ಣಮ್ಮ : ನಂಗೆ ಕಥೆ ಬೇಡ.... ಯಾವ ಕಥೆಯೂ ಬೇಡ.... ನಿದ್ದೆ ಬರಿಸುವ ಕಥೆಯಂತೂ ಬೇಡವೇ ಬೇಡ....

ಅಜ್ಜ : ಸರಿ, ಸಣ್ಣಮ್ಮಾ.... ರಾಜಕುಮಾರಿಯ ಜೀವ ಉಳಿಸಿದ ಮೈನಾಹಕ್ಕಿಯ ಕಥೆ– ಬೇಡವಾ ಹಾಗಾದರೆ?

ಸಣ್ಣಮ್ಮ : ಜೀವ ಉಳಿಸಿದ ಕಥೆ? ಹೇಳಜ್ಜಾ.... ಬೇಗ ಹೇಳು.

## ದೃಶ್ಯ – ೨

(ಕಥೆ ಸುರುವಾಗುತ್ತಿದ್ದಂತೆ ಸಣ್ಣಮ್ಮ ಹೂಂಗುಡುತ್ತಿರುತ್ತಾಳೆ. ದೃಶ್ಯಗಳು ಸಣ್ಣಮ್ಮನ ಕಣ್ಣಮುಂದೆ ಸುಳಿದ ಹಾಗೆ ಚಿತ್ರವತ್ತಾಗುತ್ತವೆ.)

ಅಜ್ಜ : ಒಂದೂರಿನಲ್ಲಿ ಒಬ್ಬ ರಾಜಕುಮಾರಿ ಇದ್ದಳಂತೆ. ಅವಳೊಂದು ದಿನ ಸಖಿಯರೊಂದಿಗೆ ಬೇಟೆಗೆ ಹೊರಟಳಂತೆ. ನೂರು ಯೋಜನ ದೂರದ ಕಾಡು. ಹೋಗೀ ಹೋಗೀ ಹೋಗೀ, ಕಡೆಗೂ ಒಂದು ಮೊಲ ಕಣ್ಣಿಗೆ ಕಾಣಿಸಿತಂತೆ. ರಾಜಕುಮಾರಿ ಅದನ್ನು ಅಟ್ಟಿಸಿಕೊಂಡು ಹೋದಳಂತೆ. ದೂರ ದೂರ ಬಹಳ ದೂರ ಹೋದಳು. ಸಖಿಯರು ಹಿಂದುಳಿದರು. ಮೊಲ ಸಿಗಲಿಲ್ಲ. ರಾಜಕುಮಾರಿ ಒಬ್ಬಳೇ ಆಗಿಬಿಟ್ಟಳು, ಆಯಾಸಗೊಂಡಿದ್ದಳು....

ರಾಜಕುಮಾರಿ : ಹಾ, ನಾನೆಲ್ಲಿದ್ದೇನೆ? ಸಖಿಯರೆಲ್ಲ ಎಲ್ಲಿ?.... ಬಹಳ ಬಾಯಾರಿಕೆ....

ಅಜ್ಜ : ಆಗ ಒಂದು ಸಿಂಹದ ಗರ್ಜನೆ ಕೇಳಿಸಿತು. ಸಿಂಹ ಕೂಡ ಹಸಿದಿತ್ತು. ಅವಳ ಮೇಲೆ ಎರಗಿತು. ರಾಜಕುಮಾರಿ ಹೋರಾಡಿ ತನ್ನ ಬಾಣದಿಂದ ಸಿಂಹವನ್ನು ಚುಚ್ಚಿಬಿಟ್ಟಳು. ಸಿಂಹ ಹೆದರಿ ಓಡಿ ಹೋಯಿತು..... ಆದರೆ ಅವಳಿಗೂ ಸಿಂಹ ಗಾಯ ಮಾಡಿತ್ತಲ್ಲಾ?

ಅವಳು ಅಲ್ಲೇ ಕುಸಿದಳು. ಇನ್ನೇನು ಜೀವ ಹೋಗುವುದರಲ್ಲಿತ್ತು. ಅಲ್ಲೊಂದು ಮೈನಾಹಕ್ಕಿ ಮರದ ಪೊಟರೆಯಲ್ಲಿ ಕುಳಿತು ಎಲ್ಲಾ ನೋಡುತ್ತಾ ಇತ್ತು. ಹಾರಿ ರಾಜಕುಮಾರಿಯ ಹತ್ತಿರ ಬಂತು.

ಮೈನಾ : (ಕುಪ್ಪಳಿಸುತ್ತ) ಇದು ಯಾರು, ನಮ್ಮ ರಾಜಕುಮಾರಿ! (ಪರೀಕ್ಷಿಸಿ) ಅಯ್ಯೋ ಸಾಯುತ್ತಿದ್ದಾಳೆ. ನನ್ನ ಮಾಣಿಕ್ಯದ ಮಣಿ ತರುತ್ತೇನೆ. ಇವಳನ್ನು ಬದುಕಿಸುತ್ತೇನೆ.

ಅಜ್ಜ ; ಮೈನಾಹಕ್ಕಿ ಹಾರಿ ಮರದ ಪೊಟರೆಯೊಳಗಿಂದ ಮಾಣಿಕ್ಯಮಣಿಯನ್ನು ತಂದು

ಅವಳಿಗೆ ಮುಟ್ಟಿಸಿತಂತೆ. ಮತ್ತೇ ಹಾರಿ ಹೋಗಿ ಪೊಟರೆಯೊಳಗೆ ಕುಳಿತಿತಂತೆ. ರಾಜಕುಮಾರಿ ಏನೂ ಆಗದವಳಂತೆ ಎದ್ದು ನಿಂತಳಂತೆ.

ರಾಜಕುಮಾರಿ : ಅರೆ, ನನಗೇನಾಗಿತ್ತು? ಸಖಿಯರೇ ಎಲ್ಲಿದ್ದೀರಿ?

ಅಜ್ಜ : ಆಗ ಸಖಿಯರೂ ಬಂದು ಸೇರಿದರಂತೆ. ಅವರೆಲ್ಲರೂ ರಾಜಧಾನಿಯನ್ನು ಸೇರಿ ಸುಖ ಸಂತೋಷದಿಂದ ಇದ್ದರಂತೆ.

ಸಣ್ಣಮ್ಮ : ಕಡೆಗೆ? ಅಜ್ಜಾ.... ಆ ಮೈನಾ ಹಕ್ಕಿ?

(ಹೊರಗೆ)

ಮಂಗಾಣಿ : ಎಲ್ಲರೂ ಕಥೆಯಲ್ಲಿ ಮಗ್ನರಾಗಿದ್ದಾರೆ. ಈಗ ಹಾರಲೇ? ನಾನು ಹಾರಲೇ? ನಾನು ಹಾರಲೇ? ಮಾಡಿನಿಂದ ಇಳಿದು ಕೆಳಗೆ ಹಾ....

ರಂಗಾಣಿ : ರಲೇ? ಏನಪ್ಪಾ ದರ್ವೇಸಿ, ಒಂದು ಕಥೆ ಕೇಳಲಿಕ್ಕೂ ಸರಿಯಾಗಿ ಬಿಡುವುದಿಲ್ಲ. (ಲೊಟ್ಟೆ ಹೊಡೆಯುತ್ತಾ) ಎಷ್ಟು ಚೆನ್ನಾಗಿದೆ ಕಥೆ.

ಪಿಂಗಾಣಿ : ಮಂಗಾಣಿ, ಹಾರುವುದು ಈಗಲ್ಲ. ನಾನು ಹೇಳುತ್ತೇನೆ. ಆಗ.

ಸಣ್ಣಮ್ಮ : (ಒಳಗೆ) ಹೇಳಜ್ಜ, ಆ ಮೈನಾ ಹಕ್ಕಿ? ಅದೇನಾಯಿತು?

ಅಜ್ಜ : (ಮೊಮ್ಮಗಳನ್ನು ತಟ್ಟಿ ಮಲಗಿಸುತ್ತಾ) ಹೇಳುತ್ತೇನೆ. ನೀನು ಮಲಗಿಕೊಂಡು ಕೇಳುತ್ತಿರು...

(ಒಳಗಿಂದ ಹಾಡು)
ಮೈನಾ ಹಕ್ಕಿ
ಹಾಡಿತು ಹಾಡು
ಮರದಲಿ ಕಟ್ಟಿತು
ಹುಲ್ಲಿನ ಗೂಡು
ಮೊಟ್ಟೆಯನಿಟ್ಟು,
ಮರಿಗಳ ಮಾಡಿ
ಸುಖದಿಂದಿತ್ತು
ಮರಿಗಳ ಕೂಡಿ
ತುಂಟಾ ಬಂದ
ಕಣ್ಣನ್ನಿಕ್ಕಿ
ಹೊಡೆಯುವೆನೆಂದ
ಕಲ್ಲು ಹೆಕ್ಕಿ
ಮರಿಗಳು ಚಿಲಿಪಿಲಿ
ಎಂದವು ಬಿಕ್ಕಿ
ಬೇಡಾ ಎಂದಿತು

ಮೈನಾ ಹಕ್ಕಿ
ನೋಡೀ ನೋಡೀ
ಗುರಿಯನ್ನಿಟ್ಟ
ಕೆಟ್ಟ ಹುಡುಗ
ಹೊಡೆದೇ ಬಿಟ್ಟ
ಹಾರಿತು ಹಕ್ಕಿ
ಒಮ್ಮೆಲೇ ಚೀರಿ
ಹಿಂದೆಯೇ ಹೋದವು
ಮರಿಗಳು ಹಾರಿ!

(ಹೊರಗೆ)

ಪಿಂಗಾಣಿ : ಹೌದು.... ಈ ಅಜ್ಜನಿಗೆ ನಾನು ಮೈನಾಹಕ್ಕಿಯನ್ನು ಹೊಡೆದು ಓಡಿಸಿದ್ದು ಹೇಗೆ ತಿಳಿಯಿತೂ? (ಯೋಚಿಸುತ್ತಾನೆ.)

ರಂಗಾಣಿ : (ಕಥೆಯಲ್ಲೇ ಭಾರೀ ಮಗ್ನನಾದಂತೆ) ಹೋಗು, ಆಚೆ ಹೋಗು. ಅಷ್ಟು ಮಾತಾಡಬೇಕೆಂದಿದ್ದರೆ. ನಾನು ಕಥೆ ಕೇಳಬೇಕು.

(ಒಳಗೆ)

ಸಣ್ಣಮ್ಮ : ಪಾಪ ಅಲ್ಲವ ಅಜ್ಜಾ? ಜೀವ ಉಳಿಸಿದ ಮೈನಾ ಹಕ್ಕಿಗೆ ಎಂಥಾ ಕಷ್ಟ ಬಂತು!

ಅಜ್ಜಿ : ಥಽಽ ಇನ್ನೂ ನಿದ್ದೆ ಬಂದಿಲ್ಲವೇ?

ಸಣ್ಣಮ್ಮ : ಅಜ್ಜಾ.... ಆ ಮಾಣಿಕ್ಯ ಮಣಿ? ಅದೇನಾಯ್ತು?

ಅಜ್ಜ : ಆಮೇಲೆ ಆ ಪೊಟರೆಯೊಳಗೆ ಒಂದು ಯಕ್ಷಿಣಿ ಬಂದು ಸೇರಿಕೊಂಡಿತಂತೆ. ಮಾಣಿಕ್ಯಮಣಿಯನ್ನು ಕಾಪಾಡಲಿಕ್ಕೆ.

(ಹೊರಗೆ)

ಪಿಂಗಾಣಿ : ಓಹೋ, ಹೀಗೇನು? ಅದಕ್ಕೇ ನಾನು ಹಕ್ಕಿ ಮೊಟ್ಟೆ ಇದೆಯಾ ಎಂದು ಕೈ ಹಾಕಿದರೆ ಏನೋ ಕಚ್ಚಿದಂತೆ ಆಗುತ್ತಿರುವುದು.

ರಂಗಾಣಿ : ಹಾಗೇ ಆಗಬೇಕು ನಿನಗೆ.

ಮಂಗಾಣಿ : ಅಧಿಕ ಪ್ರಸಂಗದ ಮುದಿಕೋತಿ ಅಂತ ನನ್ನ ಪಿಜ್ಜನೊಬ್ಬ ಇದ್ದ. ಅವ ಸತ್ತ. ನೀನು ಹುಟ್ಟಿದೆ.

(ಒಳಗೆ)

ಸಣ್ಣಮ್ಮ : ಅಜ್ಜಾ, ಮಾಣಿಕ್ಯಮಣಿಯೆಂದರೆ?

ಅಜ್ಜ : ಮಗೂ, ಅದೆಲ್ಲ ಕಥೆಯಲ್ಲಿ ಅಲ್ಲವೆ? ಅದೊಂದು ಮಹಿಮೆಯ ಮಣಿ. ಪೊಟರೆಯೊಳಗೆ ಇದ್ದರೆ ಬೆಳಕು ಬೀರುತ್ತದೆಯಂತೆ. ಹೊರಗೆ ತೆಗೆದರೆ ಬೆಳಕು ನಂದಿಸಿಕೊಂಡು ಇನ್ನಷ್ಟು ಶಕ್ತಿ ಪಡೆಯುತ್ತದೆಯಂತೆ. ಆದರೆ ನೆಲಕ್ಕೆ ಬಿದ್ದರೋ, ಆಡುವ ಗೋಲಿಯಾಗಿ ಬಿಡುತ್ತದೆಯಂತೆ.... ಅಂತೆಲ್ಲ ನಾನು ಓದಿದ್ದು.

ಸಣ್ಣಮ್ಮ : ....ಯಕ್ಷಿಣಿಯೆಂದರೆ?

ಅಜ್ಜಿ : ಅಯ್ಯ, ಇವಳ ಸವಾಲು ಮುಗಿಯುವುದೇ ಇಲ್ಲ. ಯಕ್ಷಿಣಿಯೆಂದರೆ ಭಕ್ಷಿಣಿ. ಮಲಗಿಕೊಳ್ಳೇ ಹುಡುಗಿ. ಇದು ಅತಿಯಾಯಿತು. ನಾನು ಆ ನಾಯಿಮರಿಯನ್ನು ತರುವುದೇ ಬೇಡವಿತ್ತು. ನಾಳೆ ಬೇಗ ಎದ್ದು ಆ ಗಿಡಗಳನ್ನೆಲ್ಲ ನಿಲ್ಲಿಸಬೇಕು. ಹೊಸ ಪಾತಿ ಮಾಡಬೇಕು. ಕೆಲಸ ತುಂಬ ಇದೆ ಅಜ್ಜನಿಗೆ. ನೀನೋ, ಮಾತೇ ಮುಗಿಸುವುದಿಲ್ಲ. ಅವರಿಗಾದರೂ ಮಲಗಲು ಬಿಡು ನೋಡುವ.

## ದೃಶ್ಯ – ೩

(ಅಜ್ಜ ಅಜ್ಜಿ ಗೊರಕೆ ಹೊಡೆಯುತ್ತಿದ್ದಾರೆ. ನಾಯಿಮರಿ ನರಳುತ್ತಿದೆ. ಸಣ್ಣಮ್ಮ ಮೆಲ್ಲನೇಳುತ್ತಾಳೆ.)

ಪಿಂಗಾಣಿ : (ಅದನ್ನೇ ಹೇಳುತ್ತಾನೆ ಮೆಲುದನಿಯಲ್ಲಿ) ಅಜ್ಜ ಅಜ್ಜಿ ಗೊರಕೆ ಹೊಡೆಯುತ್ತಿದ್ದಾರೆ. ನಾಯಿಮರಿ ನರಳುತ್ತಿದೆ. ಸಣ್ಣಮ್ಮ ಮೆಲ್ಲನೇಳುತ್ತಾಳೆ.

ರಂಗಾಣಿ : ಪಂಚರಂಗಿಯ ಪಂಜರದತ್ತ ನಡೆಯುತ್ತಾಳೆ.

ಸಣ್ಣಮ್ಮ : ಪಂಚರಂಗಿ ಗಿಣಿಯೇ.... ನಿದ್ದೆ ಬಂತೇ?

ಪಂಚರಂಗಿ : ಇಲ್ಲ ಸಣ್ಣಮ್ಮಾ.

ಮಂಗಾಣಿ : (ಸಣ್ಣಮ್ಮನ ದನಿಯನ್ನೇ ಅಣಕಿಸುತ್ತಾ) 'ಪಂಚರಂಗಿ ಗಿಣಿಯೇ ನಿದ್ದೆ ಬಂತೇ?' ಕೇಳುತ್ತಾಳೆ. ಗಿಣಿ (ಅಣಕಿಸಿ) 'ಇಲ್ಲ ಸಣ್ಣಮ್ಮಾ' ಅನ್ನುತ್ತದೆ.

ಪಿಂಗಾಣಿ : ಲೋ ಕೋತಿಮಂಗಣ್ಣ, ನಾವು ಮಾತಾಡಿದಂತೆ ನೀನೂ ಮಾತಾಡಲಿಕ್ಕೆ ಹೊರಟೆಯಾ. ನಮಗೆ ನಿನ್ನಂಥವರ ಕಮೆಂಟರಿ ಅಗತ್ಯವಿಲ್ಲ ತಿಳಿಯಿತೇ?

ಮಂಗಾಣಿ : ತಾವು ಮಾತ್ರ ಏನು ಹೇಳಿದರೂ ಸರಿ. ನಾನು ಹೇಳಿದರೆ ಆಗದು. ಎಂತಹ ಮನುಷ್ಯರೋ.

ಸಣ್ಣಮ್ಮ : ಪಂಚರಂಗೀ, ನಾನೀಗ ನೂರು ಯೋಜನ ದೂರದ ಕಾಡಿಗೆ ಹೋಗಬೇಕಲ್ಲ, ಹೇಗೆ?

ಪಂಚರಂಗಿ : ಯಾಕೆ ಸಣ್ಣಮ್ಮಾ?

ಸಣ್ಣಮ್ಮ : ಆ ಯಕ್ಷಿಣಿಯನ್ನು ಪ್ರಾರ್ಥಿಸಿ ಮಾಣಿಕ್ಯಮಣಿಯನ್ನು ತರಬೇಕು. ಪಪ್ಪಿಯನ್ನು

ಬದುಕಿಸಬೇಕು. ಗಿಡಮರಗಳನ್ನು ಜೀವ ಮಾಡಬೇಕು. ಹೋಗುವುದು ಅಷ್ಟು ದೂರ, ಹೇಗೆ ಹೇಳು.

ಪಂಚರಂಗಿ : ಅದೇನೂ ಕಷ್ಟವಿಲ್ಲ ಸಣ್ಣಮ್ಮ, ಮೊದಲು ಪಂಜರದ ಬಾಗಿಲು ತೆರೆ.

ಪಿಂಗಾಣಿ : (ಪಿಸುವಾಗಿ) ಸಣ್ಣಮ್ಮ ಪಂಜರದ ಬಾಗಿಲು ತೆರೆದಳು.

ಪಂಚರಂಗಿ : ಬಾ, ಮೊದಲು ಹೊರಗೆ ಹೋಗೋಣ.

(ಸಣ್ಣಮ್ಮನೂ, ಪಂಚರಂಗಿಯೂ ಹೊರಗೆ ಬಂದರು)

ಪಂಚರಂಗಿ : ಸಣ್ಣಮ್ಮಾ, ಆ ಯಕ್ಷಿಣಿ ನನಗೆ ಗೊತ್ತು. ನನ್ನ ರೆಕ್ಕೆ ಸಣ್ಣದೆಂದು ಚಿಂತಿಸಬೇಡ. ಎರಡೂ ರೆಕ್ಕೆಗಳಿಗೆ ಗಾಳಿಯೂದು ಆಗ ನಾನು ನಿನ್ನನ್ನು ನೂರು ಯೋಜನವೇನು ಸಾವಿರ ಯೋಜನೆ ದೂರವಾದರೂ ಒಯ್ದೇನು.

(ಸಣ್ಣಮ್ಮ ಗಾಳಿಯೂದುವಳು, ಊದಿದಂತೆ ಅದರ ರೆಕ್ಕೆ ಶಕ್ತಿವಂತವಾಗುವುದು. ಪಿಂಗಾಣಿ, ರಂಗಾಣಿ, ಮಂಗಾಣಿ ಮಾಯೆಗೊಳಗಾದವರಂತೆ ಬೆಪ್ಪಾಗಿ ನೋಡುತ್ತ ನಿಂತೇ ಇರುವರು)

ಪಂಚರಂಗಿ : ಹೂ. ಕುಳಿತುಕೋ ಬೇಗ.

ಸಣ್ಣಮ್ಮ : (ಪಂಚರಂಗಿಯ ಬೆನ್ನೇರಿ) ಗಿಡಗಳೇ ಮರಗಳೇ ಹೆದರಬೇಡೀ.... ನಾನು ಯಕ್ಷಿಣೀ ವೃಕ್ಷದ ಕಡೆಗೆ ಹೋಗಿ ಮಾಣಿಕ್ಯ ತಂದು ನಿಮ್ಮನ್ನೆಲ್ಲ ಮುಂಚಿನಂತೇ ಮಾಡುತ್ತೇನೆ. ನಾನು ಹೋಗಿದ್ದು ಯಾರಿಗೂ ಹೇಳಬೇಡಿ.... ಕಳ್ಳರಿಗೆ ತಿಳಿದರೆ ಕಷ್ಟ ಕೊಡುತ್ತಾರೆ. (ಪ್ರೇಕ್ಷಕರತ್ತ ತಿರುಗಿ) ದಯವಿಟ್ಟು ನೀವೂ ಎಲ್ಲ ನನ್ನ ನಾಯಿಮರಿಯನ್ನು ನೋಡಿ ಕೊಳ್ಳೀ.... ಯಾರಿಗೂ ನಾನೆಲ್ಲಿಗೆ ಹೋಗಿದ್ದೇನೆ ಅಂತ ಹೇಳಬೇಡಿ?

ಪಿಂಗಾಣಿ : (ನಿದ್ದೆಯಿಂದ ಎಚ್ಚೆತ್ತವನಂತೆ) ಏ ಬರ್ರೋ.... ಅವರು ಹಾರುವ ಮೊದಲೇ ಹಿಡಿದು ಬಿಡೋಣ ಇಬ್ಬರನ್ನೂ.

(ಮೂವರೂ ಧಾವಿಸಿ ಬರುತ್ತಿದ್ದಂತೆ ಪಂಚರಂಗಿಯ ಬೆನ್ನೇರಿ ಸಣ್ಣಮ್ಮ ಮಿಂಚಿನ ವೇಗದಲ್ಲಿ ಕಾಣೆಯಾಗುತ್ತಾಳೆ.)

ರಂಗಾಣಿ : (ಪಟಪಟ ರೆಪ್ಪೆ ಹೊಡೆಯುತ್ತಾ) – ಭರ್ರ ಶಬ್ದ ಆದದ್ದೊಂದೇ. ಹ್ಞಂ ಏನು ವಿಚಿತ್ರ! ಕಣ್ಣುಮುಚ್ಚಿ ತೆರೆಯುವುದರೊಳಗೆ ಪಂಚರಂಗಿಯೂ ಇಲ್ಲ, ಸಣ್ಣಮ್ಮನೂ ಇಲ್ಲ. ಅದ್ಭುತ! ಅದ್ಭುತ!

ಪಿಂಗಾಣಿ : ಅದ್ಭುತವಲ್ಲವೋ ಅನಾಹುತ, ಪ್ರಮಾದ.

ಮಂಗಾಣಿ : (ಅವಸರವಸರದಿಂದ ಬಾಲ, ಮುಖ ಅಲ್ಲಾಡಿಸುತ್ತಾ) ಏನದು ವಿನೋದ?

ಪಿಂಗಾಣಿ : ಲೋ ಬುದ್ಧಿಮಂದ, ಕೇಳು. ಮಾಣಿಕ್ಯವನ್ನು ಅವಳು ಹೇಗಾದರೂ ತರುತ್ತಾಳೆ. ನಾಯಿಯನ್ನು ಬದುಕಿಸುತ್ತಾಳೆ.

ರಂಗಾಣಿ : (ಪಿಸ್ಸನೆ ನಗುತ್ತ) ಹೆಡ್ಡು ಧೂಮಾ–ಅಲ್ಲಿ ನೋಡು, ಈಗ ಅವಳಿಲ್ಲ. ಬಾಗಿಲು ತೆರೆದಿದೆ. ನಾವೇ ಒಳಗೆ ಹೋಗಿ ನಾಯಿಮರಿಯನ್ನು ಎತ್ತಿಕೊಂಡು ಓಡಿಹೋದ–

ಮಂಗಾಣಿ : ರೆ?

ಪಿಂಗಾಣಿ : ರೆ? ಇವತ್ತಿಗೆ ನೀನು ಹುಟ್ಟಿದ್ದು ಸಾರ್ಥಕವಾಯಿತು ಬಿಡು ರಂಗಾಣೀ.... ಹಾಗಾದರೆ ನಡೀ.... ರೆಡೀ ಒನ್ ಟೂ ತ್ರೀ....

(ಮೂರನೇ ಹೆಜ್ಜೆಗೆ ಅವರು ಮನೆಯೊಳಗೆ ಕಾಲಿಟ್ಟಿರುತ್ತಾರೆ. ಇಟ್ಟಂತೆಯೇ ಹಿಮ್ಮೆಟ್ಟುತ್ತಾರೆ)

ಪಿಂಗಾಣಿ : ಆಕೆ ಸಾಮಾನ್ಯದವಳಲ್ಲಪ್ಪ, ಮಹಾಬುದ್ಧಿವಂತೆ, ಅಜ್ಜಿ ಮತ್ತು ಅಜ್ಜನ ನಡುವೆ ಮರಿಯನ್ನು ಮಲಗಿಸಿ ಅದರ ಮೇಲೆ ಅವರಿಬ್ಬರ ಕೈಯನ್ನು ಇಟ್ಟು ಹಾರಿದ್ದಾಳೆ... ಇದೆಲ್ಲಾ ಯಾವ ಮಾಯಕದಲ್ಲಿ ! ಈಗ ಮರಿಯನ್ನು ಎತ್ತುವುದು ಹೇಗೆ?

ರಂಗಾಣಿ : ಅಯ್ಯಯ್ಯೋ, ನನ್ನಿಂದಾಗದು. ಆ ಮುದುಕನ ಕೈಗೆ ಸಿಕ್ಕರೆ ಕಡೆಗೆ ಬೇಡಿ ತಿನ್ನುವ ಆಸೆಯೂ ಇಲ್ಲ.

ಮಂಗಾಣಿ : ನನ್ನಿಂದಲೂ ಆಗದು. ನಾನೆಂದೂ, ಸ್ಸೀ, ಮುದುಕಗಿದುಕರೊಂದಿಗೆ ಹೋರಾಟಕ್ಕೆ ಇಳಿದವನೇ ಅಲ್ಲ. ಏನು ಹೇಳುತ್ತೀರಿ? ನನಗೊಂದು ಗ್ರೇಡ್ ಇಲ್ಲವೆ?

ಪಿಂಗಾಣಿ : ಮಂಗಾಣಿ, ರಂಗಾಣಿ ಈಗ ಯಾವುದಕ್ಕೂ ಸಮಯವಿಲ್ಲ. ಉಪಾಯ ಒಂದೇ. ನಾವೂ ಅವಳನ್ನು ಹಿಂಬಾಲಿಸುವುದು. ಮಾಣಿಕ್ಯಮಣಿಯನ್ನು ಅವಳಿಂದ ಕಸಿಯುವುದು.

ರಂಗಾಣಿ : ಆದರೆ ಹೇಗೆ ಅಂತ. ಅವಳೇನೋ ಹಾರಿದಳು. ನಾವು? ನಮಗೂ ಇದ್ದಾನೆ ಈ ಮಂಗಣ್ಣ. ಯಾತಕ್ಕೆ?

ಪಿಂಗಾಣಿ : ಮುರಿದು ಒಲೆಗೆ ತುಂಬಲಿಕ್ಕೆ.

ಮಂಗಾಣಿ : ಹಾಗೆ ಹೇಳುವಿರಾ? ಅಂತ ಸಣ್ಣ ಹನುಮಂತ ಲಂಕಾಪುರವನ್ನೇ ಸುಟ್ಟ ಕಥೆ ಗೊತ್ತಿಲ್ಲವೇ ಕಳ್ಳ ಮಕ್ಕಳೇ? ಹೇಗೆ? ಕಪಿಗಳೆಲ್ಲರೂ ಗಾಳಿ ಹೊಡೆದದ್ದರಿಂದ. ಈಗ ನೀವೂ ಹಾಗೆಯೇ ಮಾಡಿ. ಹಾಡಿ, ಹೊಗಳಿ, ಗಾಳಿ ಹಾಕಿ. ಆ ಕೈ ಈ ಕೈ ಆ ಕಾಲು ಈ ಕಾಲು ತಿಕ್ಕಿ

(ಆವೇಶಗೊಂಡಂತೆ ಹೂಂಕರಿಸುವನು)

(ಸ್ತುತಿ)

ಕೋತಿ ಭಗವಂತ
ಇವ
ಸಾಚಾ ಹನುಮಂತ

ತೋಳಿಗೆ ಸಾವಿರ
ಆನೆ ಬಲ
ಕಾಲಿನ ರೋಮಕೆ
ಸಿಂಹ ಬಲ
ಕೋತೀ ಹನುಮಂತ
ಇವ
ಸಾಚಾ ಭಗವಂತ!
ತಿನ್ನ ಹೋದರೇ
ಬಕಾಸುರ
ಹಾರ ಹೋದರೇ
ಭಯಂಕರ
ಬೀಸಿದನೆಂದರೆ
ಈ ಬಾಲ
ಚಪ್ಪಟೆಯಾಗುದು
ಭೂಗೋಲ
ಎಂಥಾ ಕೊತವಾಲ
ಇವ ಎಂಥಾ ಗುಣಶೀಲ
ಜೈ ಜೈ ಕೋತೀ ಹನುಮಂತ
ಜೈ ಜೈ ಕೋತೀ ಹಠವಂತ
ಜೈ ಜೈ ಎನ್ನೀ
ಜೈ ಜಯವೆನ್ನೀ
ಜೈ ಜೈ ಜೈ ಜೈ
ಭಜರಂಗ ಬಲಿ
ಜೈ ಜೈ ಜೈ ಜೈ
ಜೈ ವಾನರ ಹುಲಿ

(ಅವರು ಗಾಳಿ ಬೀಸಿ ಭಜಿಸಿದ ಹಾಗೆಯೇ ಮಂಗಾಣಿ ಶಕ್ತಿಗೂಡುತ್ತಿದ್ದಾನೆ)

ಮಂಗಾಣಿ : ಹೂಂ... ಈಗ ಹತ್ತೀ.... ಅವರೆಲ್ಲೇ ಇರಲೀ... ಅತಳ ವಿತಳ ರಸಾತಳ ಪಾತಾಳ ಎಲ್ಲೇ ಇದ್ದರೂ ಅವರು ಸಿಕ್ಕಿದರೆಂದೇ ತಿಳಿದುಕೊಳ್ಳೀ.... ಜೈ ಹನುಮಾನ್!

(ಪಿಂಗಾಣಿ ರಂಗಾಣಿ ಇಬ್ಬರೂ ಮಂಗಾಣಿಯ ತೋಳುಗಳ ಮೇಲೆ ಕುಳಿತಂತೆ ನಿಮಿಷದಲ್ಲಿ ಮೂವರೂ ಕಾಣೆಯಾಗುತ್ತಾರೆ)

## ದೃಶ್ಯ – ೪

(ಯಕ್ಷಿಣೀ ವೃಕ್ಷ. ಪೊಟರೆಯೊಳಗೆ ಮಾಣಿಕ್ಯದ ಹರಳಿನ ಬೆಳಕಿದೆ. ಪಂಚರಂಗಿ ಸಣ್ಣಮ್ಮನನ್ನು ವೃಕ್ಷದ ಬಳಿ ಇಳಿಸುತ್ತದೆ.)

ಪಂಚರಂಗಿ : ಸಣ್ಣಮ್ಮಾ, ಇದೇ ಆ ಮರ.

ಸಣ್ಣಮ್ಮ : ಹಂ! ಇದೇನಿದು! ಬೆಳಕು ಬೀರುವ ಮರ!

ಪಂಚರಂಗಿ : ಅಜ್ಜ ಹೇಳಿಲ್ಲವೇ! ಅದು ಮಾಣಿಕ್ಯಮಣಿಯ ಬೆಳಕು.

ಸಣ್ಣಮ್ಮ : ಮತ್ತೆ ಯಕ್ಷಿಣಿ?

ಪಂಚರಂಗಿ : (ಪಿಸುವಾಗಿ) ನೋಡೋಣ.... ಒಳಗಿರಬಹುದು.

ಸಣ್ಣಮ್ಮ : ಹಾಂ.... ವಿನಯದಿಂದ ಕರೆ. (ಅಷ್ಟರೊಳಗೆ ಯಕ್ಷಿಣಿಯ ದನಿ ಕೇಳಿಸುತ್ತದೆ)

(ಹಾಡು)

ಧಿತ್ತೋಂ ಥ
ಧಿತ್ತೋಂ ಥ
ತತ್ತೋಂ ಥ
ತತ್ತೋಂ ಥ
ಯಕ್ಷಿಣೀ ದೇವತೆಯು
ತಕ್ಷಣವೆ ಮಿಂಚಂತೆ
ಪ್ರತ್ಯಕ್ಷಳಾದಳಂತೆ! ಆಹ!
ಪ್ರತ್ಯಕ್ಷಳಾದಳಂತೆ!

(ಕ್ಷಣದಲ್ಲಿ ಯಕ್ಷಿಣಿ ಪ್ರತ್ಯಕ್ಷಳಾಗಿದ್ದಾಳೆ. ಓ ಅಷ್ಟೆತ್ತರ ಇದ್ದಾಳೆ)

ಯಕ್ಷಿಣಿ : (ಬಗ್ಗಿ ನೋಡಿ).... ಯಾರೂ....? ಯಾರೂ ನೀವೂ....?

ಸಣ್ಣಮ್ಮ : ನಾನು ಸಣ್ಣಮ್ಮ....

ಯಕ್ಷಿಣಿ : (ನಗೆ) ಸಣ್ಣಮ್ಮನೆಂದು ಕಂಡರೇ ತಿಳಿಯುತ್ತದೆಯಲ್ಲ! ಹ್ಹ ಹ್ಹ ಹ್ಹ....

ಪಂಚರಂಗಿ : ಈಕೆ.... ನನ್ನ ಗೆಳತಿ.

ಯಕ್ಷಿಣಿ : ಅರೇ.... ಪಂಚರಂಗಿಯಲ್ಲವೇ? ಎಲ್ಲಿ ಹೋಗಿದ್ದೀ ಪಂಚರಂಗೀ ಇಷ್ಟು ದಿನ? ಆವತ್ತು ನೀನು ಪೆಟ್ಟು ತಿಂದು ಎಲ್ಲೋ ಹಾರಿ ಹೋದೆ. ಅಮೇಲೆ ನಿನ್ನ ಪತ್ತೆಯಿಲ್ಲ.

(ಸಣ್ಣಮ್ಮ ಬೆರಗಾಗಿ ಇಬ್ಬರನ್ನೂ ನೋಡುತ್ತಾಳೆ)

ಪಂಚರಂಗಿ : ನಮಸ್ಕಾರ. ನೀವಿಷ್ಟು ನೆನಪಿಟ್ಟುಕೊಂಡಿದ್ದೀರಲ್ಲ! ಇವಳೇ ನನ್ನನ್ನು ಅಂದು ಬದುಕಿಸಿದವಳು. ನಮ್ಮ ಸಣ್ಣಮ್ಮನಿಗೆ ಪಶುಪಕ್ಷಿಗಳೆಂದರೆ ಪ್ರೀತಿ, ಗಿಡಮರಗಳೆಂದರೆ ಪ್ರೀತಿ. ನನಗೆ ಗಾಯವಾದಾಗ ರಕ್ಷಣೆ ಮಾಡಿದ್ದರಿಂದ ಅದಕ್ಕೆ ನಾನೇ ಸಾಕ್ಷಿ.

ಯಕ್ಷಿಣಿ : ಹೌದೇ? ಬಹಳ ಸಂತೋಷ. ಸಂತೋಷ. ಆದರೆ ಈಗ ನನ್ನಿಂದೇನಾಗ ಬೇಕಾಗಿದೆ?

(ಚುಡಾಯಿಸಿ ನಗುತ್ತ) ನಾನೋ? ಪ್ರಾಣಿಯೂ ಅಲ್ಲ. ಪಕ್ಷಿಯೂ ಅಲ್ಲ. ನನಗಂತೂ ನಿನ್ನ ರಕ್ಷಣೆ ಬೇಡವಲ್ಲಾ!

ಸಣ್ಣಮ್ಮ : ಯಕ್ಷಿಣೀದೇವಿಯವರೆ, ನಾನು ಬಂದದ್ದು ನಿಮ್ಮ ರಕ್ಷಣೆಗಲ್ಲ. ನಮ್ಮ ನಾಯಿಮರಿಯನ್ನು ಕಾಪಾಡಲು.

ಯಕ್ಷಿಣಿ : ನಾಯಿಮರಿಯೇ!

ಸಣ್ಣಮ್ಮ : ಹೂಂ.... (ಅಳುತ್ತ) ಪಪ್ಪಿ, ನನ್ನ ನಾಯಿಮರಿ. ಆ ಕಿಡಿಗೇಡಿ ಕಳ್ಳರು ಅದನ್ನು ಹೊಡೆದು ಬಡಿದು ಗೀರಿ ಗಾಯಮಾಡಿ ಹಿಂಸೆ ಕೊಟ್ಟಿದ್ದಾರೆ, ಅದು ಈಗಲೋ ಆಗಲೋ ಸಾಯುವಂತಿದೆ.

ಪಂಚರಂಗಿ : (ಸೇಂಕುತ್ತ) ಅದು.... ಬದುಕುವುದೇ ಕಷ್ಟ ಅನ್ನುತ್ತಾರೆ ವೈದ್ಯರು.

ಸಣ್ಣಮ್ಮ : ಬದುಕುವುದಾದರೆ.... ರಾಜಕುಮಾರಿಯನ್ನು ಬದುಕಿಸಿದ ಆ ಮಾಣಿಕ್ಯಮಣಿಯಿಂದ.... ಸಾಧ್ಯ ಅಂತ.... ನಾವು ಯೋಚಿಸಿ ಇಲ್ಲಿಗೆ ಬಂದೆವು... ಅಜ್ಜ ನನಗೆ ಇಡೀ ಕಥೆ ಹೇಳಿದರು..... ಹಾಗಾಗಿ.... ಈ ನಡುರಾತ್ರಿಯಲ್ಲಿ ನನ್ನ ಗೆಳತಿಯೊಂದಿಗೆ ಧೈರ್ಯವಾಗಿ ಬಂದುಬಿಟ್ಟೆ.

ಯಕ್ಷಿಣಿ : ತಡೆಯಿರೀ.... ಸ್ವಲ್ಪ ತಡೆಯಿರೀ.... ದೂರದಲ್ಲಿ ಏನೋ ಸದ್ದು ಕೇಳಿಸುತ್ತಿದೇ.... ಏನು ನೋಡುವೇ....

(ಕಣ್ಣು ಮುಚ್ಚುತ್ತಾಳೆ. ದೂರದಲ್ಲಿ ನಡೆಯುವುದನ್ನು ನೋಡಿದವಳಂತೆ ಗಹಗಹಿಸಿ) ಓಹೋ! ಈ ಕಿಡಿಗೇಡಿಗಳೇ! ನಮ್ಮ ಪಂಚರಂಗಿಯನ್ನು ಹೊಡೆದ ಕಳ್ಳರೂ ಇವರೇ– ಮೈನಾಹಕ್ಕಿಯನ್ನು ಓಡಿಸಿದವರೂ ಇವರೇ. ಪೊಟರೆಗಳಲ್ಲಿ ಕೈ ಹಾಕಿ ಹಕ್ಕಿಮೊಟ್ಟೆಗಳನ್ನು ಹೆಕ್ಕಿ ಒಡೆಯುವ ದುಷ್ಟ ಆಟ ಆಡುವವರೂ ಈ ಕಳ್ಳರೇ. ನಿಮ್ಮ ನಾಯಿಗೂ ಈ ಸ್ಥಿತಿಯನ್ನು ತಂದರೇ?! ನಿಮ್ಮನ್ನು ಹಿಂಬಾಲಿಸಿಕೊಂಡು ಬರುತ್ತಿದ್ದಾರೆ! ಎಲ ಎಲಾ ದುಷ್ಟರೇ, ನಿಮ್ಮನ್ನು ಈಗಿಂದೀಗಲೇ ನೋಡಿಕೊಳ್ಳುತ್ತೇನೆ.

(ಕಣ್ಣು ತೆರೆದು ಎಲ್ಲಿಗೋ ಹೊರಟಂತೆ ರಂಗಕ್ಕೆ ಒಂದು ಸುತ್ತು ಬರುತ್ತಾಳೆ. ಪಂಚರಂಗಿಯೂ, ಸಣ್ಣಮ್ಮನೂ ಅವಳಿಗಡ್ಡ ನಿಂತು)

ಸಣ್ಣಮ್ಮ : (ಕೈ ಮುಗಿದು) ಯಕ್ಷಿಣೀದೇವಿಯವರೇ, ನಿಲ್ಲಿ ನಿಲ್ಲಿ. ನೀವೆಲ್ಲಿಗೂ ಹೋಗಬೇಡಿ. ಅವರಿಗೆ ಸದ್ಯ ಶಿಕ್ಷೆ ವಿಧಿಸಬೇಡಿ. ಅವರ ದುಷ್ಟ ಕೆಲಸಗಳಿಗೆಲ್ಲ ಅಡ್ಡಿ ತಂದರೆ ಸಾಕು. ಈಗ ನನ್ನ ಪಪ್ಪಿ ಬದುಕಬೇಕಾಗಿದೆ. ಅರ್ಜೆಂಟ್ ಹೋಗಬೇಕು. ಆ ಮಾಣಿಕ್ಯಮಣಿ ಕೊಡುವಿರಾ?

ಯಕ್ಷಿಣಿ : ಇದೋ ತಕೋ ಮಗೂ. (ಪೊಟರೆಯೊಳಗೆ ಕೈ ಹಾಕಿ ಮಾಣಿಕ್ಯವನ್ನು ತೆಗೆಯುತ್ತಾಳೆ. ಪೊಟರೆ ಕತ್ತಲಾಗುತ್ತದೆ)

ಸಣ್ಣಮ್ಮ, ನೀನು ಒಳ್ಳೆಯ ಮನಸ್ಸಿನವಳು. ನಿನಗೆ ಇದನ್ನು ಕೊಡಲೇಬೇಕು. ತೆಗೆದುಕೋ. ಹೊರಗೆ ಬಂದದ್ದೇ ಇದರ ಶಕ್ತಿ ಇಮ್ಮಡಿಸಿದೆ. ಕೊಂಡುಹೋಗಿ ನಾಯಿಮರಿಗೆ ಮುಟ್ಟಿಸು ಅದು ಮುಂಚಿನಂತಾಗುತ್ತದೆ.

ಪಂಚರಂಗಿ : (ತಲೆ ತಗ್ಗಿಸಿ ನಮಸ್ಕಾರ ಮಾಡಿ) ನಿಮ್ಮಿಂದ ಬಹಳ ಉಪಕಾರವಾಯಿತು. ಥ್ಯಾಂಕ್ಯೂ!

ಯಕ್ಷಿಣಿ : ಇದೇನು! ಹೊಸ ಭಾಷೆ! ಹ್ಹ ಹ್ಹ ಹ್ಹ! ನಿನ್ನ ಸ್ವಂತ ಭಾಷೆ ಎಲ್ಲಿಗೆ ಓಡಿ ಹೋಯಿತು?.... ಇರಲಿರಲಿ. ಇವಳನ್ನು ಬೇಗ ಕರೆದುಕೊಂಡು ಇಲ್ಲಿಂದ ಹೊರಡು. ಹ್ಞಾಂ ಸಣ್ಣಮ್ಮ, ಮಾಣಿಕ್ಯಮಣಿ ಜೋಪಾನ. ನೆಲಕ್ಕೆ ತಾಗಿಸಬೇಡ. ಭದ್ರ ಹಿಡಿದುಕೋ. ಪಂಚರಂಗೀ.... ಕಷ್ಟ ಬಂದರೆ ನನ್ನನ್ನು ನೆನೆಸಿಕೊಳ್ಳಿ.

ಸಣ್ಣಮ್ಮ : ಆಯಿತು ಯಕ್ಷಿಣೀದೇವಿಯವರೇ, ವಂದನೆ. ನಾವಿನ್ನು ಹೊರಡುತ್ತೇವೆ.

(ಹೊರಡುತ್ತಾರೆ. ಯಕ್ಷಿಣಿ ಮಾಯವಾಗುತ್ತಾಳೆ)

ಪಂಚರಂಗಿ : (ಹಾರುತ್ತ) ಇಡೀ ರಾತ್ರಿ ಹಾರಾಡಿದ್ದಾಯಿತು. ಇನ್ನು ಇಡೀ ಹಗಲು ಹಾರಬೇಕು.

ಸಣ್ಣಮ್ಮ : ಅಷ್ಟರವರೆಗೆ ಪಪ್ಪಿ ಬದುಕು ಉಳಿದಿದ್ದರೆ ಸಾಕು.

## ದೃಶ್ಯ – ೫

(ಅರ್ಧದಾರಿ ಇನ್ನೂ ಉಳಿದಿದೆ. ಪಂಚರಂಗಿಗೆ ಆಯಾಸವಾಗಿದೆ. ಬಾಯಾರಿಕೆಯಾಗಿದೆ. ನೀರು ಹರಿಯುವ ಸದ್ದು)

ಪಂಚರಂಗಿ : ಸಣ್ಣಮ್ಮಾ, ಸ್ವಲ್ಪ ನೀರು ಕುಡಿಯದ ಹೊರತು ನಾನು ಹಾರಲಾರೆ.

ಸಣ್ಣಮ್ಮ : ಹೌದು ಪಂಚರಂಗೀ... ನನಗೂ ಬಾಯಾರಿಕೆ.

ಪಂಚರಂಗಿ : ಹಾಗಾದರೆ ಇಲ್ಲಿಯೇ ನೀರು ಕುಡಿದು ಮುಂದರಿಯೋಣ.

ಸಣ್ಣಮ್ಮ : ಪಂಚರಂಗೀ, ನಮ್ಮ ಬಳಿ ಮಾಣಿಕ್ಯವಿದ್ದೂ ನಮಗೆ ಏಕೆ ಆಯಾಸವಾಗುತ್ತದೆ?

ಪಂಚರಂಗಿ : ಆ ಮಣಿ, ತುರ್ತುಪರಿಸ್ಥಿತಿಗೆ ಮಾತ್ರ. ಅಂದರೆ ಜೀವ ಹೋಗುವ ಗಳಿಗೆಯಲ್ಲಿ

ಮಾತ್ರ ಉಪಯೋಗಕ್ಕೆ ಬರುವಂಥದ್ದು.... ಈಗ ನೀನಿಲ್ಲಿರು. ನಾನು ನೀರು ಕುಡಿದು ಬರುತ್ತೇನೆ. ಆಮೇಲೆ ನೀನು ಕುಡಿದು ಬಾ.

ಸಣ್ಣಮ್ಮ : ನಾನು ಈಗಲೇ ಬರುತ್ತೇನೆ.

ಪಂಚರಂಗಿ : ಆದರೆ ಮಾಣಿಕ್ಯ ಹಿಡಿದು ಹೇಗೆ ಕುಡಿಯುತ್ತಿ?

ಸಣ್ಣಮ್ಮ : ಹೌದಲ್ಲ! ನೆಲದ ಮೇಲೆಯೂ ಇಡುವಂತಿಲ್ಲ. ಸರಿ. ನೀನು ಹೋಗಿ ಬಾ.

(ಸಣ್ಣಮ್ಮ ಒಬ್ಬಳೇ ನಿಂತಿದ್ದಾಳೆ. ಮಂಗಾಣಿ ರೊಯ್ಯನೆ ರಂಗಾಣಿ ಪಿಂಗಾಣಿಯರನ್ನು ತಂದು ಒಂದು ಮೂಲೆಯಲ್ಲಿ ಇಳಿಸುವುದು)

ಪಿಂಗಾಣಿ : ನಮ್ಮ ಝುಟ್‌ಪಟ್ ಲೇಡಿ ನಿಂತಿದ್ದಾಳಲ್ಲಪ್ಪ ಇಲ್ಲಿ! ಸಿಕ್ಕಿಬಿದ್ದೆ ಹುಡುಗೀ.... ಮಂಗಾಣಿ.

ಮಂಗಾಣಿ : ಹುಕುಂ ಆಗಲಿ.

ಪಿಂಗಾಣಿ : ಹುಡುಗಿ ಏಕೆ ಒಬ್ಬಳೇ ಇದ್ದಾಳೆ – ನೋಡು ವಿಷಯ ಏನಂತ. ಉಪಾಯವಾಗಿ ಮಾಣಿಕ್ಯ ಕಸಿದು ತಾ. ನಾವಿಲ್ಲೇ ನಿನ್ನ ನೆರವಿಗೆ ಇರುತ್ತೇವೆ.... ಎಲೆ ಸುತ್ತಿಕೊಂಡು ವೇಷ ಮರೆಸಿಕೊಂಡು ಹೋಗು.

ಮಂಗಾಣಿ : ಇದೋ ಹೋಗಿಯೇ ಬಿಟ್ಟೆ.

* * *

ಮುದುಕ : ಏನೂ ಸಣ್ಣಮ್ಮನವರೂ? ಇಲ್ಲಿದ್ದೀರಿ! ಒಬ್ಬರೇ!

ಸಣ್ಣಮ್ಮ : ಏನಿಲ್ಲ ಮುದುಕಜ್ಜಾ. ಊರಿನ ದಾರಿಯಲ್ಲಿದ್ದೇವೆ. ನಮ್ಮ ಪಂಚರಂಗಿಗೆ ಬಾಯಾರಿಕೆ ಆಯ್ತು. ನೀರು ಕುಡಿಯಲು ಹೋಗಿದ್ದಾಳೆ. ಅವಳು ಬಂದ ಕೂಡಲೆ ನಾನು ಹೋಗುತ್ತೇನೆ.

ಮುದುಕ : ಇಬ್ಬರೂ ಯಾಕೆ ಹೋಗಲಿಲ್ಲ?

ಸಣ್ಣಮ್ಮ : ಕೈಯಲ್ಲಿ ಒಂದು ಮಾಣಿಕ್ಯವಿದೆ. ಕೆಳಗಿಡುವಂತಿಲ್ಲ.

ಮುದುಕ : ಹೌದೋ? ಪಾಪ ಪಾಪ. ಅದಕ್ಕೇನು ಕಷ್ಟ? ನಾನಿರುವುದು ಯಾಕೆ ಮತ್ತೆ? ನೀನು ಬರುವ ತನಕ ಹಿಡಿದುಕೊಂಡಿರುತ್ತೇನೆ. ಕೊಟ್ಟು ನೀನೂ ನೀರು ಕುಡಿದು ಬಾ ಹೋಗು ಪುಟ್ಟಾ.

(ಸಣ್ಣಮ್ಮ ಇನ್ನೇನು ಕೊಡಬೇಕು. ಅಷ್ಟರೊಳಗೆ ಮಂಗಣ್ಣನಿಗೆ ಸಂತೋಷ ಅತಿಯಾಗಿ ತಡೆಯಲಾರದೆ)

ಮುದುಕ : ಟ್‌ರ್ರ್ ಟ್‌ರ್ರ್... ಕೊಡುಕೊಡು ಬೇಗ.... ಟುರ್ರ್ ಟುರ್ರ್...

ಸಣ್ಣಮ್ಮ : (ಬೆಚ್ಚಿಬಿದ್ದು) ಅಯ್ಯೋ, ಇದು ಮಂಗಾಣಿಯ ಸ್ವರ... ಪಂಚರಂಗೀ.... ಬೇಗ ಬಾ. ಮೋಸ ಮೋಸ.... ಕಳ್ಳ....

(ಮಂಗಾಣಿ ಅಟ್ಟಿಸಿಕೊಂಡು ಬರುತ್ತದೆ. ರಂಗಾಣಿ ಪಿಂಗಾಣಿ ಇಬ್ಬರೂ ಅವಳ ಬೆನ್ನಟ್ಟುತ್ತಾರೆ)

ಸಣ್ಣಮ್ಮ : (ಓಡುತ್ತ) ಮಂಗನ ಕೈಗೆ ಮಾಣಿಕ್ಯ ಕೊಡುತ್ತಾರಾ? (ಇನ್ನೊಂದು ಸುತ್ತು ಓಡುತ್ತ) ಫೇರ್ ಫೇರ್ ಮಂಗಣ್ಣ, ಕಡ್ಲೆ ಕಾಯ್ ತಿಮ್ಮಣ್ಣಾ (ಚಾಳಿಸುತ್ತಾಳೆ) (ಪಂಚರಂಗಿ ಓಡಿಬಂದು ನೋಡಿ)

ಪಂಚರಂಗಿ : ತಾಯೀ, ಯಕ್ಷಿಣೀ ದೇವೀ, ಎಲ್ಲಿದ್ದೀ. ಸಣ್ಣಮ್ಮ ಕಷ್ಟದಲ್ಲಿದ್ದಾಳೆ. ಬೇಗ ಬಾ ಬಾ ಬಾ. (ಮಿಂಚು. ಯಕ್ಷಿಣಿದೇವಿ ಪ್ರತ್ಯಕ್ಷಳಾಗುತ್ತಾಳೆ.)

ಯಕ್ಷಿಣಿ : ಕಳ್ಳರೇ, ನಿಲ್ಲಿ ! ಛೂ.... ಮಂತ್ರಕಾಳಿ....

(ಮಂಗಾಣಿ ಪಿಂಗಾಣಿಯವರು ನಿಂತಲ್ಲೇ ಓಡುತ್ತ ನಿಂತಿರುತ್ತಾರೆ) ಹೀಗೇ ಇರಿ. ಒಂದು ಹೆಜ್ಜೆ ಮುಂದಿಡಲು ನಿಮ್ಮಿಂದ ಆಗದಿರಲಿ.

ಸಣ್ಣಮ್ಮ ಬೇಗ ಪಂಚರಂಗಿಯ ಬೆನ್ನೇರು. ನಿನ್ನ ಪಪ್ಪಿ ಕೊನೆಯ ಗಳಿಗೆಯಲ್ಲಿದೆ. ಇವರು ಸ್ವಲ್ಪ ಕಾಲ ಹೀಗೆಯೇ ಇರುತ್ತಾರೆ. (ಸಣ್ಣಮ್ಮ ಗಿಳಿಯ ಬೆನ್ನೇರಿ ಮಾಯ ವಾಗುತ್ತಾಳೆ).

## ದೃಶ್ಯ – ೫

(ಮನೆಯ ಹೊರಗೆ ಜಗಲಿಯ ಮೇಲೆ ಅಜ್ಜಿ ಅಜ್ಜ ಪಪ್ಪಿಯನ್ನಿಟ್ಟುಕೊಂಡು ಬಾಡಿದ ಮುಖದಿಂದ ಸಣ್ಣಮ್ಮನಿಗಾಗಿ ಕಾಯುತ್ತಾ ಇದ್ದಾರೆ)

ಅಜ್ಜಿ : ನಾಯಿಮರಿಯನ್ನು ತಂದು ಸಣ್ಣಮ್ಮನನ್ನು ಕಳೆದುಕೊಂಡ ಹಾಗಾಯಿತು. ಎಲ್ಲಿದ್ದಾಳೋ, ಏನು ಮಾಡುತ್ತಿದ್ದಾಳೋ ಆ ಕಳ್ಳರೇ ಅವಳನ್ನೂ ಪಂಚರಂಗಿ ಯನ್ನೂ ಒಯ್ದಿದ್ದಾರೆ. ಖಂಡಿತ.

ಅಜ್ಜ : ನಾಯಿ ಬೇರೆ ಸಾಯುತ್ತಿದೆ.... ಛೆ. ಅವಳು ಹೋಗಿದ್ದಾದರೂ ಎಲ್ಲಿಗೆ?

ಅಜ್ಜಿ : ಪೊಲೀಸರಿಗೆ ಹೇಳಿದ್ದೀರಾ?

ಅಜ್ಜ : ಹೂಂ.

ಅಜ್ಜಿ : ಕಳ್ಳರ ಮೇಲೆ ಸಂಶಯ ಇದೆ ಅಂತ ಹೇಳಿದ್ದೀರಾ?

ಅಜ್ಜ : (ಸಿಡುಕಿ) ಹೂಂ ಕಣೆ. ಹೇಳಿದೆ?

ನಾಯಿಮರಿ : ಕುಂಯಿ ಕುಂಯಿ....

(ಪಂಚರಂಗಿ ಬಂದಿಳಿಯುತ್ತದೆ. ಸಣ್ಣಮ್ಮ ಓಡಿಯೋಡಿ ಬಂದು)

ಸಣ್ಣಮ್ಮ : ಪಪ್ಪೀ ಇದ್ದೀಯಾ?.... ನೀನು ಸಾಯಲು ನಾನು ಬಿಡುವುದಿಲ್ಲ. (ಮಣಿಯನ್ನು ಅದಕ್ಕೆ ಮುಟ್ಟಿಸುತ್ತಾಳೆ. ನಾಯಿ ಜೀವ ತಾಳುತ್ತದೆ. ಎದ್ದು ನಿಲ್ಲುತ್ತದೆ) ಹೋ ಪಪ್ಪೀ! ನನ್ನ ಮುದ್ದು ಪಪ್ಪೀ! (ಸಣ್ಣಮ್ಮ ಓಡಿ ಹೋಗಿ ಗಿಡ ಮರಗಳಿಗೂ ಮಾಣಿಕ್ಯ ಮುಟ್ಟಿಸುತ್ತಾಳೆ.) ಏಳಿ ಏಳಿ, ಎಲ್ಲ ಏಳಿ.

(ಮುರಿದು ಬಿದ್ದ ಅವೂ ಎಲ್ಲ ಎದ್ದು ನಿಲ್ಲುತ್ತವೆ. ಎಲ್ಲರೂ ಸಂತೋಷದಲ್ಲಿ ಇದ್ದಾಗ ರಂಗಾಣಿ ಪಿಂಗಾಣಿ ಮತ್ತು ಮಂಗಾಣಿಯವರು ಏದುಸಿರು ಬಿಟ್ಟುಕೊಂಡು ಬರುತ್ತಿದ್ದಾರೆ. ಪಂಚರಂಗಿ ಇದನ್ನು ನೋಡಿ ಏನೋ ಲೆಕ್ಕ ಹಾಕಿ ಅಲ್ಲಿಂದ ಹಾರಿಹೋಗುತ್ತದೆ)

ಪಿಂಗಾಣಿ : ಅಗೋ, ನಾನು ಹೇಳಿದ್ದು ಎಲ್ಲಿಗೆ ಬಂತು. ಅಂತೂ ಬದುಕಿಸಿದಳು. ಮಂಗಾಣಿ, ಅತ್ತಿಂದ ಹಾರು. ನಾಯಿಯನ್ನು ಕಸಿ, ರಂಗಾಣಿ ಇತ್ತಿಂದ ಹಾರು. ಅಜ್ಜ ಅಜ್ಜಿಯನ್ನು ತಡೆ. ನಾನು ಸಣ್ಣಮ್ಮನಿಂದ ಮಣಿ ಕಸಿಯುತ್ತೇನೆ....

(ದಾಳಿ ಮಾಡುವ ಅವರ ಮೇಲೆ ಈಗ ಧೈರ್ಯದಿಂದ ನಾಯಿ ಎಗರಿ ಹೋಗುತ್ತದೆ. ಇತ್ತ ಪಂಚರಂಗಿ ಮುಸ್ತಫಾ ಮತ್ತು ಪೊಲೀಸರೊಂದಿಗೆ ಬರುತ್ತದೆ.)

ಮುಸ್ತಫಾ : ನೋಡಿ, ಇವರೇ ಆ ಕಳ್ಳರು.

ಪಂಚರಂಗಿ : ಹಿಡಿದು ಬಿಡಿ, ಏನು ನೋಡುತ್ತೀರಿ?

ಮುಸ್ತಫಾ : ನೀವಂತೂ ಹಿಡಿಯಲಿಲ್ಲ. ನಾವು ಹಿಡಿದುಕೊಟ್ಟರೂ ಮೇಲೆ ಕೆಳಗೆ ನೋಡುತ್ತೀರಲ್ಲ.

ಮಂಗಾಣಿ : (ಪೊಲೀಸರು ಬಂಧಿಸಲು ಹತ್ತಿರ ಬರುತ್ತಿದ್ದಂತೆ) ಅಯ್ಯಪ್ಪಾ! ಮನುಷ್ಯರ ಸಹವಾಸ ಸಾಕು. ನಾನಿಲ್ಲಿಂದ ಓಡುತ್ತೇನೆ.... ಮರ ಹತ್ತಿ ಕುಳಿತುಕೊಳ್ಳುತ್ತೇನೆ. (ಹಾರಿ ಮರ ಹತ್ತಿ ಕುಳಿತುಕೊಳ್ಳುತ್ತದೆ) (ಪೊಲೀಸರು ಉಳಿದಿಬ್ಬರನ್ನು ಬಂಧಿಸಿಕೊಂಡು ಹೋಗುತ್ತಾರೆ)

ನಾಯಿಮರಿ : ಸಣ್ಣಮ್ಮ, ಹಸಿವು.... ಬಾಯಾರಿಕೆ.

ಸಣ್ಣಮ್ಮ : ಪಪ್ಪೀ, ಹಸಿವು.... ಬಾಯಾರಿಕೆ.

ಪಂಚರಂಗಿ : ಅಜ್ಜಾ ಅಜ್ಜೀ.... ಹಸಿವು ಬಾಯಾರಿಕೆ.

ಅಜ್ಜಿ : (ನಗುತ್ತ) ತಿಂಡಿ ಬೇಕೇ? ತೀರ್ಥ ಬೇಕೇ?

ನಾಯಿಮರಿ : ಎಲ್ಲ ಬೇಕು.

(ಎಲ್ಲರೂ ನಲಿಯುವರು)

ಸಣ್ಣಮ್ಮ : ನಾಯಿ ಮರಿ ನಾಯಿ ಮರಿ
ತಿಂಡಿ ಬೇಕೇ

ಪಪ್ಪಿ : ತಿಂಡಿ ಬೇಕು ತೀರ್ಥ ಬೇಕು
ಎಲ್ಲ ಬೇಕು

ಅಜ್ಜ : ನಾಯಿ ಮರಿ ನಿನಗೆ ತಿಂಡಿ
ಏಕೆ ಬೇಕು?

ಪಪ್ಪಿ : ತಿಂದು ಗಟ್ಟಿಯಾಗಿ
ಮನೆಯ ಕಾಯಬೇಕು.

ಪಂಚರಂಗಿ : ನಾಯಿ ಮರಿ ಕಳ್ಳ ಬಂದ
ರೇನು ಮಾಡುವೆ?

ಪಪ್ಪಿ : ಬಕ್ ಬೌ ಬೌ ಎಂದು
ಕೂಗಿಯಾಡುವೆ

ಅಜ್ಜಿ : ನಾಯಿ ಮರಿ ತಾಳು ನಿನಗೆ
ತಿಂಡಿ ತರುವೆನು

ಪಪ್ಪಿ : ತಾ ನಿನ್ನ ಮನೆಯ ನಾನು
ಕಾಯುತಿರುವೆನು.